ಶ್ರೀ ಜೆ.ಹೆಚ್. ಪಟೇಲ್ : ವಿವರವಾದ ಹೇಳಿಕೆಯನ್ನು ತರುವುದಕ್ಕೆ ಕಳುಹಿಸಿದ್ದೇನೆ. ಬಂದ ನಂತರ ಕೊಡುತ್ತೇನೆ.

ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ವಿತರಣೆಯಲ್ಲಿ ತಾರತಮ್ಯ

\+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ ಇವತ್ತಿನ ದಿವಸ, ಪ್ರೊಫೆಷನಲ್ ಕೋರ್ಸ್‌ಗಳ ವಿಷಯದಲ್ಲಿ ಒಂದು ದೊಡ್ಡ ಗೊಂದಲ ಬಂದಿದೆ. ಸೀಟು ಹಂಚಿಕೆ ವಿಷಯದಲ್ಲಿ ನಿಗದಿತವಾದಂಥ ಅಥವಾ ಕಟ್ಟುನಿಟ್ಟಾದ ಕಾನೂನು ನಮ್ಮ ರಾಜ್ಯದಲ್ಲಿ ಇಲ್ಲದೇ ಇರುವ ಕಾರಣ ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್ ಹಾಗೂ ಮತ್ತಿತರ ಪ್ರೊಫೆಷನಲ್ ಸೀಟುಗಳ ಹಂಚಿಕೆಯಲ್ಲಿ ಸ್ಥಿರತೆ ಇಲ್ಲ ಮತ್ತು ಯಾವ ಪ್ರಕಾರ ಹೋಗಬೇಕೆನ್ನುವ ಬಗ್ಗೆ ಮಾರ್ಗದರ್ಶನ ಇಲ್ಲದಂತಾಗಿದೆ. ಮೊದಲಿನಿಂದಲೂ ಎಕ್ಸಿಕ್ಯುಟಿವ್ ಆರ್ಡರ್‌ರನ್ನು ಇಶ್ಯೂ ಮಾಡಿಕೊಂಡು ಅದರ ಮೇಲೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೀಟುಗಳನ್ನು ನಿಗದಿ ಮಾಡತಕ್ಕಂಥಾದ್ದು ಮತ್ತು ಅದನ್ನು ಮೆಡಿಕಲ್ ಕೌನ್ಸಿಲ್‌ನವರು ಒಪ್ಪಿಕೊಳ್ಳತಕ್ಕಂಥಾದ್ದು ನಡೆದುಕೊಂಡು ಬರುತ್ತಿತ್ತು. ಪ್ರತಿ ಸಲವೂ ಗೌರ್ನಮೆಂಟ್ ಆರ್ಡರ್ ವಿರುದ್ಧ ಹೈಕೋರ್ಟ್‌ನಲ್ಲಿ ಅಥವಾ ಸುಪ್ರೀಮ್ ಕೋರ್ಟ್‌ನಲ್ಲಿ ಕೇಸ್ ಹಾಕಿ ತಡೆ ತರತಕ್ಕಂಥಾದ್ದು ನಡೆಯುತ್ತಲೇ ಇದೆ. ಸರ್ಕಾರವೇ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ಮೆಡಿಕಲ್ ಕಾಲೇಜುಗಳಿಗೆ ಒಟ್ಟು 2575 ಸೀಟುಗಳನ್ನು ನಿಗದಿ ಮಾಡಿ ಅದರ ಪ್ರಕಾರ ವಿದ್ಯಾರ್ಥಿಗಳಿಗೆ ಇಂಟರ್‌ವ್ಯೂ ಮಾಡಿ ಸೀಟುಗಳನ್ನು ಅಲಾಟ್ ಮಾಡಲಾಗಿದೆ. ಆದರೆ, ಇದರ ಬಗ್ಗೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಸುಪ್ರೀಮ್ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ನಾವು ನಿಗದಿ ಮಾಡಿರುವುದು 1962 ಸೀಟುಗಳನ್ನು ಮಾತ್ರ, ಆದರೆ, ಅದರ ಬದಲಾಗಿ 2575 ಸೀಟುಗಳನ್ನು ಹಂಚಿಕೆ ಮಾಡಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಇದರ ಪ್ರಕಾರ ಸರ್ಕಾರ ಅಲಾಟ್ ಮಾಡಿರುವ ಸೀಟಿಗೂ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಫಿಕ್ಸ್ ಮಾಡಿರುವ ಸೀಟಿಗೂ 613 ಸೀಟುಗಳು ವ್ಯತ್ಯಾಸ ಬರುತ್ತದೆ. ಅಂದರೆ, ಈಗಾಗಲೇ ಇಂಟರ್‌ವ್ಯೂನಲ್ಲಿ ಭಾಗವಹಿಸಿ ಸೆಲೆಕ್ಟ್ ಆಗಿರುವ 613 ವಿದ್ಯಾರ್ಥಿಗಳಿಗೆ ಸೀಟು ಸಿಗುವುದಿಲ್ಲ ಎಂದಾಯಿತು. ಈ ರೀತಿ ಸೆಲೆಕ್ಟ್ ಆಗಿರುವ 613 ಜನ ವಿದ್ಯಾರ್ಥಿಗಳು, ನಾವು ಮೆಡಿಕಲ್ ಸೀಟಿಗೆ ಸೆಲೆಕ್ಟ್ ಆಗಿರುವುದರಿಂದ ವೆಟರ್‌ನರಿ ಅಥವಾ ಅಗ್ರಿಕಲ್ಚರ್ ಕೋರ್ಸ್‌ಗಳಿಗೆ ಹೋಗುವುದ ಬೇಡವೆಂದು ಅವರು ಅಲ್ಲೂ ಅಟೆಂಡ್ ಮಾಡಿಲ್ಲ. ಹಾಗೂ ಮೆಡಿಕಲ್ ಸೀಟು ಸಿಕ್ಕಿರುವಂಥವರು ಇಂಜಿನಿಯರಿಂಗ್ ಸೀಟುಗಳಿಗೂ ಕನ್‌ಸೆಂಟನ್ನು ಕೊಟ್ಟಿಲ್ಲ. ಇವತ್ತು ಈ ರೀತಿ ಆಗಿರುವುದರಿಂದ ಮಕ್ಕಳನ್ನು ಕೊಲೆ ಮಾಡಿದ ಹಾಗೆ ಆಗಿದೆ. ಮಕ್ಕಳನ್ನು ಪ್ರೋತ್ಸಾಹದಿಂದ ಬೆಳೆಸುವುದನ್ನು ಬಿಟ್ಟು ಅದರ ಬೆಳವಣಿಗೆಗೆ ಅಡ್ಡಿ ಬರುವುದಾದರೆ ಇದರ ಬಗ್ಗೆ ಖಂಡಿತವಾಗಿ ಸರ್ಕಾರದ ಲಕ್ಷ್ಯ ಇಲ್ಲವೆಂದು ನಾನು ಹೇಳಬೇಕಾಗುತ್ತದೆ. ಹಿಂದಿನಿಂದಲೂ ಇದೇ ರೀತಿ ನಡೆದುಕೊಂಡು ಬರುತ್ತಿರುವುದು ಸರ್ಕಾರಕ್ಕೆ ಗೊತ್ತಿದೆ. ನಮ್ಮ ಸರ್ಕಾರ ಇದ್ದಾಗಲೂ

ಎಕ್ಸಿಕ್ಯೂಟಿವ್ ಆರ್ಡ್‌ರ್ ಇತ್ತು, ಅದು ಕ್ಯಾಷ್ ಆಗುತ್ತಲೇ ಬರುತ್ತಿತ್ತು. ಇವತ್ತಿನ ದಿವಸಗಳಲ್ಲಿ ಯಾರಿಗಾದರೂ ಸೀಟು ಸಿಗದೇ ಇದ್ದರೆ, ಅಂದರೆ, ರಾಜ್ಯದವರಿಗೆ ಸೀಟು ಸಿಗಲಿಲ್ಲವೆಂದರೂ ಹೈಕೋರ್ಟ್‌ಗೆ ಹೋಗುತ್ತಾರೆ, ಎನ್.ಆರ್.ಐ., ನವರಿಗೆ ಸೀಟು ಸಿಗಲಿಲ್ಲವೆಂದರೂ ಅವರೂ ಕೋರ್ಟ್‌ಗೆ ಹೋಗುತ್ತಾರೆ, ಪಕ್ಕದ ರಾಜ್ಯದವರಿಗೆ ಸೀಟು ಸಿಗಲಿಲ್ಲವೆಂದರೂ ಅವರೂ ಕೋರ್ಟ್‌ಗೆ ಹೋಗುತ್ತಾರೆ, ಎ.ಬಿ.ಸಿ.ಡಿ., ಕ್ಯಾಟಗರಿಯಲ್ಲಿ ಕನ್ಸಿಡರ್ ಮಾಡದೇ ಇದ್ದರೂ ಅದಕ್ಕೆ ಸಂಬಂಧ ಪಟ್ಟಂಥವರು ಕೋರ್ಟ್‌ಗೆ ಹೋಗುತ್ತಾರೆ. ಈ ರೀತಿ ಪ್ರತಿಯೊಂದು ವಿಷಯಕ್ಕೂ ಜನರು ಕೋರ್ಟ್‌ಗೆ ಹೋಗುತ್ತಿದ್ದರೂ ಇದರ ಬಗ್ಗೆ ಕಟ್ಟುನಿಟ್ಟಾದ ಒಂದು ಆ್ಯಕ್ಟ್‌ನ್ನು ಇದುವರೆಗೆ ಏಕೆ ತರಲಿಲ್ಲ? ಇಲ್ಲಿ ಆ್ಯಕ್ಟ್ ತಂದರೆ ಅದರ ವಿರುದ್ಧ ಎಂ.ಸಿ.ಐ.ನವರು ಆಟ ಆಡುವುದಕ್ಕಾಗುವುದಿಲ್ಲ. ಎಂ.ಸಿ.ಐ., ಕೂಡಾ ಒಂದು ರೆಕಮೆಂಡೇಟರಿ ಬಾಡಿ ಅಷ್ಟೇ. Ultimately, the Government of India is the supreme authority ಎಂ.ಪಿ.ಐ., ಒಂದು ರೆಕಮೆಂಡೇಟರಿ ಬಾಡಿ ಇದ್ದರೂ ಕೂಡ ಅವರ ಮಾತಿಗೆ ಕೇಂದ್ರ ಸರ್ಕಾರದವರು ಮನ್ನಣೆ ಕೊಡುವುದು ಏತಕ್ಕೆಂದರೆ ಇವತ್ತು ಡೀವಿಯೇಷನ್ ರೆಕಮೆಂಡೇಷನ್ ಮಾಡಿದರೂ ಅದರ ವಿರುದ್ಧ ಅಲಿಗೇಷನ್ಸ್ ಬರುತ್ತದೆ, ಮಕ್ಕಳ ಹಿತದೃಷ್ಟಿಯಿಂದ ಅಥವಾ ವಾಸ್ತವಿಕವಾದ ರಿಪೋರ್ಟ್ ತೆಗೆದುಕೊಂಡು ನಿಗದಿತ ಸೀಟುಗಳನ್ನು ಹೆಚ್ಚು ಕಡಿಮೆ ಮಾಡಿದರೆ ಸ್ಟ್ರಿಕ್ಚರ್ ಬರುವ ಸಾಧ್ಯತೆಗಳಿವೆ. ಈ ಸ್ಟ್ರಿಕ್ಚರ್ ಬರಬಹುದೆಂದು ಹೆದರಿಕೊಂಡು ಎಂ.ಸಿ.ಐ. ನವರ ಮಾತನ್ನು ಕೇಂದ್ರ ಸರ್ಕಾರದವರು ಕೇಳುತ್ತಾರೆ. ಅದೇ ರೀತಿ ಇಂಜಿನಿಯರಿಂಗ್ ವಿಷಯದಲ್ಲಿ ಆಲ್ ಇಂಡಿಯಾ ಟೆಕ್ನಿಕಲ್ ಕೌನ್ಸಿಲ್‌ನವರು ರೆಗ್ಯುಲೇಟ್ ಮಾಡುತ್ತಾರೆ. ಉಳಿದ ಪ್ರೊಫೆಷನಲ್ ಕೋರ್ಸ್‌ಗಳು, ಬಿ, ಫಾರ್ಮ ಇರಬಹುದು, ಡಿ.ಫಾರ್ಮಾ ಇರಬಹುದು, ಬಿ.ಎಡ್, ಇರಬಹುದು, ಇವಕ್ಕೂ ಅದೇ ರೀತಿ ರೆಕಮೆಂಡೇಷನ್ಸ್ ಬರುತ್ತಿವೆ. ಯಾವುದೋ ಸಣ್ಣ ಪುಟ್ಟ ವಿಚಾರದಲ್ಲಿ ಸರ್ಕಾರದವರು ತರಾತುರಿಯಿಂದ ಆರ್ಡಿನೆನ್ಸ್ ತರುವುದು ಮತ್ತು ಕಾನೂನಿಗೆ ತಿದ್ದುಪಡಿ ತರುವ ಕೆಲಸವನ್ನು ಮಾಡುತ್ತಾರೆ, ಆದರೆ, ಮಕ್ಕಳ ಜೀವನಕ್ಕೆ ನೇರವಾಗಿ ಸಂಬಂಧಪಟ್ಟಿದ್ದಾಗಿದ್ದು, ವಿದ್ಯಾರ್ಥಿಗಳ ಭವಿಷ್ಯತ್ತಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದರೂ ಇದರ ಬಗ್ಗೆ ಚಿಂತನೆ ಮಾಡಿ ಕಾನೂನು ತರದೆ ಸುಮ್ಮನೆ ಏಕೆ ಕುಳಿತಿದ್ದಾರೆ? ಇವರು ಅಧಿಕಾರಕ್ಕೆ ಬಂದ ಮೊದಲ ವರ್ಷದಲ್ಲಿ ಇದರ ಬಗ್ಗೆ ಗೊತ್ತಾಗದೇ ಇದ್ದುದರಿಂದ ಕಾನೂನು ತರಲಿಲ್ಲವೆಂದು ನಾವು ಭಾವಿಸಿಕೊಂಡರೂ ಎರಡನೇ ವರ್ಷ ಏಕೆ ಕಾನೂನು ಮಾಡಲಿಲ್ಲ? ಈ ವರ್ಷವಾದರೂ ಏಕೆ ಮಾಡಲಿಲ್ಲ? ಇದರ ಬಗ್ಗೆ ಕಾನೂನು ಮಾಡಲು ಸರ್ಕಾರಕ್ಕೆ ಆಸಕ್ತಿ ಇಲ್ಲವೇ ಅಥವಾ ಮನಸ್ಸು ಇಲ್ಲದೇ ಅಥವಾ ನಾವು ಮಾಡಿದ್ದು ನಡೆಯುತ್ತದೆ ಎನ್ನುವ ಧೋರಣೆ ಇದೆಯಾ? ಈ ವರ್ಷ ಸರ್ಕಾರ 2575 ಸೀಟುಗಳಿಗೆ ರೆಕಮೆಂಡೇಷನ್ ಮಾಡಿದ್ದರೂ ಅದಕ್ಕೆ ಮನ್ನಣೆ ಸಿಗಲಿಲ್ಲ. ರಾಜ್ಯ ಸರ್ಕಾರ ಶಿಫಾರಸ್ ಮಾಡಿದ ಸೀಟುಗಳಿಗೆ ಗೌರ್ನಮೆಂಟ್ ಆಫ್ ಇಂಡಿಯಾ ಮನ್ನಣೆ ಕೊಟ್ಟು ಎಂ.ಸಿ.ಐ.ಗೆ ಡೈರೆಕ್ಷನ್ ಮಾಡಿದಾಗ ಮಾತ್ರ ಮನ್ನಣೆ ಸಿಗುತ್ತದೆ. ಈ ರೀತಿಯಾಗಿರುವುದರಿಂದ ಇವತ್ತಿನ ದಿವಸ ನಮ್ಮ ರಾಜ್ಯ ಸರ್ಕಾರ ನಿಜವಾಗಲೂ ನಗೆಪಾಟಲಿಗೆ ಈಡಾಗಿದೆ. ಎರಡನೇ ಸಾರಿ ಇಂಟರ್‌ವ್ಯೂ ಮಾಡಲಾಗುತ್ತದೆಂದು ತಿಳಿದಾಗ ನಮ್ಮ ಜೀವನದ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆಯೆಂದು ಸರ್ಕಾರಕ್ಕೆ, ಶಾಸಕರುಗಳಿಗೆ ಹಾಗೂ ರಾಜಕಾರಣಿಗಳಿಗೆ ಎಲ್ಲಾ ವಿದ್ಯಾರ್ಥಿಗಳು

ಬಯ್ಯುತ್ತಾರೆ. ಏಕೆಂದರೆ, ಇದರ ಪರಿಣಾಮ ಇಂಜಿನಿಯರಿಂಗ್, ಅಗ್ರಿಕಲ್ಚರ್ ಯೂನಿವರ್ಸಿಟಿಯ ವೆಟರ್‌ನರಿ ಸೀಟುಗಳಾಗಿರಬಹುದು, ಬಿ.ಎಸ್.ಸಿ., ಎ.ಜಿ. ಆಗಿರಬಹುದು ಇದರ ಮೇಲೆ ಪರಿಣಾಮ ಬೀಳುತ್ತದೆ. ಮೆಡಕಲ್‌ನಲ್ಲಿ ಸೆಲೆಕ್ಟ್ ಆಗದೇ ಇದ್ದಿದ್ದರೆ ಅಂಥಾ ವಿದ್ಯಾರ್ಥಿಗಳು ಬೇರೆ ಪ್ರೊಫೆಷನಲ್ ಕೋರ್ಸ್‌ಗಳಿಗೆ ಅಂದರೆ, ಡೆಂಟಲ್ ಕೋರ್ಸ್‌ಗೆ ಹೋಗುತ್ತಿದ್ದರು ಅಲ್ಲೂ ಸಿಗಲಿಲ್ಲವೆಂದರೆ ಇಂಜಿನಿಯರಿಂಗ್‌ಗೆ ಹೋಗುತ್ತಿದ್ದರು, ಅಲ್ಲೂ ಸಿಗಲಿಲ್ಲವೆಂದರೆ ವೆಟರ್ನರಿಗೆ ಹೋಗುತ್ತಿದ್ದರು, ಅಲ್ಲೂ ಸಿಗಲಿಲ್ಲವೆಂದರೆ ಬಿ.ಎಸ್.ಸಿ.,ಅಗ್ರಿಕಲ್ಚರ್‌ಗೆ ಹೋಗುತ್ತಿದ್ದರು, ಹೀಗೆ ಇದು ಅವರ ಮಾರ್ಕ್ಸ್ ಮತ್ತು ಮೆರಿಟ್ ಮೇಲೆ ಅವರ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಈ ವಿಷಯದ ಬಗ್ಗೆ ಸರ್ಕಾರಕ್ಕೆ ಗೊತ್ತಿದ್ದೂ ಕೂಡಾ ಪದೇ ಪದೇ ಏಕೆ ಈ ರೀತಿ ಮಾಡಲಾಗುತ್ತಿದೆಯೆಂಬುದು ನನಗೆ ಗೊತ್ತಿಲ್ಲ. ಎಂ.ಸಿ.ಐ.ನವರು ಏನಾದರು ಸುಪ್ರೀಮ್ ಕೋರ್ಟ್‌ಗೆ ಮನವಿಯನ್ನು ಸಲ್ಲಿಸಿದರೆ ನಮಗೆ ತೊಂದರೆಯಾಗುತ್ತದೆಂದು ಗೊತ್ತಿದ್ದರೂ ಕೂಡ ಇಂಟರ್‌ವ್ಯೂ ಏಕೆ ಮಾಡಬೇಕಾಗಿತ್ತು? ಸಾವಿರಾರು ವಿದ್ಯಾರ್ಥಿಗಳನ್ನು ಕರೆದು ಅವರಿಗೆ ಕೌನ್ಸಿಲಿಂಗ್ ಏಕೆ ಮಾಡಬೇಕಾಗಿತ್ತು? ಇಷ್ಟೇ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೆಂದು ಒಂದು ಖಚಿತವಾದ ಅಭಿಪ್ರಾಯಕ್ಕೆ ಬಂದ ಮೇಲೆ ಸರ್ಕಾರದವರು ಈ ಕೆಲಸ ಮಾಡಬಹುದಾಗಿತ್ತು. ಕೌನ್ಸಿಲಿಂಗ್ ಮಾಡಿಯಾದ ಮೇಲೆ ಪುನಃ ಇವತ್ತು ರೀ-ಕೌನ್ಸಿಲಿಂಗ್ ಮಾಡುವುದಾದರೆ, ಹೊರಗಡೆ ರಾಜ್ಯಗಳಿಂದ ಬರತಕ್ಕಂಥ ವಿದ್ಯಾರ್ಥಿಗಳು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬರಬೇಕಾಗುತ್ತದೆ, ನಮ್ಮ ರಾಜ್ಯದ ಬೀದರ್, ಗುಲ್ಬರ್ಗಾ, ನಾರ್ತ್ ಕೆನರಾ, ಸೌತ್ ಕೆನರಾ ಮತ್ತು ಬೆಳಗಾಂನಿಂದ ಬರತಕ್ಕಂಥ ವಿದ್ಯಾರ್ಥಿಗಳೂ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಬೆಂಗಳೂರಿಗೆ ಅನೇಕರು ಇಂಟರ್‌ವ್ಯೂಗೆ ಬರುವುದೇ ಕಷ್ಟ. ಅಂಥಾದ್ದರಲ್ಲಿ ಅವರನ್ನು ಹತ್ತತ್ತು ಸಲ ಇಲ್ಲಿಗೆ ಕರೆಸಿ, ಇಲ್ಲಿ ಇಂಟರ್‌ವ್ಯೂ ಮಾಡತಕ್ಕಂಥಾದ್ದು, ಕೌನ್ಸಿಲಿಂಗ್ ಮಾಡತಕ್ಕಂಥಾದ್ದು ಇತ್ಯಾದಿ ಮಾಡಿದರೆ ಇದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ನೀವೇ ಹೇಳಬೇಕು. ಇವೊತ್ತು ಇದು ಸುಪ್ರೀಂಕೋರ್ಟ್‌ಗೂ ಕೂಡ ಹೋಗಿದೆ ಎಂದು ಗೊತ್ತಾದಮೇಲೆ ತಾವು ಕನಿಷ್ಟಪಕ್ಷ ಹೈಕೋರ್ಟಿನ ತೀರ್ಮಾನಕ್ಕೆ ಸೀಮಿತವಾಗಿ ಇರಬಹುದಾಗಿತ್ತು. ಎಂಸಿಐ ನವರು ಹಠ ಹಿಡಿದಿದ್ದಾರೆ ಎಂಬುದು ತಮಗೆ ಗೊತ್ತು. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಸುಪ್ರೀಂ ಕೋರ್ಟಿಗಿಂತ ನಾವೇ ಹೆಚ್ಚು ಎಂದು ತಿಳಿದುಕೊಂಡ ಹಾಗೆ ಬಿಹೇವ್ ಮಾಡುತ್ತಾ ಇದ್ದಾರೆ. ಅವರೂ ಕೂಡ ಹೇಗೆ ಮಾಡುತ್ತಾರೆ ಅಂದರೆ, ಅವರಿಗೆ ಎಲ್ಲಿ ಅನುಕೂಲವೋ, ಯಾರು ಬೇಕಾದವರೋ, ಅವರಿಗೆ ಇಂಟೇಕ್ ಅವರು ಹೇಳಿದ ಹಾಗೆ ಫಿಕ್ಸ್ ಮಾಡಿಕೊಡುತ್ತಾರೆ. ಐದಾರು ಹೆಚ್ಚು ಕಡಿಮೆ ಮಾಡಿಕೊಡುತ್ತಾರೆ. ಆದರೆ ಯಾರು ಅವರಿಗೆ ಫೇವರ್ ಇಲ್ಲ, ಅಥವಾ ಅವರಿಗೆ ಸಂಬಂಧವಿಲ್ಲ, ಅಥವಾ ಅವರೊಂದಿಗೆ ಅಷ್ಟಾಗಿ ಸಹಕರಿಸ ಬೇಕೆಂಬ ಭಾವನೆಯು ಅವರಲ್ಲಿ ಇಲ್ಲ, ಅಂಥವರಿಗೆ ಇಂಟೇಕನ್ನು ಕಡಿಮೆ ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ಅದಕ್ಕೆ ನಿಮ್ಮ ಕರ್ತವ್ಯ ಏನೆಂದರೆ, ಒಂದು ಸಾರಿ ಮೆಡಿಕಲ್ ಕೌನ್ಸಿಲ್ ಆಕ್ಟ್ ಅಸ್ತಿತ್ವಕ್ಕೆ ಬಂದಮೇಲೆ, ಆ ಆಕ್ಟ್ ಪ್ರಕಾರವಾದರೂ ನೀವು ನಡೆದುಕೊಳ್ಳ ಬೇಕು. ನಿಮಗೆ ಆಗ ಎಕ್ಸಿಕ್ಯುಟಿವ್ ಆರ್ಡರ್ ತರತಕ್ಕಂಥ ಅಧಿಕಾರವಿಲ್ಲ. ಏಕೆಂದರೆ ಸರಕಾರದ ಆರ್ಡರ್ ಏನಿದೆ, ಅದು ಮೆಡಿಕಲ್

ಕೌನ್ಸಿಲ್ ಆಕ್ಟ್‌ನ ಮುಂದೆ ನಿಲ್ಲುವುದಿಲ್ಲ. ನೀವು ನಿಮ್ಮದೇ ಆದಂಥ ಒಂದು ಆಕ್ಟ್‌ನ್ನು ಮಾಡಿ, ನೀವು ಯಾವರೀತಿಯಾಗಿ ಸೀಟ್‌ಗಳನ್ನು ತೆಗೆದುಕೊಳ್ಳ ಬೇಕು, ಎಷ್ಟು ಕಾಲೇಜುಗಳಿಗೆ ಎಷ್ಟು ಇಂಟೇಕ್. ಎಷ್ಟು ಡೇಟ್‌ಗೆ ಎಷ್ಟು ಸೀಟುಗಳು ಎಂಬುದನ್ನು ನಿಮ್ಮ ಆಕ್ಟ್‌ನಲ್ಲಿಯೇ ನೀವು ಫಿಕ್ಸ್ ಮಾಡಿಕೊಳ್ಳಬಹುದು. ಆ ಒಂದು ಕಲಂನ್ನು ಜಾರಿಯಲ್ಲಿ ತಂದರೆ ಪದೇ ಪದೇ ಸ್ಟ್ರೈಕ್‌ಡೌನ್ ಮಾಡಲು ಯಾವ ಕೋರ್ಟ್‌ಗೂ ಆಗುವುದಿಲ್ಲ. In absence of law they are doing all these things ಏಕೆಂದರೆ ನಮ್ಮಲ್ಲಿ ಒಂದು ಎಕ್ಸಿಕ್ಯುಟಿವ್ ಆರ್ಡರ್ ಇರುತ್ತದೆ, ಅದಕ್ಕೆ ಯಾವ ಕಾನೂನಿನ ಗೊಂದಲವೂ ಇರುವುದಿಲ್ಲ, ಇವರು ಕೆಲವರಿಗೆ 130 ಫಿಕ್ಸ್ ಮಾಡುತ್ತಾರೆ. ಮತ್ತೆ ಕೆಲವರಿಗೆ 180 ಫಿಕ್ಸ್ ಮಾಡುತ್ತಾರೆ. ಬೇಕಾದವರಿಗೆ 230 ಮಾಡುತ್ತಾರೆ. ಇನ್ನೂ ಕೆಲವು ಬೇಕಾದವರಿಗೆ 340 ಮಾಡುತ್ತಾರೆ. ಕಾಲೇಜುಗಳನ್ನು ಬೈಫರ್‌ಕೇಟ್ ಮಾಡುತ್ತಾರೆ. ಅವರಿಗೂ ಕೂಡ ಇಷ್ಟೇ ಬೇಕು. ಇವೊತ್ತು ಏನಾಗಿದೆ ಅಂದರೆ, ಹೈಕೋರ್ಟ್‌ನವರಾಗಲೀ, ಸುಪ್ರೀಂಕೋರ್ಟ್‌ನವರಾಗಲೀ, ಅನೇಕಸಾರಿ ಇದರ ಬಗ್ಗೆ ಪ್ರಿಜ್ಯುಡಿಷಿಯಲ್ ವ್ಯೂನಿಂದಾದರೂ ನೋಡುತ್ತಾರೆ, ಬಗ್ಗೆ ಚಿಂತೆ ಇಲ್ಲ. ಆದರೆ ಯಾರು ಮೆರಿಟ್ ಮೇಲೆ ಬಂದಿರುತ್ತಾರೆ, ನಮ್ಮ ರಾಜ್ಯದ ಮಕ್ಕಳೇ ಇದ್ದಾರೆ, ಅವರ ಬಗ್ಗೆ ನಾವು ಅನುಕಂಪವನ್ನು ತೋರಿಸ ಬೇಕಾಗುತ್ತದೆ. ಅವರ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಅವರು ತಮ್ಮ ಸಿಲೆಬಸ್ ಹೇಗೆ ಕವರ್ ಮಾಡಬೇಕು, ಹೇಗೆ ಓದಬೇಕು? ಅದರಲ್ಲಿಯೂ ಕಾಲೇಜುಗಳಲ್ಲಂತೂ, ಪರ್ಟಿಕ್ಯುಲರ್ ಆಗಿ ಡೆಂಟಲ್ ಕಾಲೇಜುಗಳಲ್ಲಿ ಸಾಕಷ್ಟು ಕಡೆಗಳಲ್ಲಿ ಶಿಕ್ಷಕರುಗಳಿಲ್ಲ. ಆ ಕಾಲೇಜುಗಳಲ್ಲಿ ಪಾರ್ಟ್‌ಟೈಂ ತೆಗೆದುಕೊಳ್ಳಲು ಅವಕಾಶವಿಲ್ಲ. ಏಕೆಂದರೆ ಎಂಸಿಐ ದವರು ಗವರ್ನ್‌ಮೆಂಟ್‌ನವರು ಹೋಗಿ ಅವರಿಗೆ ಹೆರಾಸ್‌ಮೆಂಟ್ ಮಾಡುತ್ತಾರೆ, ಎಂದು ಅವರು ಒಂದೇ ಪ್ರೊಫೆಸರ್ ಒಂದೇ ಲೆಕ್ಚರರ್, ನಾಲ್ಕೈದು ಕಾಲೇಜುಗಳಲ್ಲಿ ತೋರಿಸುತ್ತಾರೆ. ಏಕೆ ತೋರಿಸುತ್ತಾರೆ ಅಂದರೆ, ಆ ಕ್ವಾಲಿಫೈಡ್ ಟೀಚರ್ಸ್ ಇಲ್ಲದ ಕಾರಣ, ಪರ್ಮಿಷನ್ ಅಂತೂ ಹೇಗಾದರೂ ಸಿಕ್ಕಿದೆ, ಆ ಪರ್ಮಿಷನ್ ಉಳಿಸಿಕೊಳ್ಳಬೇಕು, ರೆಕಗ್ನಿಷನ್ ಉಳಿಸಿಕೊಳ್ಳಬೇಕು, ಮತ್ತು ಸರಕಾರದ ಇನ್‌ಟೇಕ್ ಕೂಡ ಉಳಿಸಿಕೊಳ್ಳಬೇಕೆಂದು ಹೇಳಿ ಒಬ್ಬ ಲೆಕ್ಚರರ್‌ಗೆ ಮೂರು ನಾಲ್ಕು ಕಡೆ ಸೇರಿಸತಕ್ಕಂಥ ವಿಚಾರ ಕೂಡ ಅವರಿಗೆ ಗೊತ್ತಿದೆ. ಅದಕ್ಕೆ ಇಂಥ ಎಲ್ಲಾ ಡೆಫಿಷಿಯೆನ್ಸಿ ಇವೆ. ಅವೆಲ್ಲವನ್ನೂ ಸರಿಪಡಿಸಿಕೊಂಡು ಕಾಲೇಜುಗಳನ್ನು ನಡೆಸತಕ್ಕಂಥ ಜನರು ಯಾರಿದ್ದಾರೆ, ಅವರನ್ನು ಕರೆದು, ಇದು ಸರಿಯಲ್ಲ ನಿಮ್ಮ ಇಂಟೇಕ್ ಇಷ್ಟೇ ಎಂದು ಹೇಳಿ, ಒಂದು ಸಾರಿ ಫಿಕ್ಸ್ ಮಾಡಿದರೆ ಅವರು ಮುಂದಕ್ಕೆ ಹೋಗುವುದಿಲ್ಲ. ಅವರ ಮೂಗಿಗೆ ನೀವು ತುಪ್ಪ ಹಚ್ಚಿ, ಇಲ್ಲ ನೀವು ಹತ್ತು ಸೀಟು ಹೆಚ್ಚು ಮಾಡಿಕೊಳ್ಳಬಹುದು. ಅದನ್ನು ಮುಂದೆ ನಾವು ಅಪ್ರೂವ್ ಮಾಡಿಕೊಡುತ್ತೇವೆ ಎಂದು ಹೇಳಿ ಕರೆದು ಹೇಳಿದರೆ ಕೆಲಸವು ಅಲ್ಲಿಯೇ ಕೆಡುವುದು. ಇವರು ಕಟ್ಟುನಿಟ್ಟಾಗಿ ನಿಮಗೆ ಎಂಸಿಐ ರೂಲ್ಸ್ ಪ್ರಕಾರ ಅಥವಾ ಅವರು ಅಂದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಏನು ಹೇಳುತ್ತಾರೆ, ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ ಒಂದು ಸೀಟೂ ಕೂಡ ಹೆಚ್ಚು ಮಾಡುವುದಿಲ್ಲ, ನೀವು ಎಲ್ಲಿಗೆ ಹೋದರೂ ಕೂಡ ಪ್ರಯೋಜನವಾಗುವುದಿಲ್ಲ ಎಂದು ಒಂದು ಸಾರಿ ನೀವು ಹೇಳಿದರೆ ಮುಂದೆ ಯಾರೂ ಅಂಥ ತಪ್ಪುಗಳನ್ನು ಮಾಡಲು ಹೋಗುವುದಿಲ್ಲ. ಅದಕ್ಕೆ ನಾನು ಅವರಿಂದ ಸ್ಪಷ್ಟವಾಗಿ ಒಂದು ಹೇಳಿಕೆಯನ್ನು ಬಯಸುತ್ತೇನೆ. ಯಾವರೀತಿಯಾಗಿ ನೀವು ಈ 613 ಸೀಟುಗಳನ್ನು ಫಿಲ್‌ಅಫ್

ಮಾಡುತ್ತೀರಿ, ಮತ್ತು ಇದಕ್ಕೋಸ್ಕರವಾಗಿ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಕೌನ್ಸಿಲಿಂಗ್ ಕೂಡ ಮುಂದೆ ಹೋಯಿತು, ಸಾವಿರಾರು ಅಂಥ ವಿದ್ಯಾರ್ಥಿಗಳು ಇವರಿಗೋಸ್ಕರವಾಗಿ ಸಫರ್ ಆಗಬೇಕಾಯ್ತು ಹೀಗಾಗಿ ಒಂದಕ್ಕೊಂದು ಸೈಡ್‌ಇಫೆಕ್ಟ್ ಇದ್ದ ಹಾಗೆ ಆಗಿದೆ. ಅದನ್ನೆಲ್ಲಾ ಗಮನಿಸಿ ನೀವು ಇದನ್ನು ಯಾವರೀತಿಯಾಗಿ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಇದರ ಬಗ್ಗೆ ಏನಾದರೂ ಕಾನೂನನ್ನು ಜಾರಿಯಲ್ಲಿ ತರುತ್ತೀರೋ ಅಥವಾ ಏನಾದರೂ ಕೆಲವೊಂದು ಸಲ ಎಂಸಿಐ ಅಸ್ತಿತ್ವದಲ್ಲಿದ್ದರೂ ಕೂಡ ಅದಕ್ಕೆ ಧಿಕ್ಕರಿಸತಕ್ಕ ಕೆಲಸವನ್ನು ಸರಕಾರದವರು ಮಾಡುತ್ತಾ ಇದ್ದಾರೆ ಎನ್ನತಕ್ಕಂಥ ಭಾವನೆಯಿಂದ ಅವರು ತಳ್ಳಿ ಹಾಕುತ್ತಾ ಇದ್ದಾರೆ. ಅದಕ್ಕಾಗಿ ನಿಮ್ಮ ಕರ್ತವ್ಯ ಏನು ಅಂದರೆ, ಮಕ್ಕಳಿಗೆ ಧಕ್ಕೆಯಾಗದ ರೀತಿಯಲ್ಲಿ ಅವರಿಗೆ ಒಂದು ವಿಶ್ವಾಸವು ಮೂಡತಕ್ಕಂಥ ರೀತಿಯಲ್ಲಿ ಈ ಕೌನ್ಸಿಲಿಂಗ್ ನಡೆಸಿ, ಸೀಟುಗಳನ್ನು ಫಿಕ್ಸ್ ಮಾಡಿ, ನಿಮಗೆ 1962 ಬರುತ್ತಿದೆ ಅಂದರೆ, ಅಷ್ಟಕ್ಕೆ ನೀವು ಫಿಕ್ಸ್ ಮಾಡಿ ಕಳುಹಿಸಿ. ಇಲ್ಲವಾದರೆ ಸುಮ್ಮನೆ ನೀವು ಖುಷಿ ಮಾಡುವುದಕ್ಕೋಸ್ಕರ ಈ ಮೆಡಿಕಲ್ ಕಾಲೇಜುಗಳಿಗೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಖುಷಿ ಪಡಿಸುವುದಕ್ಕೋಸ್ಕರ, ಇಲ್ಲ ನಮ್ಮ ಸರಕಾರಿ ಆರ್ಡರನ್ನು ಇಶ್ಯೂ ಮಾಡಿ ನಿಮಗೆ ಸೀಟ್‌ಗಳನ್ನು ಎನ್‌ಹಾನ್ಸ್ ಮಾಡಿಕೊಡುತ್ತೇವೆ ಎಂದು ಹೇಳಿ, ಹೀಗೆ ಮಾಡಿದರೆ ಇದು ತಪ್ಪಾಗುತ್ತದೆ. ನಾಳೆಗೆ ಏನಾದರೂ ಅನಾಹುತವಾದರೆ ಅದರ ಪೂರ್ತಿ ಜವಾಬ್ದಾರಿಯನ್ನು ನೀವೇ ಹೊತ್ತುಕೊಳ್ಳಬೇಕಾಗುತ್ತದೆ, ಮತ್ತು ಎಲ್ಲಾದಕ್ಕೂ ಸರಕಾರವೇ ಜವಾಬ್ದಾರಿಯಾಗುತ್ತದೆ ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಆದ್ದರಿಂದ ದಯಮಾಡಿ ಸರಕಾರದವರು ಕೇಂದ್ರ ಸರಕಾರದವರನ್ನು ಅಪ್ರೋಚ್ ಆಗಿ ಕಳೆದುಕೊಂಡಂಥ ಸುಮಾರು 613 ಸೀಟುಗಳನ್ನು ತರತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಮತ್ತು ಇದರ ದುಷ್ಪರಿಣಾಮಗಳು ಬೇರೆ ಕಾಲೇಜುಗಳ ಮೇಲೆ ಏನಾಗುತ್ತದೆ ಅದು ಇಂಜಿನೀಯರಿಂಗ್ ಆಗಲಿ, ಅಗ್ರಿಕಲ್ಚರ್ ಆಗಲೀ,. ವೆಟರ್ನರಿಯಾಗಲೀ, ಅದನ್ನು ಯಾವರೀತಿಯಾಗಿ ಸರಿಪಡಿಸುತ್ತೀರಿ ಮತ್ತು ಇದು ಪ್ರತಿವರ್ಷವೂ ಡಿಲೇ ಆಗುತ್ತಿದೆ. ಯಾವಾಗಲೂ ಮೆಡಿಕಲ್ ಕಾಲೇಜುಗಳು ಪ್ರಾರಂಭವಾಗುವುದು ಡಿಸೆಂಬರ್‌ನಲ್ಲಿ. ಆದರೆ ಅಕಾಡೆಮಿಕ್ ಇಯರ್ ಇರುವುದು ಜುಲೈ, ಆಗಸ್ಟ್‌ನಲ್ಲಿ - ಎಂದು ಹೇಳುತ್ತೇವೆ. ಇದಕ್ಕೆ ಒಂದು ಮಿತಿ ಇಲ್ಲವೆ? ಹೀಗಾದರೆ ಸಿಲೆಬಸ್ ಹೇಗೆ ಕವರ್ ಆಗುತ್ತದೆ? ಯಾವರೀತಿಯಾಗಿ ಆ ಹುಡುಗರು ಓದಬೇಕು? ಅನೇಕ ಪ್ರತಿಭಾವಂತ ವಿಧ್ಯಾರ್ಥಿಗಳು ಕಷ್ಟಪಡಬೇಕಾಗುತ್ತದೆ. ಪಾಪ, ಅವರಿಗೆ ಲೈಬ್ರರಿ ಇರುವುದಿಲ್ಲ. ಮೆಡಿಕಲ್ ಎಜ್ಯುಕೇಷನ್‌ನ ದೊಡ್ಡ ದೊಡ್ಡ ಪುಸ್ತಕಗಳು ಪರ್ಚೇಸ್ ಮಾಡಲು ಆಗುವುದಿಲ್ಲ Unless he is admitted into the college. ಅವನು ಲೈಬ್ರರಿ ಫೆಸಿಲಿಟೀಸ್ ಯೂಸ್ ಮಾಡದೆ ಅವನಿಗೆ ಯಾವುದೂ ಕೂಡ ಸೌಲಭ್ಯಗಳು ಸಿಗುವುದಿಲ್ಲ. ಯಾಕೆಂದರೆ ಅಂಥ ಶ್ರೀಮಂತರುಗಳೇನೂ ಅವರು ಇರುವುದಿಲ್ಲ. ಅಂಥ ವಿದ್ಯಾರ್ಥಿಗಳಲ್ಲಿ ಶೇಕಡಾ 50 ರಷ್ಟು ಬಡ ವಿದ್ಯಾರ್ಥಿಗಳು ಇರುತ್ತಾರೆ. ಮೆರಿಟ್‌ನ ಮೇಲೆ ಬರತಕ್ಕಂಥವರು ಇರುತ್ತಾರೆ. ಇನ್ನು ಶೇಕಡಾ 25ರಷ್ಟು ಡೊನೇಷನ್ ಕೊಟ್ಟು ಅವರೂ ಕೂಡ ಮೆರಿಟ್ ಮೇಲೆ ಬರುತ್ತಾರೆ. ಅದಕ್ಕೆ ನಾವು ಫಿಕ್ಸ್ ಮಾಡಿದ ರೇಟ್‌ನ ಪ್ರಕಾರ. ಇನ್ನೊಂದು ಶೇಕಡಾ 15 ಪರ್‌ಸೆಂಟ್ ಎನ್‌ಆರ್‌ಐ ದವರು ಬರುತ್ತಾರೆ. ಹೀಗೆ ಇರುವಾಗ ನಮಗೆ 70 ಪರ್ಸೆಂಟ್ ವಿದ್ಯಾರ್ಥಿಗಳ ಬಗ್ಗೆ ನಮ್ಮ ಅನುಕಂಪ. ಎನ್‌ಆರ್‌ಐಗಳು ಲಕ್ಷಗಟ್ಟಲೆ ಹಣವನ್ನು ಕೊಡುತ್ತಾರೆ, ಇಲ್ಲ

ಸಿಗಲಿಲ್ಲವೆಂದರೆ ಇನ್ನೊಂದು ಕಡೆ ಹೋಗುತ್ತಾರೆ. ನಮಗೆ ಅವರ ಈ ಸದನದಲ್ಲಿ ಪ್ರಸ್ತಾಪ ಮಾಡುತ್ತೀರೋ ಎಂಬುದನ್ನು ಹೇಳಬೇಕು. ಮೂರನೇದಾಗಿ ಏನು ಅಂದರೆ ಕನಿಷ್ಟಪಕ್ಷ ಈ ಸೀಟುಗಳನ್ನು ಉಪಯೋಗಿಸುವುದಕ್ಕೋಸ್ಕರವಾಗಿ ನೀವು ಕೇಂದ್ರ ಸರಕಾರದವರ ಮೇಲೆ ಒತ್ತಡ ತಂದು, ಎಂಸಿಐನವರ ಮೇಲೆ ಒತ್ತಡ ತಂದು ಅಪ್ರೂವ್ ಮಾಡಿಸಿ ನಮ್ಮ ರಾಜ್ಯ ಸರಕಾರದ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಏಕೆಂದರೆ 100-200 ಸೀಟುಗಳು ಹೋಗಲಿ, ಎನ್‌ಆರ್‌ಐಗಳಿಗೆ ಸಿಗತಕ್ಕ ಸೀಟ್‌ಗಳು, ಹೊರರಾಜ್ಯಗಳ ವಿದ್ಯಾರ್ಥಿಗಳಿಗೆ ಸಿಗತಕ್ಕಂಥ ಸೀಟುಗಳು ಯಾವುವು ಇವೆ ಅವುಗಳ ವಿಚಾರ ಬೇರೆ. ನಮ್ಮ ರಾಜ್ಯದ ಮಕ್ಕಳಿಗೆ ಯಾವ ಪಾಲು ಬರಬೇಕು ಅದು ನಮಗೆ ಸಿಗಬೇಕು. ಇನ್ನೊಂದು ವಿಚಾರ ಅಂದರೆ, ಸುಮಾರು ನಾಲ್ಕೈದು ವರ್ಷಗಳ ಹಿಂದೆ ಒಂದು ಸರಕಾರಿ ಆದೇಶವನ್ನು ಮಾಡಿದರು. ಹಿಂದುಳಿದ ಪ್ರದೇಶಗಳಲ್ಲಿರತಕ್ಕಂಥವರಿಗೆ, ಅಂದರೆ ಹೈದ್ರಾಬಾದ್ ಕರ್ನಾಟಕದಲ್ಲಿರತಕ್ಕಂಥವರಿಗೆ ಅಲ್ಲಿನ ವಿಶ್ವಾವಿದ್ಯಾನಿಲಯದ ವಿದ್ಯಾರ್ಥಿಗಳು ಯಾರಿದ್ದಾರೆ, ಅವರದ್ದೇ ಒಂದು ಮೆರಿಟ್ ಕನ್ಸಿಡರ್ ಮಾಡಿ ಅವರಿಗೆ ಕೆಲವು ಸೀಟ್‌ಗಳನ್ನು ಕೊಡಬೇಕೆನ್ನತಕ್ಕಂಥಾದ್ದು ಅಂದರೆ 30-40 ಸೀಟುಗಳು ಹಾಗೆ ಬರುತ್ತವೆ. ಯಾಕೆಂದರೆ ಆ ವಿದ್ಯಾರ್ಥಿಗಳು ಬೆಂಗಳೂರಿನ ವಿದ್ಯಾರ್ಥಿಗಳ ಜೊತೆಗೆ ಕಾಂಪಿಟ್ ಮಾಡಲು ಆಗುವುದಿಲ್ಲ. ಅಂಥ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳು ನಮ್ಮ ಭಾಗದಲ್ಲಿಲ್ಲ. ತಮಗೆ ಗೊತ್ತಿರುವ ಹಾಗೆ ಸರಕಾರಿ ಸ್ಕೂಲ್‌ಗಳಲ್ಲಿ ಮ್ಯಾಥಮೆಟಿಕ್ಸ್ ಟೀಚಲ್‌ಗಳಿಲ್ಲ. ಸೈನ್ಸ್ ಟೀಚರ್‌ಗಳಿಲ್ಲ. ನಮ್ಮ ಕ್ಷೇತ್ರದಲ್ಲಿ ಜ್ಯೂನಿಯರ್ ಕಾಲೇಜುಗಳು ನಾಲ್ಕೈದು ಇವೆ. ಅನೇಕ ಕಡೆಗಳಲ್ಲಿ ಫಿಸಿಕ್ಸ್, ಕೆಮೆಸ್ಟ್ರಿ, ಮ್ಯಾಥ್ಸ್, ಇಂಗ್ಲೀಷ್ ಟೀಚರ್‌ಗಳೇ ಇಲ್ಲ. ಹಾಗಾದರೆ ಅವರು ಹೇಗೆ ಓದಬೇಕು? ಪಾಪ ಅವರು ದೂರವಾಗುತ್ತದೆ ಹೋಗಲು ಆಗುವುದಿಲ್ಲ ಎಂದು ತಿಳಿದುಕೊಂಡು ಒಂದೇ ಟೀಚರ್ ಎರಡು ಮೂರು ಸಬ್‌ಜೆಕ್ಟ್‌ಗಳನ್ನು ಹೇಳುತ್ತಾರೆ. ಕೊನೆಗೆ ಅವರು ಏನು ಮಾಡುತ್ತಾರೆ, ಯಾವುದೋ ರೀತಿಯಾಗಿ ಓದಬೇಕು ಎಂದು ಎರಡು ಸಲ, ಮೂರು ಸಲ, ನಾಲ್ಕು ಸಲ, ಕುಳಿತು ಪಾಸ್ ಆಗುತ್ತಾರೆ. ಅಂಥ ಫೆಲ್ ಆದ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ನಾನು ವಾದ ಮಾಡುತ್ತಾ ಇಲ್ಲ. ಆದರೆ ಆ ಹಿಂದುಳಿದ ಭಾಗದಲ್ಲಿ ಉಳಿದಿರತಕ್ಕಂಥ ವಿದ್ಯಾರ್ಥಿಗಳಿಗೆ ಬೆಂಗಳೂರಿನ ವಿಧ್ಯಾರ್ಥಿಗಳ ಜೊತೆಯಲ್ಲಿ ಕಾಂಪಿಟ್ ಮಾಡಲು ಆಗುವುದಿಲ್ಲ. ಆ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ವಿದ್ಯಾರ್ಥಿಗಳಿಗೆ ಒಂದು ಸಪರೇಟ್ ಲಿಸ್ಟ್ ಮಾಡಿ 30-40 ಸೀಟುಗಳನ್ನು ಕೊಡಿ. ಆ ಜ್ಯುರಿಸ್‌ಡಿಕ್ಷನ್‌ನಲ್ಲಿ ಬರತಕ್ಕಂಥ ಕಾಲೇಜುಗಳಲ್ಲಿ ಸರಕಾರಿ ಸೀಟುಗಳು 50 ಪರ್‌ಸೆಂಟ್ ಏನು ಇರುತ್ತವೆ, ಅದಕ್ಕೆ ಬೇಕಾದರೆ ಮೆರಿಟನ್ನು ನೀವು ಕೌಂಟ್ ಮಾಡಿ. ಹೀಗೆ ಮಾಡಿ ಅವರಿಗೆ ಕೊಟ್ಟರೆ ಆ ಭಾಗದ ಡಾಕ್ಟರ್ಸ್ ಇವೊತ್ತು ಬರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವಾದರೆ ನಿಮಗೆ ಗೊತ್ತಿರುವ ಹಾಗೆ ಎಲ್ಲಾ ಪಿಹೆಚ್‌ಸಿಗಳಲ್ಲಿಯೂ ಅಥವಾ ನಮ್ಮ ಎಲ್ಲಾ ಮೆಡಿಕಲ್ ಸಬ್‌ಸೆಂಟರ್‌ಗಳಲ್ಲಿ ಡಾಕ್ಟರ್‌ಗಳ ಕೊರತೆ ಇದೆ. ಲೇಡಿ ಮತ್ತು ಜನರಲ್ ಡಾಕ್ಟರ್‌ಗಳ ಕೊರತೆಯಿದೆ. ಯಾಕೆ ಕೊರತೆ ಇದೆ ಅಂದರೆ, ನೀವು ರಿಕ್ರೂಟ್ ಮಾಡುವಾಗ ಮೆರಿಟ್ ನಮ್ಮ ಭಾಗದ ಹುಡುಗರಿಗೆ ಮೆರಿಟ್ ಇಲ್ಲದ ಕಾರಣ ಈ ಕಡೆಯ ಹುಡುಗರಿಗೆ ಕೊಡುತ್ತೀರಿ. ನಮ್ಮ ಭಾಗದ ಡಾಕ್ಟರ್ಸ್ ನಿಮಗೆ ಹೀಗಾಗಿ ಸಿಗುವುದಿಲ್ಲ. ನಿಮ್ಮ ಕಡೆ ಡಾಕ್ಟರ್ಸ್ ಸಿಗುವುದಿಲ್ಲ. ತಾತ್ಕಾಲಿಕ ಅಪಾಯಿಂಟ್‌ಮೆಂಟ್

ಮಾಡಿಕೊಳ್ಳ ಬೇಕೆಂದೂ ಕೂಡ ಡೆಪ್ಯೂಟಿಕಮಿಶನರ್‌ಗೆ ಅಷ್ಟೊಂದು ಅಪ್ಲಿಕೇಷನ್ಸ್ ಇಲ್ಲ. ಹೀಗಾಗಿ ಅನೇಕ ದವಾಖಾನೆಗಳಲ್ಲಿ ಇವೊತ್ತು ಡಾಕ್ಟರ್ಸ್ ಇಲ್ಲದೆ ಅಲ್ಲಿರುವ ಕಾಂಪೌಂಡರ್ಸ್‌ಗಳು ಅವರ ಡಾಕ್ಟರ್ ಹೇಳಿದ ಮತ್ತು ಆತನಿಗೆ ಗೊತ್ತಿರುವ ಫಿಲ್ಸನ್ನು ಕೊಡುತ್ತಾರೆ. ಹೀಗೆ ಕೆಲವು ಜನರು ಕಾಂಪೌಂಡರ್ ಹತ್ತಿರವೇ ಔಷಧಿ ತೆಗೆದುಕೊಳ್ಳುತ್ತಾರೆ. ನಮ್ಮ ಬಿಜಾಪುರ, ಗುಲ್ಬರ್ಗಾ, ರಾಯಚೂರು ಮುಂತಾದ ಕಡೆಗಳಲ್ಲಿ ಇದು ನಡೆಯುತ್ತಾ ಇದೆ. ಆದ್ದರಿಂದ ಸಾಕಷ್ಟು ಅನಾಹುತಗಳೂ ಕೂಡ ಆಗುತ್ತಿವೆ.

6.50 ಪಿ.ಎಂ.

ಆದರೂ ಕೂಡ ನಿರ್ವಾಹವಿಲ್ಲ. ತಲೆ ನೋವಿಗೆ ಇದನ್ನು ವೈದ್ಯರು ಕೊಡುತ್ತಾರೆ ಎಂದು ಅವರು ಯಾವುದೋ ಒಂದನ್ನು ನೆನಪಿಟ್ಟುಕೊಂಡು ಕೊಡುತ್ತಾರೆ ಅದು ಅನೇಕ ಸಲ ಕೆಲವು ಔಟ್ ಡೇಟೆಡ್ ಮೆಡಿಸಿನ್ ಕೊಡುವಂಥಾದ್ದೂ ಇರುತ್ತದೆ. ಏನೋ ಬಂದಿದ್ದಾರೆ ಎಂದು ಹೇಳಿ ಯಾವುದೋ ಒಂದನ್ನು ಕೊಟ್ಟು ಕಳುಹಿಸುವುದು, ಹೀಗಾಗಿ ಅವರ ಆರೋಗ್ಯ ಕೆಡುವುದು ಅಥವಾ ಸಾಯುವುದು ಇಂಥ ಎಲ್ಲಾ ತೊಂದರೆಗಳಾಗುತ್ತವೆ. ಆದುದರಿಂದ ದಯಮಾಡಿ ಆ ಭಾಗದ ಜನರಿಗಾಗಿ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಇಂಥ ಪ್ರೊಫೆಷನಲ್ ಕೋರ್ಸಸ್‌ಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸೀಮಿತವಾಗಿ ಒಂದು ಮೆರಿಟ್ ಅನ್ನು ಕನ್ಸಿಡರ್ ಮಾಡಿದರೆ ಅದನ್ನು ಬೇಕಾದರೆ ನೀವು ಎಬಿಸಿಡಿ ಎಂದು ಏನು ಕ್ಲಾಸಿಫಿಕೇಷನ್ ಇದೆ ಆ ರೋಸ್ಟರ್ ಪ್ರಕಾರ ರಿಕ್ರೂಟ್ ಮಾಡಿ ಅಡ್ಮಿಷನ್ ಕೊಡಿ. ಅಂದರೆ ಇದರಿಂದ ಆ ಭಾಗದ ವಿದ್ಯಾರ್ಥಿಗಳೂ ಕೂಡ ಕಾಂಪಿಟೇಷನ್ ಮಾಡುವುದಕ್ಕೆ ಅವಕಾಶವಾಗುತ್ತದೆ ಮತ್ತು ನಾಳೆ ಅಡ್ಮಿಷನ್ ತೆಗೆದುಕೊಂಡು ಅವರೂ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಎರಡು ಸಮಸ್ಯೆಗಳನ್ನೂ ತಾವು ಬಗೆಹರಿಸಿ ಕೊಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಅಧ್ಯಕ್ಷರೆ, ಸಿಇಟಿ ಪ್ರಸಂಗ ನೋಡಿದಾಗ "ಹುಚ್ಚಲ್ಲ ಬೆಪ್ಪಲ್ಲ ಶಿವಲೀಲೆ" ಎಂಬ ಕನ್ನಡದ ಗಾದೆ ಜ್ಞಾಪಕಕ್ಕೆ ಬರುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಪ್ರತಿ ವರ್ಷ ಸಿಇಟಿಯಿಂದ ನಮ್ಮ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ಕೊಡುಗೆ ಇದು. ನಿನ್ನೆ ಪೋಷಕರೊಬ್ಬರು ಹೇಳಿದ್ದಾರೆ : 'The biggest mistake I have committed in my is to yield tp my daughter's wish to become a Doctor, and that too, in Karnataka.' ಕರ್ನಾಟಕದಲ್ಲಿ ಓದಿಸಿ ನಾನು ಒಂದು ಮಹಾಪರಾಧ ಮಾಡಿದ್ದೇನೆ. ನನ್ನ ಪ್ರತಿಭಾವಂತ ಮಗಳ ಜೀವನದ ಭವಿಷ್ಯವನ್ನು ಅಂಧಕಾರ ಮಾಡಿದ್ದೇನೆ ಎಂದು ಆ ಪೋಷಕರು ಹೇಳುತ್ತಿದ್ದಾರೆ. ಇವೊತ್ತು ರಾಜ್ಯ ಸರ್ಕಾರದ ಒಂದು ರೀತಿಯ ಬೇಜವಾಬ್ದಾರಿ ನೀತಿಯಿಂದ ಸುಮಾರು ಎರಡು ಸಾವಿರ ಮಂದಿ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಅವರ ಮುಂದಿನ ಜೀವನ ಏನು ಎಂಬುದು ಗೊತ್ತಾಗುತ್ತಿಲ್ಲ. ಪ್ರತಿ ವರ್ಷ ಇದು ಆಗುತ್ತಲೇ ಬರುತ್ತಿದೆ. ನಾಲ್ಕು, ಐದು, ಆರು ತಿಂಗಳಾದರೂ ಇದು ಇತ್ಯರ್ಥವಾಗುವುದಿಲ್ಲ. ಈ ವರ್ಷ ಸುಪ್ರೀಂ ಕೋರ್ಟಿನ ಆದೇಶದಿಂದ ಅವರು ನಾಳೆ ಏನು ಮಾಡಬೇಕು ಎಂಬುದು ಗೊತ್ತಾಗುತ್ತಿಲ್ಲ. ಇವೊತ್ತು ಇಂಜಿನಿಯರಿಂಗ್ ಕಾಲೇಜಿನದ್ದು ಏನು ಆಗಬೇಕಾಗಿತ್ತು ಅದನ್ನೂ ಕೂಡ

ನೀವು ಅನಿರ್ಧಿಷ್ಟ ಕಾಲ ಮುಂದಕ್ಕೆ ಹಾಕಿದ್ದೀರಿ. ಹಿರಿಯ ಸದಸ್ಯರೂ ಹಾಗೂ ವಿರೋಧ ಪಕ್ಷದ ನಾಯಕರೂ ಆದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು, M.C.I. is a recommendatory body ಎಂದು ಒಂದು ಮಾತನ್ನು ಹೇಳಿದರು. ಆದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ

(ಡಾ|| ಎಂ.ಪಿ. ಕರ್ಕಿಯವರು ಪೀಠವನ್ನಲಂಕರಿಸಿದರು)

ತಾವು ವೈದ್ಯಕೀಯ ವಿದ್ಯಾರ್ಥಿಯಾಗಿದ್ದು ವೈದ್ಯರಾಗಿದ್ದವರು. 1992ನೇ ಇಸವಿಯಲ್ಲಿ ಆಂಧ್ರ ಪ್ರದೇಶದಲ್ಲಿ ಯದ್ವಾತದ್ವಾ ಮೆಡಿಕಲ್ ಕಾಲೇಜುಗಳು ಪ್ರಾರಂಭವಾಗಿ ಒಂದು ದೊಡ್ಡ ಸ್ಕ್ಯಾಂಡಲ್ ಆದಾಗ ಅಂದು ಅದು ದೊಡ್ಡ ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ಎಂ.ಸಿ.ಐ ಮಸೂದೆ ಅನುಮೋದನೆಯಾಗಿ M.C.I. is a creature of the Parliament. It is a statutory body ಎಂಸಿಐ ಡೈರೆಕ್ಷನ್ಸ್ ಏನಿದೆ those directions will be binding on the State Governments ಎಂದು ಈಗ ಸಾಬೀತಾಗಿದೆ ನಾನು ಒಂದು ವಾರದ ಹಿಂದೆ ಈ ಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಾಗ ಅಂದು ಸುಪ್ರೀಂ ಕೋರ್ಟ್ ಒಂದು ಇಂಟ್ರೀಮ್ ಆರ್ಡರ್ ಕೊಟ್ಟಿತು. ಅವತ್ತೇ ನಾನು ಎಚ್ಚರಿಕೆ ಕೊಟ್ಟೆ. ಅವೊತ್ತು ಸನ್ಮಾನ್ಯ ಕಾನೂನು ಸಚಿವರು ಇಲ್ಲ. ನಾವು ಇದನ್ನು ಮ್ಯಾನೇಜ್ ಮಾಡುತ್ತೇವೆ, ನಮಗೆ ವಿಶ್ವಾಸ ಇದೆ ಎಂದು ಒಂದು ಹೇಳಿಕೆ ಕೊಟ್ಟರು. ಅವೊತ್ತು ಅವರೂ ಕೂಡ ಇದು ರೆಕಮೆಂಡೇಟರಿ ಎಂದು ಹೇಳಿದರು. ಇವೊತ್ತು ಸುಪ್ರೀಂ ಕೋರ್ಟ್ ಕೊಟ್ಟಿರುವ ಒಂದು ಆದೇಶ ಏನಿದೆ ಇದು ಸರ್ಕಾರಕ್ಕೆ ನೀಡಿರುವ ಕಪಾಳಮೋಕ್ಷ ಎಂದು ಹೇಳಿದರೆ ತಪ್ಪಾಗಲಾರದು. ಆ ಎರಡು ಸಾವಿರ ವಿದ್ಯಾರ್ಥಿಗಳ ಜೀವನದ ಜೊತೆಯಲ್ಲಿ ಆಟವಾಡುವುದಕ್ಕೆ ಇವರಿಗೆ ಹಕ್ಕನ್ನು ಕೊಟ್ಟವರು ಯಾರು? ಇವೊತ್ತು ರಾಜ್ಯ ಸರ್ಕಾರ ಸಾರ್ವಜನಿಕ ಹಿತಾಸಕ್ತಿಯನ್ನು ಮರೆತು ಆ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಮರೆದು ಕೆಲವು ಖಾಸಗಿ ಕಾಲೇಜುಗಳ ಕೈಗೊಂಬೆಯಾಗಿ ವರ್ತಿಸುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದು ಸರಿಯಾಗಿದೆ. ಅನೇಕ ಖಾಸಗಿ ಕಾಲೇಜುಗಳವರು ನಮಗೆ ಇರುವಷ್ಟೇ ಸೀಟ್‌ಗಳು ಸಾಕು. ನಾವು ಅಡ್ಮಿಷನ್ ಕೊಡುತ್ತೇವೆ ಎಂದರೆ ಸಂಬಂಧಪಟ್ಟ ಅಧಿಕಾರಿಗಳು ಬೇಡ, ನೀವು ಒಂದು 15-20 ಸೀಟು ಜಾಸ್ತಿ ತೆಗೆದುಕೊಳ್ಳಿ, ನಮಗೆ ಎಂಇಟಿ ಜೊತೆ ಹೇಗೆ ಮ್ಯನೇಜ್ ಮಾಡಬೇಕೆಂಬುದು ಗೊತ್ತು ಎಂದು ವಿಶ್ವಾಸವನ್ನು ತುಂಬಿ ಇವೊತ್ತು ಆ 575 ಮಂದಿ ವಿದ್ಯಾರ್ಥಿಗಳ ಭವಿಷ್ಯವನ್ನು ಕಂಗಾಲು ಮಾಡಿದ್ದಾರೆ. ಇದು ಕ್ಯಾನ್ಸಲ್ ಆಗಿರುವುದರಿಂದ ಆ ಎಲ್ಲಾ 2105 ಜನರ ಭವಿಷ್ಯ ಇವೊತ್ತು ಅಂಧಕಾರದಲ್ಲಿದೆ. ಎಂಸಿಐ ಫಿಕ್ಸ್ ಮಾಡಿದ್ದು 2105 ಸೀಟುಗಳು, ನಮ್ಮವರು ಬಹಳ ಧಾರಾಳವಾಗಿ ಕೊಟ್ಟಿರುವುದು 2680 ಸೀಟು. ಆ 575 ಸೀಟುಗಳನ್ನು ಹೆಚ್ಚಿಗೆ ಕೊಡುವುದಕ್ಕೆ ಅವರಿಗೆ ಯಾವ ಧೈರ್ಯ ಇತ್ತು? ಯಾವ ವಿಶ್ವಾಸದಿಂದ ಈ ಎಲ್ಲಾ ವಿದ್ಯಾರ್ಥಿಗಳ ಜೀವನಕ್ಕೆ ಬೆಂಕಿ ಇಟ್ಟಿದ್ದಾರೆ? ಸನ್ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಆಗುತ್ತಿರುವ ಈ ಗೊಂದಲದಿಂದ ಇವೊತ್ತು ಪೋಷಕರು ಕಂಗಾಲಾಗಿದ್ದಾರೆ. ವೈದ್ಯಕೀಯ ಮಂಡಳಿಯ ಮಾರ್ಗದರ್ಶಿ ಸೂತ್ರ ಹಾಗೂ ನ್ಯಾಯಲಯದ ತೀರ್ಪುಗಳ ಹಿನ್ನೆಲೆಯಲ್ಲಿ ಪ್ರವೇಶಾತಿಯನ್ನು ಯಾವುದೇ ಗೊಂದಲ ಇಲ್ಲದೆ ಇವೊತ್ತು ನಡೆಸಬಹುದಾಗಿತ್ತು. There should have been no confusion. ಆದರೆ

ಯಾವ ಯಾವುದೋ ಸಬೂಬು ನೀಡುತ್ತಾ ನೀಡುತ್ತಾ ಏನೋ ಬಂಡ ಧೈರ್ಯ ತೋರಿಸುತ್ತಾ ಇರುವುದನ್ನು ಇವೊತ್ತು ಎಪಿಎಂಸಿ ಕೇಸ್‌ನಲ್ಲಿ ಮತ್ತು ಈ ಸಿಇಟಿ ಪ್ರಸಂಗದಲ್ಲಿ ನಾವು ನೋಡಿದ್ದೇವೆ. ಸರ್ಕಾರದ ಒಂದು ದೊಡ್ಡ ಮುಖಭಂಗವಾಗಿದೆ. ಒಂದು ವೇಳೆ ಮುಖಭಂಗವಾಗಿದ್ದರೂ ಕೂಡ ನಾವು ಏನೋ ಮಾತನಾಡಿ ಇತ್ಯರ್ಥ ಮಾಡಿಕೊಳ್ಳಬಹುದಾಗಿತ್ತು. ಆದರೆ ಆ ಎರಡು ಸಾವಿರ ಜನ ವಿದ್ಯಾರ್ಥಿಗಳ ಕಥೆ ಏನು? ಅವರಿಗೆ ಅದೇ ಕಾಲೇಜಿನಲ್ಲಿ ಸೀಟು ಸಿಗುತ್ತದೆಯೆ? ಅವರು ಎಲ್ಲಿ ಹೋಗಬೇಕು? ಈ ಕಡೆ ಡಿಗ್ರಿ ಕಾಲೇಜುಗಳೂ ಪ್ರಾರಂಭವಾಗಿವೆ. ಅವರ ಜೀವನದ ಗತಿ ಏನು? ಇನ್ನೊಬ್ಬರು ಪೋಷಕರು ಹೇಳಿದ್ದಾರೆ, "It is ridiculous that the Government bungles year after year putting so many students and parents in trouble.." ಎಂದು ಪ್ರತಿ ವರ್ಷ ಇದು ಇದ್ದೇ ಇದೆ. ಆ ತ್ರಿವಿಕ್ರಮನ ಸಾಹಸ ಏನಿದೆ ಆ ರೀತಿ ಅವನು ಆ ಶವವನ್ನು ಬಿಟ್ಟು ಬರುತ್ತಾನೆ, ಮತ್ತೆ ಆ ಬೇತಾಳ ಬಂದು ಶವವನ್ನು ಎತ್ತಿಕೊಂಡು ಹೋಗುತ್ತದೆ. ಆ ಬೇತಾಳದ ಬಳಿ ತ್ರಿವಿಕ್ರಮ, ಈ ಸಿಇಟಿ ಹತ್ತಿರ ಪ್ರತಿ ಸಲ ಸೋಲುತ್ತಿರುವ ಈ ಸರ್ಕಾರಕ್ಕೆ ಏನಾದರೂ ವ್ಯತ್ಯಾಸ ಇದೆಯೆ? ಈ ಹಿನ್ನೆಲೆಯಲ್ಲಿ ನಾನು ಎಂಸಿಐ ಡೈರೆಕ್ಷನ್ಸ್‌ಗೆ ತಿಲಾಂಜಲಿ ಕೊಟ್ಟು ರಾಜ್ಯದ ವಿದ್ಯಾರ್ಥಿ ಸಮೂಹಕ್ಕೆ, ಮತ್ತು ಅವರ ಜೀವನಕ್ಕೆ ಅಂಧಕಾರ ತಂದಿರುವ ವೈದ್ಯಕೀಯ ಶಿಕ್ಷಣ ಇಲಾಖೆಯ ಕ್ರಮವನ್ನು ಖಂಡಿಸುತ್ತಾ ಅದಕ್ಕೆ ಕೂಡಲೆ ಕ್ರಮ ತೆಗೆದುಕೊಂಡು ಆ 2000 ವಿದ್ಯಾರ್ಥಿಗಳಿಗೆ ಯಾವುದಾದರೂ ಒಂದು ವಿಶ್ವಾಸವನ್ನು ನೀವು ನೀಡಬೇಕಾಗಿದೆ ಎಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಆ ತ್ರಿವಿಕ್ರಮನಿಗೆ ಸರಿಯಾದ ಉತ್ತರ ಕೊಟ್ಟರೆ ತಲೆ ಒಡೆಯುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸರ್ಕಾರದಲ್ಲಿ ಯಾರದೋ ಒಬ್ಬರ ತಲೆ ಒಡೆದಿದ್ದರೆ ಚೆನ್ನಾಗಿತ್ತು, ಆದರೆ ಪ್ರತಿವರ್ಷ 2000 ವಿದ್ಯಾರ್ಥಿಗಳ ತಲೆ ಒಡೆಯುತ್ತಿದ್ದಾರೆ. ಇದು ತ್ರಿವಿಕ್ರಮನ ಕಥೆ ಏನಿದೆ ಅದಕ್ಕೆ ವ್ಯತಿರಿಕ್ತವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಸರಿಯಾದ ಉತ್ತರ ಇಲ್ಲದಿರುವುದರಿಂದ ಇದನ್ನೇ ಸರ್ಕಾರ ಹೇಳಬೇಕಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ನನಗನಿಸುತ್ತದೆ ಸುಮಾರು ನೂರು ವರ್ಷಗಳ ಹಿನ್ನೆಲೆಯಲ್ಲಿ ನಾವು ಒಂದು ಕಾಂಪ್ರಹೆನ್ಸೀವ್ ಅಡ್ಮಿಷನ್ ಪಾಲಿಸಿ ಮಾಡಿದ್ದರೆ ಇದಕ್ಕೆ ಒಂದು ಸುಲಭವಾದ ಮಾರ್ಗ ಇತ್ತು. ಕಾಂಪ್ರಹೆನ್ಸೀವ್ ಅಡ್ಮಿಷನ್ ಪಾಲಿಸಿ ಮಾಡಿ ಆ ಪಾಲಿಸಿ ಮೇಲೆ ಇದು ಇತ್ಯರ್ಥವಾಗುವವರೆಗೆ ಎಂಸಿಐ ಗೌಡ್‌ಲೈನ್ಸ್, ಎಂಸಿಐ ರೆಗ್ಯುಲೇಷನ್ ಒಳಗಡೆ ನಾವು ಅಡ್ಮಿಷನ್ ಕೊಟ್ಟಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ನಿಮ್ಮದು ಏನೋ ಒಂದು ವಿಶ್ವಾಸ. ನಾವು ಈ ರಾಜ್ಯದಲ್ಲಿ ಕೆಇಬಿ ರೇಟ್ಸ್, ಕೆಎಸ್‌ಆರ್‌ಟಿಸಿ ಇಂಥ ಅನೇಕ ಸಮಸ್ಯೆಗಳನ್ನು ಹೇಗೆ ಮ್ಯಾನೇಜ್ ಮಾಡುತ್ತೇವೆ ಅದೇ ರೀತಿ ಎಂಸಿಐ ಅನ್ನು ಸುಪ್ರೀಂ ಕೋರ್ಟ್‌ನಲ್ಲಿ ಮ್ಯಾನೇಜ್ ಮಾಡುತ್ತೇವೆ ಎನ್ನುವ ವಿಶ್ವಾಸ ಏನಿದೆ ಆ ಅಂಧ ವಿಶ್ವಾಸ ಇವೊತ್ತು ಇವರ ಇಡೀ ಜೀವನವನ್ನು ಹಾಳು ಮಾಡಿದೆ.

ಅದಕ್ಕೋಸ್ಕರ ವೈದ್ಯಕೀಯ ಶಿಕ್ಷಣ ಮಂಡಳಿಯ ಬಗ್ಗೆ ಮೇಲ್ಮನೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವರು ಬಹಳ ವಿಶ್ವಾಸದಿಂದ ಉತ್ತರ ಕೊಟ್ಟರು. ಇದು ರೆಕಮೆಂಡೇಟರಿ ಬಾಡಿ, ನಾವು ಏನೂ ಹೇಳುವ ಹಾಗಿಲ್ಲ ಎಂದು ಈ ಸಭೆಯಲ್ಲಿ ಕಾನೂನು ಸಚಿವರು ಉತ್ತರ ಕೊಟ್ಟರು. ಇವೊತ್ತು ಏನು ಉತ್ತರ ಕೊಡುತ್ತಾರೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಇವತ್ತೂ ಅದೇ ಉತ್ತರವನ್ನು ಕೋಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮತ್ತೊಮ್ಮೆ ಕಪಾಳಮೋಕ್ಷ ಮಾಡಿಸಿಕೊಳ್ಳುವುದಕ್ಕೇನು?

ಶ್ರೀ ಎಂ. ಸಿ. ನಾಣಯ್ಯ : ದಯಮಾಡಿ ಮಾನ್ಯ ಮಿತ್ರರು ಈ ರೀತಿ ಆರೋಪ ಮಾಡುವಾಗ ವಿಚಾರವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು, ಎಂದು ನಾನು ಹೇಳುತ್ತಿದ್ದೇನೆ. ನಾನು ಈ ಸದನದಲ್ಲಿ ಏನು ಉತ್ತರ ಕೊಟ್ಟೆ ಎಂದರೆ ನಾವು ಮ್ಯಾಟ್ರಿಕ್ಸನ್ನು ಫಿಕ್ಸ್ ಮಾಡುವಾಗ 12ನೇ ತಾರೀಖಿನಂದು ವಿದ್ಯಾರ್ಥಿಗಳನ್ನು ಕೌನ್ಸಿಲಿಂಗ್ ಕರೆದಾಗ ನಮ್ಮ ಉಚ್ಚ ನ್ಯಾಯಾಲಯದ ಡಿವಿಜನಲ್ ಬೆಂಚ್‌ನ ತೀರ್ಪು ಯಾವುದಿತ್ತು ಆ ತೀರ್ಪಿಗೆ ಅನುಗುಣವಾಗಿ ನಾವು ಸಂಪೂರ್ಣವಾಗಿ ಮಾಡಿಕೊಂಡು ಬಂದೆವು. ಈ ವಿಚಾರ ನಮ್ಮ ಉಚ್ಚ ನ್ಯಾಯಾಲಯದಲ್ಲಿತ್ತು. ಆ ಉಚ್ಚ ನ್ಯಾಯಾಲಯ ಒಂದು ತೀರ್ಮಾನ ಕೊಟ್ಟಾದ ಮೇಲೆ ದಿನಾಂಕ : 1.6.1992ರ ನಂತರ ಮಾತ್ರ ಮೆಡಿಕಲ್ ಕೌನ್ಸಿಲ್ ರೆಗ್ಯುಲೇಷನ್ಸ್ ಪ್ರಾಸ್ಪೆಕ್ಟೀವ್ ಆಗಿ ಅದು ಜಾರಿಗೆ ಬರುತ್ತದೆ. ದಿನಾಂಕ : 1.6.1992 ರೊಳಗೆ ಅದಕ್ಕೆ ಏನೂ ಅಧಿಕಾರವಿಲ್ಲ. ರಾಜ್ಯ ಸರ್ಕಾರ ನಮ್ಮ ಕಾಯಿದೆಯ ಅಡಿಯಲ್ಲಿರುವ ಯಾವ ಸೀಟನ್ನು ನಿಗದಿ ಮಾಡುವ ಅಧಿಕಾರ ಇದೆ ಎಂದು ಹೇಳಿದ ಮೇಲೆ ಡಿವಿಜನಲ್ ಬೆಂಚಿನ ತೀರ್ಪನ್ನೇ ತೆಗೆದುಕೊಂಡು ನಾವು ಆ 2672 ವಿದ್ಯಾರ್ಥಿಗಳನ್ನೊಳಗೊಂಡ ಒಂದು ಮ್ಯಾಟ್ರಿಕ್ಸನ್ನು ಮಾಡಿದೆವು. 12ನೇ ತಾರೀಖು ಕೌನ್ಸಿಲಿಂಗ್ ನಡೆಯಿತು. 19ನೇ ತಾರೀಖಿಗೆ ಅಂದರೆ ಸುಮಾರು ಏಳು ದಿವಸಕ್ಕೆ 92 ಪರ್ಸೆಂಟ್ ವಿದ್ಯಾರ್ಥಿಗಳನ್ನು ತಾವು ಸೇರಿಸಿ ಅಯಿತು. 19ನೇ ತಾರೀಖು ರಾತ್ರಿ ಸುಪ್ರೀಂ ಕೋರ್ಟಿನ ಒಂದು ಆಜ್ಞೆ ಬರುತ್ತದೆ ಅವರು ಡಿವಿಜನಲ್ ಬೆಂಚ್‌ನ ತೀರ್ಪಿಗೆ ತಡೆಯಾಜ್ಞೆ ಕೊಡಲಿಲ್ಲ. ದಯವಿಟ್ಟು ಇದನ್ನು ತಿಳಿದುಕೊಳ್ಳಿ, ನಾವು ಈ ವಿಚಾರವನ್ನು ನೋಡಿದ್ದೇವೆ. ಇವರು ಕೊಟ್ಟಿರುವುದು ಏತಕ್ಕೆ ಎಂದರೆ, Admissions to medical courses shall be confined to M.C.I. Regulations, ಎಂದು ಮಾತ್ರ ಹೇಳಿದರೇ ಹೊರತು ಅವರು ತಡೆಯಾಜ್ಞೆ ಕೊಡಲಿಲ್ಲ. ಕೊನೆಗೆ as a clarificatory measure ಎಂದು ಹೇಳಿ ನಾವು ಒಂದು ಪ್ರಮಾಣಪತ್ರವನ್ನು ಸಲ್ಲಿಸಿ kindly clarify your order ಎಂದು ಕೇಳಿದೆವು. ಡಿವಿಜನಲ್ ಬೆಂಚ್‌ನಲ್ಲಿ ಈ ರೀತಿ ತೀರ್ಮಾನ ಕೊಟ್ಟಿದೆ, ಕಾನ್ಸಿಲಿಂಗ್ ಮುಗಿದಿದೆ, ಶೇಕಡ 100 ರಷ್ಟು ವಿದ್ಯಾರ್ಥಿಗಳನ್ನು ಅಲಾಟ್ ಮಾಡಿಯಾಗಿದೆ ಈಗ ಏನು ಮಾಡುವುದು ಎಂಬ ಮಾತನ್ನು ಹೇಳಿದಾಗ the Divisional Bench order itself is under question ಎನ್ನತಕ್ಕಂಥ ಮಾತನ್ನು ಮೊನ್ನೆ ಶುಕ್ರವಾರ ಹೇಳಿದರು. ಹಾಗೆ ಹೇಳಿದ ಮೇಲೆ ನಾವು ತೀರ್ಮಾನ ಮಾಡುತ್ತೇವೆ, ಸಮಯ ಕೊಡುತ್ತೇವೆ ಎಂಬುದಾಗಿ ಹೇಳಿ We will hear the writ

Petition itself ಎಂದು ಹೇಳಿದ ಮೇಲೆ ನಾವು ಅನಿವಾರ್ಯವಾಗಿ ಈ ತೀರ್ಮಾನವನ್ನು ಕೈಗೊಳ್ಳಬೇಕಾಯಿತು. ಇದರ ಪರಿಣಾಮವಾಗಿ 713 ಸೀಟುಗಳು ಈಗ ಕಡಿಮೆಯಾಗಿವೆ. ಎಂಸಿಐ ರೆಗ್ಯುಲೇಷನ್ ಪ್ರಕಾರ ಮಾಡಬೇಕು ಎಂದು ಹೇಳಿದ್ದರಿಂದ ಈ ರೀತಿ ಕಡಿಮೆಯಾಗಿದೆ. ಆದುದರಿಂದ ಇದು ನಿಜ ಎಂದು ಇವತ್ತೂ ಕೂಡ ನಾನು ಹೇಳುತ್ತೇನೆ. ಎಂಸಿಐ ರೆಗ್ಯುಲೇಷನ್ ಪ್ರಕಾರ M.C.I. is only a recommendatory body. It is the Government of India which is giving the ultimate approval for everything, including starting of Medical Colleges, increasing the intake in any College, starting of post-Graduate course under section on 10A, 10B and 10C. ನಮ್ಮ ಇದೇ ಉಚ್ಛನ್ಯಾಯಾಲಯದವರೂ ಕೂಡ ಸೆಕ್ಷನ್ 10 ಎಬಿಸಿ ಎಂದು ಏನಿದೆ ಇದನ್ನು 1956ರ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆ್ಯಕ್ಟ್‌ಗೆ 1973ನೇ ಇಸವಿಯಲ್ಲಿ ತಂದಂಥ ತಿದ್ದುಪಡಿಯಾಗಿದ್ದು ಇದು ದಿನಾಂಕ 1.6.1992ರಿಂದ ಜಾರಿಗೆ ಬಂದಿತು. It has got only prospective effect It has no retrospective effect ಎಂದು ಅವರು ಹೇಳುತ್ತಾರೆ. ಇಷ್ಟೆಲ್ಲಾ ನಾವು ಮಾಡಿರತಕ್ಕಂಥಾದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಮಕ್ಕಳಿಗೆ ಹೆಚ್ಚುವರಿ ಸೀಟು ಸಿಗಲಿ ಎಂಬ ಉದ್ದೇಶದಿಂದ, ಡಿವಿಜನಲ್ ಬೆಂಚಿನ ಆಜ್ಞೆಯ ಹಿನ್ನೆಲೆಯಲ್ಲಿ. ಆದರೇನು ಮಾಡುವುದು it is a fait accompli. ಇದರ ಮೇಲೆ ಮೇಲ್ಮನವಿ ಮಾಡುವುದಕ್ಕೆ ಅವಕಾಶ ಇಲ್ಲ. ಸರ್ವೋಚ್ಛ ನ್ಯಾಯಾಲಾಯದ ಮೇಲೆ ಇನ್ನೊಂದು ಮೇಲ್ಮನವಿ ಮಾಡುವುದಕ್ಕೆ ಅವಕಾಶ ಇದ್ದಿದ್ದರೆ ನಾವು ಇದನ್ನು ಮಾಡುತ್ತಿದ್ದೆವು. ಕಾಂಪ್ರಹೆನ್ಸೀವ್ ಲೆಜಿಸ್ಲೇಷನ್ ಮಾಡಲಿಕ್ಕೆ ಇರತಕ್ಕಂತಹ ಅವಕಾಶ ಇದೆ ಎಂದು ಹೇಳತಕ್ಕಂಥಾದ್ದು ಒಂದು ಪ್ರಶ್ನೆ. ಸಮಗ್ರ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಅಡ್ಮಿಷನ್ಸ್ ನೀತಿ ಇದೆಯಲ್ಲಾ ಅವರು ಮಾಡಿರತಕ್ಕಂತಹ ಸ್ಕೀಮ್ 1992ನೇ ಇಸವಿಯಲ್ಲಿ ಯಾವುದು ಇದೆ ಇದರ ಕಡೆಗೆ ನಾವು ಗಮನ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಸುಪ್ರೀಂ ಕೋರ್ಟಿಗೆ ನೀವೇ ಸ್ಕೀಮ್ ಮಾಡಿ ಎಂದು ಹೇಳಿದರು. ಸುಪ್ರೀಂ ಕೋರ್ಟಿನವರು ಸ್ಕೀಮ್ ಮಾಡಿ ಗೈಡ್ ಲೈನ್ಸ್ ಕೊಟ್ಟರು. ಆ ಗೈಡ್‌ಲೈನ್ಸ್ they have become law now. All these issues have been referred to the Seven Member Divisional Bench. Subsequently, the Supreme Court has said, since the matter involved Articles 26 and 30, linguistic minorities and the deemed Universities status, let all these matters go before the Member Constitutional Bench/Committee of the Supreme Court. It is before them. ಏನು ಮಾಡುವುದಕ್ಕಾಗುತ್ತದೆ? ಸರಕಾರಕ್ಕೆ ತಾವು ಹೇಳಬಹುದು. ಇದು 3-4 ವರ್ಷದಿಂದ ಅಲ್ಲ. ಪ್ರತಿ ವರ್ಷವೂ ನಾವು ಮಾಡುತ್ತಿದ್ದೇವೆ. ಈ ಎಲ್ಲಾ ಸಂಗತಿಗಳು ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಎಲ್ಲರೂ ಇಂಟೀರಿಯಮ್ ಆರ್ಡರ್ ಪ್ರಕಾರ no final order has been passed.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಹಾರಾಷ್ಟ್ರದಲ್ಲಿ ಪ್ರಾಥಮಿಕ ಶಾಲಾ ಮಕ್ಕಳ ಅಡ್ಮಿಷನ್‌ಗೆ ಪರ್ಟಿಕ್ಯುಲರ್ ಏರಿಯಾ ಜೋನ್ ಫಿಕ್ಸ್ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಸೆಂಟ್

ಜೋಸೆಫ್ ಕಾಲೇಜು ಸ್ಕೂಲ್ ಇದೆ ಅಲ್ಲಿ ಅಡ್ಮಿಷನ್ ಕೊಡಬೇಕಾದರೆ ಒಂದು ಏರಿಯಾ ಫಿಕ್ಸ್ ಮಾಡಿದ್ದಾರೆ. Admissions for primary schools -For example, for St. Joseph College 75% of the residents of that area and 25% from outside. ಹೀಗೆ ಜೋನ್ ಮಾಡಿದ್ದಾರೆ. That has been upheld. ಹಾಗ ಇದಕ್ಕೂ ಕೂಡ ಅಂದರೆ ಮೆಡಿಕಲ್ ಕಾಲೇಜ್‌ಗೆ ನಮ್ಮ ರಾಜ್ಯದವರಿಗೆ ಇಷ್ಟು ಜನ ಇಷ್ಟು ಇನ್‌ಟೇಕ್ ಎಂದು ನಮ್ಮ ಕಾನೂನನ್ನು ಹಾಗೂ ರೆಗ್ಯುಲೇಷನ್ ಮಾಡಿಕೊಂಡು ಅಮೆಂಡ್‌ಮೆಂಟ್ ಮಾಡಿದರೆ ಏಕೆ ಮಾಡುವುದಕ್ಕೆ ಬರುವುದಿಲ್ಲ?

ಶ್ರೀ ಎಂ.ಸಿ. ನಾಣಯ್ಯ : ಇದನ್ನೆಲ್ಲ ನೋಡಿದ್ದೇನೆ. ಮೆಡಿಕಲ್ ಕಾಲೇಜ್ ಪ್ರೊಫೆಷನಲ್ ಕಾಲೇಜ್‌ಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಇದರ ಜೊತೆಯಲ್ಲಿ ಮೆಡಿಕಲ್, BDS. ಇಂಜಿನಿಯರಿಂಗ್ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಈ ಇಷ್ಯೂಸ್ ಏನು ಇದೆ ಇದೆಲ್ಲಾ ಸುಪ್ರೀಂ ಕೋರ್ಟಿನ ಮುಂದೆ ಹೋಗಿ it has been referred to 11 Members Bench. ಲೆಜಿಸ್ಲೇಷನ್ ಮಾಡುವುದಕ್ಕೆ ಇರತಕ್ಕಂಥಾದ್ದು ನಿಜ, because it is under the concurrent list. ಈಗ ಮೆಡಿಕಲ್ ಕೌನ್ಸಿಲ್ ರೆಗ್ಯುಲೇಷನ್ ಯಾವುದು ಇದೆ ಇದನ್ನು 1986ರಲ್ಲಿ ಮಾಡಲಾಗಿದೆ. ಇದಕ್ಕೆ 2.4.1993ರಲ್ಲಿ ಪ್ರೆಸಿಡೆಂಟ್ ಅಸೆಂಟ್ ಕೊಟ್ಟರು. But, they have made it applicable right from 1.6.1992 onwards. ಈ ಪರಿಸ್ಥಿತಿ ಬಂದಾಗ ಕಾನೂನನ್ನು ಮಾಡಬೇಕು ಈಗ ಎಂದರೆ ನಾವು ಕಾನೂನನ್ನು ಏನು ಮಾಡಬೇಕು? They say, for medical colleges and BDS - 15% management quota, 35% payment seats and 50 % free quota. ಬಾಕಿ ಇರತಕ್ಕಂಥಾದ್ದಕ್ಕೆ 35 ಪರ್ಸೆಂಟ್ ಪೇಮೆಂಟ್ 50 ಪೇಮೆಂಟ್ ಫ್ರೀ ಕೋಟಾ. These are the guidelines of the Supreme Court. This has gone before the Supreme Court. ಇದರ ಬಗ್ಗೆ ತಾವೇನು ಮಾಡುತ್ತೀರಿ?

SRI M. MALLIKARJUN KHARGE : This is in absence of your law. If there is law and if there is an Act, such things will not come. If there is no law, naturally these things will come up.

ಶ್ರೀ ಎಂ. ಸಿ. ನಾಣಯ್ಯ : ಇದರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಗೆ ಬಂತು. ಇದೇ ವಿಚಾರದಲ್ಲಿ ಮಹಾರಾಷ್ಟ್ರದಲ್ಲಿ ಬಂತು. ಮಹಾರಾಷ್ಟ್ರದಲ್ಲಿ ರೀಜನಲ್ ರೆಪ್ರಸೆಂಟೇಷನ್ ಎಂದು ಹೇಳಿದಿರಲ್ಲಾ. ಈ ರೀಜನಲ್ ರೆಪ್ರಸಂಟೇಷನ್ ಎಂದು ಹೇಳತಕ್ಕಂಥಾದ್ದು ಏನು ಇದೆ, ಇದು there it had gone to the High Court and the High Court had struck down the same. ಇದನ್ನು ನಾವು ಮಾಡಿರತಕ್ಕಂಥಾದ್ದು ಕರ್ನಾಟಕದ ಮಕ್ಕಳಿಗೆ ಅನುಕೂಲವಾಗಲಿ ಎಂದು 715 ಸೀಟು ಸಿಕ್ಕುವುದು ಕರ್ನಾಟಕದ ಮಕ್ಕಳಿಗೆ ತಾನೇ ಬಾಕಿ ಯಾರಿಗೂ ಇದರಿಂದ ಯಾವ ಲಾಭವೂ ಆಗುವುದಿಲ್ಲ. ಇದನ್ನು ಡಿವಿಜನಲ್ ಬೆಂಚಿನ ಜಡ್ಜ್‌ಮೆಂಟ್ ಆಧಾರದ ಮೇಲೆ ಅವರು ತೀರ್ಪನ್ನು ಕೊಟ್ಟಾದ ಮೇಲೆ ಆ ತೀರ್ಪಿನ ಹಿನ್ನೆಲೆಯಲ್ಲಿ ನಾವು ಮಾಡಬೇಕೋ ಬೇಡವೋ? 19ನೇ ತಾರೀಖಿನಲ್ಲಿ ಆ ತೀರ್ಪಿನ

ಹಿನ್ನೆಲೆಯಲ್ಲಿ ಒಂದು ಆಂತರಿಕ ಆಜ್ಞೆಯನ್ನು ಕೊಡುತ್ತಾರೆ. ಇಂಟೀರಿಯಮ್ ಆರ್ಡರ್ ಕೊಡುತ್ತಾರೆ. ಅಂತೂ ನಾವು ಕ್ಲಾರಿಫಿಕೇಟರಿ ಆರ್ಡರ್ ಅನ್ನು ಕೇಳಿದಾಗ ಕೂಡ ಅವರು they said 'no' and the decision of the divisional bench will prevail. We will hear your writ petition tomorrow. What can be done. ದಯವಿಟ್ಟು ಹೇಳಿ. ವಿದ್ಯಾರ್ಥಿಗಳಿಗೆ, ಪೋಷಕರಿಗೆ ನಾವು ಮಾಡುತ್ತಿರುವುದರಿಂದ ತೊಂದರೆಯಾಗಿದೆ ನಿಜ. But, we have made honest efforts to get as many seats as possible for Karnataka students. ದಯವಿಟ್ಟು ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ.

ಶ್ರೀ ಬಿ. ಸುರೇಶ್ ಕುಮಾರ್ : ಇವತ್ತೇನು ಕಾನೂನು ಸಚಿವರು ವಾದ ಮಾಡಿದರು, ಇದನ್ನೇ ಸುಪ್ರೀಂ ಕೋರ್ಟಿನ ಮುಂದೆ ಹೇಳಿದ್ದಿದ್ದರೆ ಅನುಕೂಲವಾಗುತ್ತಿತ್ತು.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಅವರು ಏನು ಮಾಡುತ್ತಾರೆ ಎಂದರೆ, after all, the judgement of the divisional bench is under question. You can file your objections within a period of four weeks ಎಂದು ಹೇಳಿದ್ದಾರೆ. All the managements will file their objections also within a period of four weeks. We are asking the Supreme Court to expedite it. Let there be a finality to it. We are doing it. For the last 15 days, everything is meticulously worked out. But, unfortunately, what to do, it has gone against us. ಇದಕ್ಕಿಂತ ಜಾಸ್ತಿ ರಾಜ್ಯ ಸರಕಾರದಿಂದ ಏನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಸುರೇಶ್ ಕುಮಾರ್ : ಸರಕಾರ ಈ ವಿಚಾರದಲ್ಲಿ ಮಾನ್ಯ ಸಚಿವರು ಏನೇ ಹೇಳಿದರೂ ಕೂಡ ಎಷ್ಟು ಜವಾಬ್ದಾರಿಯಿಂದ ಎಷ್ಟು ಎಚ್ಚರಿಕೆಯನ್ನು ಆ ಮಕ್ಕಳ ಜೀವನದಲ್ಲಿ ವಿಚಾರ ಮಾಡಬೇಕಾಗಿತ್ತು ಅಷ್ಟು ಜವಾಬ್ದಾರಿ ತೆಗೆದುಕೊಂಡಿಲ್ಲ. ಬೇರೆ ಎಲ್ಲಾ ವಿಚಾರದಲ್ಲೂ ತೆಗೆದುಕೊಂಡಿರುವ ತೋರಿಸಿರುವ ಉಡಾಫೆತವನ್ನೇ ಇದರಲ್ಲೂ ತೋರಿಸಿದ್ದಾರೆ. ಎಂ.ಸಿ.ಐ ನಲ್ಲಿ ಇತ್ಯರ್ಥವಾಗುವವರೆಗೆ ಅವರೇನು ಫಿಕ್ಸ್ ಮಾಡಿದ್ದಾರೆ ಅದನ್ನು ತೆಗೆದುಕೊಂಡು ಬೇರೆ ಹುಡುಗರಿಗೆ ಈ ರೀತಿ ವಂಚನೆಯಾಗಬಾರದಿತ್ತು. ಎಲ್ಲಾ ವಿಧದಲ್ಲೂ ಕೂಡ ಈ ಸರಕಾರ ಸೋತಿದೆ ಎಂದು ನಾನು ಹೇಳುತ್ತೇನೆ.

+ ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೇ, ಪ್ರಾಂತ್ಯ ರಚನೆಯಾಗುವುದಕ್ಕಿಂತ ಮೊದಲು ಫಜಲ್ ಆಲಿ ಕಮಿಷನ್ ರಿಪೋರ್ಟ್, ಎಸ್‌ಆರ್‌ಸಿ ಕಮಿಷನ್ ವರದಿಯಲ್ಲಿ ರೆಕಮಂಡೇಷನ್ ಇದೆ. ನಮ್ಮ ಸಂವಿಧಾನದಲ್ಲಿ ಪ್ರಾವಿಷನ್ ಇದೆ. ಹಿಂದುಳಿದ ಭಾಗಗಳನ್ನು ಮುಂದೆ ತರಲಿಕ್ಕೆ ರಾಜ್ಯ ಸರಕಾರ ಬೋರ್ಡ್‌ಗಳನ್ನು ಮಾಡಬಹುದು. ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲವು ಮೀಸಲಾತಿಯನ್ನು ಇಡಬಹುದು ಹಾಗೂ ಹಿಂದುಳಿದ ಪ್ರದೇಶಗಳಿಗೆ ಅನುಕೂಲ ಮಾಡಬಹುದು. ಅದೇ ರೀತಿ ಸರಕಾರಿ

ನೌಕರಿಗಳಲ್ಲಿ ಕೂಡ ಹಿಂದುಳಿದ ಪ್ರದೇಶಗಳು ಎಲ್ಲಿ ಇವೆ ಆಯಾಯ ರಾಜ್ಯಗಳಿಗೆ ತಾವು ಕಾನೂನು ಮಾಡುವುದಕ್ಕೆ ಪ್ರಾವಿಷನ್ ಇದೆ. ಆ ರೀತಿಯಲ್ಲಿ ಭಾಷಾವಾರು ಪ್ರಾಂತ್ಯ ರಚನೆ 1956 ರಲ್ಲಿ ಆದ ನಂತರ ಅನೇಕ ಪ್ರಾಂತ್ಯಗಳು ಒಡೆಯಿತು. ಅದೇ ರೀತಿ ನಮ್ಮ ಹೈದರಾಬಾದ್ ಸ್ಟೇಟ್ ಕೂಡ ಒಡೆದು 8 ಜಿಲ್ಲೆಗಳು ಆಂಧ್ರಕ್ಕೆ ಹೋಯಿತು 5 ಜಿಲ್ಲೆಗಳು ಮಹಾರಾಷ್ಟ್ರಕ್ಕೆ ಹೋದವು ಬೀದರ್ ಗುಲ್ಬರ್ಗಾ, ರಾಯಚೂರು, ಇವುಗಳು ಕರ್ನಾಟಕಕ್ಕೆ ಸೇರಿದವು. ಮಹಾರಾಷ್ಟ್ರದಲ್ಲಿ ಹೋದ ಭಾಗ ಮತ್ತು ಆಂಧ್ರಕ್ಕೆ ಹೋದ ಭಾಗದ ಪರಿಸ್ಥಿತಿ ಬೇರೆ ಇದೆ. ಕರ್ನಾಟಕಕ್ಕೇನು ಈ ಮೂರು ಜಿಲ್ಲೆಗಳು ಬಂದು ಸೇರಿದವು ಇವುಗಳ ಪರಿಸ್ಥಿತಿ ಬಹಳ ಹಿಂದುಳಿದಿದೆ. ಹಿಂದುಳಿದ ಪ್ರದೇಶವೆಂದು ಅನೇಕ ಹೋರಾಟದನಂತರ ಹೈದರಾಬಾದ್ ಕರ್ನಾಟಕ ಬೋರ್ಡ್ ಎಂದು ಮಾಡಲಾಯಿತು. ಎಜ್ಯುಕೇಷನ್‌ನಲ್ಲಿ ಸರಕಾರಿ ನೌಕರಿಗಳಲ್ಲಿ ಕೂಡ ಬಹಳ ತಾರತಮ್ಯ ಇದೆ ಎಂದು ಶಾಸಕರಾದ ಮಾನ್ಯ ಕಡಪಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿದ್ದು ಇಂತಿಂತಹ ಜಿಲ್ಲೆಗಳಲ್ಲಿ ನೌಕರಿ ಸಿಗುತ್ತಿಲ್ಲವೆಂದು ವರದಿ ಕೊಟ್ಟಿದ್ದಾರೆ. ರೆಕ್ರೂಟ್‌ಮೆಂಟ್ ಸಿಸ್ಟಂ ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಆದರೆ ಇಲ್ಲಿಯ ತನಕ ಆ ವರದಿಯ ಬಗ್ಗೆ ಯಾವುದೇ ಇಂಪ್ಲಿಮೆಂಟೇಷನ್ ಆಗಿಲ್ಲ. ಪ್ರೊಫೆಷನಲ್ ಎಜ್ಯುಕೇಷನ್ ಅದರಲ್ಲೂ ವಿಶೇಷವಾಗಿ ಮೆಡಿಕಲ್, ಇಂಜಿನಿಯರಿಂಗ್ ಬಗ್ಗೆ ತಾವು ಹೇಳಿದ ಪ್ರಕಾರ ಸುಮಾರು 2000 ಜನ ವಿದ್ಯಾರ್ಥಿಗಳು ಪ್ರತಿ ವರ್ಷ ಮೆಡಿಕಲ್ ಕಾಲೇಜಿಗೆ ಅಡ್ಮಿಷನ್ ತೆಗೆದುಕೊಳ್ಳುತ್ತಾರೆ. ಬೀದರ್, ಗುಲ್ಬರ್ಗಾ, ರಾಯಚೂರುಗಳಿಂದ ಪ್ರಪೋರ್ಷನೇಟ್ ಆಗಿ ಅಲ್ಲಿನ ಜನಸಂಖ್ಯೆ, ಹಿಂದುಳಿದ ಜಿಲ್ಲೆಗಳು ಬೇರೆ ಆ ಜಿಲ್ಲೆಗಳಲ್ಲಿ ಅಷ್ಟು ರೆಪ್ರಸಂಟೇಷನ್ ಸಿಗುವುದಿಲ್ಲ. ಸ್ಟೇಟ್ ಲೆವಲ್‌ಗೆ ಒಂದು ಬೋರ್ಡ್ ಅಂದರೆ ಪಿ ಯು ಸಿ ಬೋರ್ಡ್ ಇದೆ ಇದೂ ಕೂಡ ಸ್ಟೇಟ್ ಲೆವಲ್ ಬೋರ್ಡ್. ಮಹಾರಾಷ್ಟ್ರದಲ್ಲಿ ಆಂಧ್ರದಲ್ಲಿ ಇಂತಹ ವ್ಯವಸ್ಥೆ ಇಲ್ಲ. ಅಲ್ಲಿ 10ನೇ ಕ್ಲಾಸ್ ಆದ ನಂತರ ಎರಡು ವರ್ಷದ ಕ್ಲಾಸ್ 12ನೇ ಕ್ಲಾಸ್ ಎಂದು ಹೇಳುತ್ತಾರೆ. ಅಲ್ಲಿ ಪಿ ಯು ಸಿ ಬೋರ್ಡ್ ಇಲ್ಲ. ಅದರಲ್ಲಿ ಏನು ಮೆರಿಟ್ ಇಡುತ್ತಾರೆ ಅದನ್ನು ಪ್ರಾಂತ್ಯ ವೈಸ್ ಸಿಗುತ್ತಿದೆ. ಮರಾಠವಾಡದಲ್ಲಿ 5 ಜಿಲ್ಲೆಗಳು ಇವೆ. ಔರಂಗಬಾದ್ ಯೂನಿವರ್ಸಿಟಿ ಮೆರಿಟ್ ಬೇರೆಯೇ ಸಿಗುತ್ತದೆ. ವಿದರ್ಭದ ಮೆರಿಟನ್ನು ಬೇರೆಯೇ ತೆಗೆಯುತ್ತಾರೆ. ಪೂನಾ ಅಥವಾ ಪಶ್ಚಿಮ ಮಹಾರಾಷ್ಟ್ರ, ರೆಸ್ಟ್ ಆಫ್ ದಿ ಮಹಾರಾಷ್ಟ್ರ ಮೆರಿಟನ್ನು ಬೇರೆಯೇ ತೆಗೆಯುತ್ತಾರೆ. ಹೀಗೆ ತೆಗೆದಾಗ ಹೈಯಸ್ಟ್ ಯಾರು ಇರುತ್ತಾರೋ ಅವರಿಗೆ 70 ಪರ್ ಸೆಂಟ್ ರಿಸರ್ವೇಷನ್ ಆಯಾ ಭಾಗದಲ್ಲಿ ಹಾಕುತ್ತಾರೆ. 30 ಪರ್‌ಸೆಂಟ್ ಮಾತ್ರ ಇದು ಇಡೀ ಸ್ಟೇಟ್ ಮೆರಿಟ್ ತೆಗೆಯುತ್ತಾರೆ. ಇದನ್ನು ನಾನು ಹೊಸದಾಗಿ ಹೇಳುತ್ತಿಲ್ಲ. ನಾನು ದೇವೇಗೌಡರ ಮಂತ್ರಿಮಂಡಲದಲ್ಲಿದ್ದಾಗ 2-8-1995ಕ್ಕೆ ಬಾಂಬೆಗೆ ಹೋಗಿದ್ದೆ. ಆಗ ನಾನು ಹೆಚ್‌ಯುಡಿ ಮಂತ್ರಿಯಾಗಿದ್ದಾಗ ವಿಶೇಷವಾಗಿ ಇದು ಹೈದರಾಬಾದ್- ಕರ್ನಾಟಕದ ವಿದ್ಯಾರ್ಥಿಗಳ ಸಮಸ್ಯೆ ಏನು ಇದೆ, ಇದನ್ನು ಅಧ್ಯಯನ ಮಾಡಲಿಕ್ಕೆ ಅಲ್ಲಿ ಹೋಗಿ ಚರ್ಚಿಸಿ ಬಂದನಂತರ ದೇವೇಗೌಡರಿಗೆ ಒಂದು ರಿಪೋರ್ಟ್ ಕೊಟ್ಟೆ. ಮತ್ತು ಅವರಿಗೆ ಸಜೆಸ್ಟ್ ಮಾಡಿದ ರೀತಿಯ ವ್ಯವಸ್ಥೆ ಇಲ್ಲೂ ಕೂಡ ಮಾಡಬೇಕಾಗಿದೆ. ಅವರೂ ಕೂಡ ಒಪ್ಪಿಕೊಂಡಿದ್ದರು. ಏಕೆಂದರೆ ಬೀದರ್‌ನಲ್ಲಿ ಒಂದು ವೆಟರ್ನರಿ ಕಾಲೇಜು ಇದೆ, ಆ ಕಾಲೇಜ್‌ನಲ್ಲಿ ಯಾರು ವಿದ್ಯಾರ್ಥಿಗಳು ಬೀದರ್ ಗುಲ್ಬರ್ಗ ಆ ಕಡೆಯ ವಿದ್ಯಾರ್ಥಿಗಳು ಕಲಿಯುವವರೂ ಇಲ್ಲ.

ಓದಿಸುವವರೂ ಇಲ್ಲ. ಎಲ್ಲಾ ಹೊರಗಿನವರು. ಬರೀ ಬಿಲ್ಡಿಂಗ್ಸ್. ಆ ಬಿಲ್ಡಿಂಗ್‌ಗೆ ಇವರು 50 ಲಕ್ಷ ರೂಪಾಯಿ ಕೊಟ್ಟರು, ಏಕೆ ಕೊಡುತ್ತೀರಿ ಎಂದು ಹೇಳಿ ಇದನ್ನು ಬೆಂಗಳೂರುಗೆ ಷಿಫ್ಟ್ ಮಾಡಿ ಎಂದಾಗ ಅವರು ಒಪ್ಪಿಕೊಂಡಿದ್ದರು. ದೇವೇಗೌಡರು ಅದರ ಬಗ್ಗೆ ಒಪ್ಪಿಕೊಂಡಿದ್ದರು. ಏನೋ ಹೊಸ ವ್ಯವಸ್ಥೆ ಮಾಡೋಣ ಎಂದರು. ಆದರೆ ಅವರು ಮಾಡಲಿಲ್ಲ. ಕಡೆಗೆ ಅವರು ಪ್ರಧಾನಮಂತ್ರಿಯಾಗಿ ಹೋದರು. ಮಾನ್ಯ ಪಟೇಲರಿಗೆ ಕೂಡ ನಾನೊಂದು ಪತ್ರ 7-11-1996ಕ್ಕೆ ಬರೆದೆ. ಆದರೂ ಅವರೂ ಕೂಡ ಇದರ ಬಗ್ಗೆ ಲಕ್ಷ್ಯ ವಹಿಸಿಲ್ಲ. ಈ ಸಲ ಈ ವರ್ಷ ಸಿ.ಇ.ಟಿ. ಪರೀಕ್ಷೆ ಆಗುವುದಕ್ಕೆ ಮೊದಲೇ ಮುಖ್ಯಮಂತ್ರಿ ಪಟೇಲರಿಗೆ ಎರಡು ಮೂರು ಸಲ ಭೇಟಿಯಾಗಿ ಇದರ ಬಗ್ಗೆ ಆರ್ಗ್ಯುಮೆಂಟ್ ಮಾಡಿದೆ. ಮಹಾರಾಷ್ಟ್ರದಲ್ಲಿ ಏನು ವ್ಯವಸ್ಥೆ ಇದೆ, ನಮ್ಮಲ್ಲಿ ಕೂಡ ಇದನ್ನು ತನ್ನಿ ಎಂದು. ಇದರ ಸಲುವಾಗಿ ಅಬ್ಸಟಕಲ್ ಏನು ಬರುತ್ತದೆ ಎಂದರೆ ಇದು ಕಾನ್ಸ್‌ಸ್ಟಿಟ್ಯೂಷನಲ್ ಅಬ್ಸಟಕಲ್ಸ್ ಕೆಲವು ಬರುತ್ತವೆ. ಅದರ ಸಲುವಾಗಿ ಮಹಾರಾಷ್ಟ್ರದಲ್ಲಿ ಮಹಾರಾಷ್ಟ್ರದ ಲೀಡರ್ಸ್ ಕೇಂದ್ರದಲ್ಲಿ ಪ್ರಭಾವ ಬೀರಿ ಆರ್ಟಿಕಲ್ 371ಕ್ಕೆ ಅಮೆಂಡ್‌ಮೆಂಟನ್ನು ತಂದಿದ್ದಾರೆ. ಆಂಧ್ರದವರು ಕೂಡ 371ಕ್ಕೆ ಅಮೆಂಡ್ ಮಾಡಿ ಎಬಿಸಿಡಿ ಅದರಲ್ಲಿ ಅಧಿಕಾರವನ್ನು ಕೊಡುತ್ತಾರೆ ರಾಜ್ಯ ಸರ್ಕಾರಗಳಿಗೆ. ರಾಜ್ಯಸರ್ಕಾರಗಳು ತಮಗೆ ಬೇಕಾದರೆ ಹಿಂದುಳಿದ ಪ್ರದೇಶದ ಸಲುವಾಗಿ ಸರ್ಕಾರಿ ನೌಕರಿಯಲ್ಲೇ ಆಗಲಿ, ಅಥವಾ ಪ್ರೊಫೆಷನಲ್ ಕೋರ್ಸುಗಳ ಸಲುವಾಗಿ ಆಗಲಿ ಬೇಕಾದ ಕಾನೂನು ಮಾಡಬಹುದು ಎಂದು ಒಂದು ಅಮೆಂಡ್‌ಮೆಂಟ್ ತಂದಿದ್ದರು. ದುರ್ದೈವದಿಂದ ಆ ಭಾಗಕ್ಕೆ ಆ ಕಾಲಕ್ಕೆ ನಮ್ಮ ಭಾಗದವರು ಯಾರೂ ಪ್ರಭಾವ ಬೀರಲಿಕ್ಕಿಲ್ಲ. ಅದರ ಬಗ್ಗೆ ಆಮೇಲೆ ಬರುತ್ತೇನೆ. ಆದರೆ ಅಲ್ಲಿ ಕಾನೂನನ್ನು ಮಾಡಿದ್ದಾರೆ. ಏಳು ವರ್ಷದಿಂದ ಇವತ್ತು ಮಹಾರಾಷ್ಟ್ರದಲ್ಲಿ ಈ ರೀತಿಯಲ್ಲಿ ಅಡ್ಮಿಷನ್ ಕೊಡುತ್ತಾರೆ. 70 ಪರ್‌ಸೆಂಟ್ ರಿಸರ್ವೇಷನ್ ಫಾರ್ ಅದರ್ ಏರಿಯಾಸ್, 30 ಪರ್‌ಸೆಂಟ್ ಮಾತ್ರ ಬಹಳ ಎಕ್ಸ್‌ಟ್ರಾರ್ಡಿನರಿ ಸ್ಟೂಡೆಂಟ್ಸ್ ಸಲುವಾಗಿ ಒಂದು ಆರ್ಡರ್ ತಯಾರು ಮಾಡುತ್ತಾರೆ. ಇಷ್ಟೆಲ್ಲಾ ಮಾಡಿದನಂತರವೂ ಚರ್ಚೆಯಾಯಿತು. ಇವರ ಜೊತೆ ಚರ್ಚೆಯಾಗಲೇ ಇಲ್ಲ. ಸ್ಟ್ರೈಕ್ ಡೌನ್ ಮಾಡಿದ್ದಾರೆ, ಅದರ ನಂತರ ಮತ್ತೆ ನಾನು ಬಾಂಬೆಯಲ್ಲಿನ ಡೀನ್ ಆಫ್ ಮೆಡಿಕಲ್ ಕಾಲೇಜು ರವರ ಸಂಗಡ ಎಲ್ಲಾ ಕಡೆ ಮಾತನಾಡಿದೆ. ಇಲ್ಲ, ನಾವು ಏಳು ವರ್ಷದಿಂದ ಯಾವ ರೀತಿ ಅಡ್ಮಿಷನನ್ನು ಕೊಟ್ಟಿದ್ದೇವೆ ಅಂದರೆ 70 ಪರ್‌ಸೆಂಟ್ ರಿಸರ್ವೇಷನ್ ಫಾರ್ ಅದರ್ ಯೂನಿವರ್ಸಿಟಿಸ್, ವಿದರ್ಭ ಅಂಡ್ ಮರಾಠವಾಡ, 30 ಪರ್‌ಸೆಂಟ್ ಸ್ಟೇಟ್ ಮೇಲೆ ಕೊಟ್ಟಿದ್ದೇವೆ ಎಂದು ನನ್ನ ಹತ್ತಿರ ಡೀನ್ ಮಾತನಾಡಿದ್ದಾರೆ. ಸ್ಟ್ರಕ್ ಡೌನ್ ಆಗಿರುವ ಬಗ್ಗೆ ಆರ್ಡರನ್ನು ತರುವುದಕ್ಕಾಗುವುದಿಲ್ಲವೇ? ಸರ್ಕಾರ ಹೋಗಿ ಆರ್ಡರ್ ಅಥವಾ ಜಡ್ಜಮೆಂಟ್‌ನ್ನು ತೋರಿಸುವುದಕ್ಕಾಗುವುದಿಲ್ಲವೇ? ತೋರಿಸಿ. ಇದು ಏನೂ ಆಗಿಲ್ಲ. ಅದರ ಸಲುವಾಗಿ ಒಂದುಕಡೆ ಅಮೆಂಡ್‌ಮೆಂಟ್ ತರುವುದಕ್ಕೆ ಪ್ರಯತ್ನ ಮಾಡಬೇಕು. ನಾಳೆ ಎಂಥದೋ ಸ್ಟ್ರಕ್ ಡೌನ್ ಮಾಡಿದರೆ ಆದರೂ ಕೂಡ ಮತ್ತೆ ಆರ್ಡಿನೆನ್ಸ್ ತರಬೇಕು with regard to Privy Purses Abolition ಕೋರ್ಟು ಸ್ಟ್ರಕ್ ಡೌನ್ ಮಾಡಿತ್ತು. Likewise, with regard to banks nationalisation ಬಗ್ಗೆಯೂ ಮಾಡಿತ್ತು. Court is not final. ಸೋಷಿಯಲ್ ಛೇಂಜ್ ಕಾಲಕ್ಕೆ ಕೋರ್ಟು ಮಧ್ಯದಲ್ಲಿ ಬಂದರೆ ಅದನ್ನು ಹತ್ತಿಕ್ಕುವ ಸಲುವಾಗಿ ಸರ್ಕಾರದ ಕರ್ತವ್ಯ ಇರುತ್ತದೆ. ಪುನಃ

ಪುನಃ ನಾವು ಕಾನೂನು ಮಾಡಿ ಕೋರ್ಟನ್ನು ಮಣಿಸಬೇಕಾಗುತ್ತದೆ. ಕೋರ್ಟೆ ಅಂತಿಮವಲ್ಲ. ಅವರು ಏನು ಮಾಡಿದರೂ ಕೇಳಬೇಕೆಂದಿಲ್ಲ. ಜನರು ನಮಗೆ ಕೋರ್ಟ್ ಹೇಳಿದ್ದನ್ನು ಕೇಳಿ ಎಂದು ಆರಿಸಿಕಳುಹಿಸಿಲ್ಲ. ಆದರೆ ಸರ್ಕಾರದ ವತಿಯಿಂದ ಏನು ಪ್ರಯತ್ನವಾಗಿದೆ, ಮಹಾರಾಷ್ಟ್ರದವರು ಮಾಡಿದರು, ಅದಕ್ಕೆ ಸ್ಟ್ರಕ್‌ಡೌನ್ ಮಾಡಿದರು. ನಮ್ಮ ಸರ್ಕಾರದವರು ಎಷ್ಟು ಪ್ರಯತ್ನ ಮಾಡಿದಿರಿ, ಇದನ್ನೇ ನಾನು ಕೇಳುವುದು. ನೀವೇನಾದರೂ ಪ್ರಯತ್ನ ಮಾಡಿದ್ದೀರಾ? ಅಮೆಂಡ್‌ಮೆಂಟ್ ಮಾಡುವುದು ಅಥವಾ ಇಂಥ ಕಾನೂನು ತರುವುದು, ಎರಡು ಮೂರು ಜಿಲ್ಲೆ ಕೆಟ್ಟ ಜಿಲ್ಲೆ ಇದ್ದರೂ ಇರಬಹುದು, ಅದರ ಪ್ರಭಾವ ಇಲ್ಲ ಎಂದು ಹೇಳಿ ನೆಗ್ಲೆಕ್ಟ್ ಮಾಡುತ್ತಿದ್ದೀರಿ ಪ್ರತಿಯೊಂದು ವಿಷಯದಲ್ಲಿಯೂ, ಆ ದೃಷ್ಟಿಯಿಂದ ಸರ್ಕಾರವನ್ನು ಕೇಳುವುದು ನೀವು ಪ್ರಯತ್ನ ಮಾಡಿ. ಕೋರ್ಟು ಮಾಡಿದೆ ಅಲ್ಲೆಲ್ಲೋ ಮಾಡಿದೆ, ಮಹಾರಾಷ್ಟ್ರದಲ್ಲಿ ಆ ರೀತಿ ಮಾಡಿದೆ ಬರೀ ಕಟ್ಟು ಕತೆ ಇಲ್ಲಿ ನಡೆಯುವುದಿಲ್ಲ. ನೀವು ಇಲ್ಲಿ ಅಸೆಂಬ್ಲಿಯಲ್ಲಿ ಪಾಸ್ ಮಾಡಿ ಅಮೆಂಡ್‌ಮೆಂಟ್ ಮಾಡುವ ಸಲುವಾಗಿ. ಮತ್ತೊಂದು ಕಾನೂನು ಮಾಡಿ. ಇಂಥ ಹಿಂದುಳಿದ ಪ್ರದೇಶಗಳ ಸಲುವಾಗಿ ಇಷ್ಟು ಸೀಟುಗಳನ್ನು ರಿಸರ್ವ್ ಮಾಡಿದ್ದೇವೆಂದು ಹೇಳಿ. ಇಲ್ಲದಿದ್ದರೆ ಇವತ್ತು ಎರಡು ಸಾವಿರ ಸೀಟಿನಲ್ಲಿ ಗುಲ್ಬರ್ಗ, ಬೀದರ್ ವಿಭಾಗದವು 30-40-50 ಜನ ಡಾಕ್ಟರ್ಸ್ ಆಗುತ್ತಿಲ್ಲ. ಡಾಕ್ಟರ್ ಆಗುತ್ತಿಲ್ಲ ಎಂದರೆ ಬೇರೆ ಕಡೆಯಿಂದ ಆಗುವವರು ಅಲ್ಲಿ ಅಪಾಯಿಂಟ್‌ಮೆಂಟ್ ಆದರೂ ಬರುವವರಿಲ್ಲ. ದವಾಖಾನೆಗಳೆಲ್ಲಾ ಖಾಲಿ. ವೆಟರ್‌ನರಿ ಕಾಲೇಜುಗಳಿಗೂ ಯಾರೂ ಬರುವುದಿಲ್ಲ. ಯುಕೆಪಿ ಯಲ್ಲಿ ಕೆಲವು ಇಂಜಿನಿಯರ್ ಸಲುವಾಗಿ ಮೊದಲಿನ ಸರ್ಕಾರದವರು ಏನೋ ಪುಣ್ಯ ಕಟ್ಟಿಕೊಂಡಿದ್ದಾರೆ 300 ಜನರಿಗೆ ಅದೇ ಭಾಗದವರಿಗೆ ಅಪಾಯಿಂಟ್ ಮಾಡಬೇಕೆಂದು ಮಾಡಿದ್ದಾರೆ. ಅದನ್ನೂ ಕೂಡ ಇವತ್ತು ಛಾಲೆಂಜ್ ಮಾಡಿದ್ದಾರೆ. ಇಲ್ಲಿದ್ದಿದ್ದರೆ ಅಲ್ಲಿ ಯುಕೆಪಿ ಯಲ್ಲಿ ಕೆಲಸವೇ ನಡೆಯುತ್ತಿರಲಿಲ್ಲ. ಅದೇ ಭಾಗದಲ್ಲಿರುವವರನ್ನು ಮಾಡಿದ್ದರಿಂದ ಇವತ್ತು ಕೆಲಸ ನಡೆಯುತ್ತಿದೆ ಇಂಥ ವ್ಯವಸ್ಥೆಮಾಡಿದರೆ ನಮ್ಮಲ್ಲಿ ಯಾವ ಆಫೀಸರ್‌ಗಳೇ ನಡೆಯುವುದಿಲ್ಲ ಮುಂದೆ. ಆ ದೃಷ್ಟಿಯಿಂದ ಸರ್ಕಾರ ಪ್ರಯತ್ನಮಾಡಬೇಕು ಬರೀ ಮಹಾರಾಷ್ಟ್ರದಲ್ಲಿ ಕೋರ್ಟು ಬಂತು ಎಂದು ಕತೆ ಹೇಳುವುದಕ್ಕೆ ಹೋದರೆ ನೀವು ಏನು ಪ್ರಯತ್ನಮಾಡಿದಿರಿ, ನಿಮ್ಮ ಪ್ರಯತ್ನ ಎಲ್ಲಿಯವರೆಗೆ ಬಂದಿದೆ? ಆ ದೃಷ್ಟಿಯಿಂದ ಈ ಸರ್ಕಾರಕ್ಕೆ ಕೇಳಿಕೊಳ್ಳುವುದು ಎಂದರೆ 371ನೇ ಆರ್ಟಿಕಲ್‌ಗೆ ಅಮೆಂಡ್‌ಮೆಂಟ್ ಮಾಡುವುದಕ್ಕೆ ಈ ಅಸೆಂಬ್ಲಿಯಲ್ಲಿ ರೆಸಲ್ಯೂಷನ್ ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಮತ್ತೊಂದು ಕಡೆ ಈ ಪ್ರೊಫೆಷನಲ್ ಕಾಲೇಜುಗಳಲ್ಲಿ ಇಂಥ ಇಂಥ ಭಾಗಗಳಿಗೆ ಇಂತಿಷ್ಟು ರಿಸರ್ವೇಷನ್ ಹೈದರಾಬಾದ್-ಕರ್ನಾಟಕಕ್ಕೆ ಇಷ್ಟು ಮತ್ತೊಂದು ಪ್ರಾಂತ್ಯಕ್ಕೆ ಯೂನಿವರ್ಸಿಟಿಗೆ ಇಷ್ಟು, ಜನರಲ್ ಮೆರಿಟ್ ಇಷ್ಟು ಎಂದು ಇಂಥ ಒಂದು ಕಾನೂನನ್ನು ತಂದು ನೋಟಿಫಿಕೇಷನ್ ಹೊರಡಿಸುವುದು ಮತ್ತು ಅದೇ ರೀತಿ ಸರ್ಕಾರಿ ನೌಕರಿಯಲ್ಲಿ ಕೂಡ ಇಂಥ ಒಂದು ಕಾನೂನನ್ನು ಮಾಡಬೇಕಾಗುತ್ತದೆ ಸರ್ಕಾರ ಪ್ರಯತ್ನಮಾಡಿದನಂತರ ಕೋರ್ಟು ಬರುತ್ತದೆ ಎಂದರೆ let us face the court. ಬರೀ ಕತೆ ಹೇಳಿದರೆ ಹೇಗೆ? ಬೇರೆಯವರು ಬರೀ ಫೋನ್ ಮೇಲೆ ಮಾಡುತ್ತಾರೆ. ಈ ತನಕ ಬಾಂಬೆಗೆ ಹೋಗಿ ಬರಬಹುದಾಗಿತ್ತು. ಹೋದ ವರ್ಷ ಎರಡು ವರ್ಷದಿಂದ ನಾವು ಪ್ರಯತ್ನಮಾಡುತ್ತಿದ್ದೇವೆ. ಯಾರೂ ಕೇಳುತ್ತಿಲ್ಲ. ಹೀಗೆ ಆಯಿತು ಎಂದರೆ ಆ ಭಾಗದವರು ಬಹಳ ನಿರಾಶೆಯಾಗಿ ಎಲ್ಲೆಲ್ಲೊ ಹೋಗಬೇಕಾಗುತ್ತದೆ. ಆ ದೃಷ್ಟಿಯಿಂದ ತಮ್ಮ ಮುಖಾಂತರ ನಾನು

ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ, ಇದರ ಬಗ್ಗೆ ಸೀರಿಯಸ್ ಆಗಿ ವಿಚಾರ ಮಾಡಿ ಎಂದು ಹೇಳುತ್ತೇನೆ.

+ ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಿಂದುಳಿದ ಪ್ರದೇಶಗಳಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಅಡ್ಮಿಷನ್ ಸಲುವಾಗಿ ಆಗತಕ್ಕಂಥ ತಾರತಮ್ಯವನ್ನು ಹೋಗಲಾಡಿಸಲಿಕ್ಕೆ ಪ್ರದೇಶವಾರು ಅಡ್ಮಿಷನ್ ಕೊಡುವುದು ಒಳ್ಳೆಯದು ಎಂದು ವೈಜನಾಥ ಪಾಟೀಲರು ಹೇಳಿದರು, ನಮ್ಮ ನಾಯಕರಾದ ಖರ್ಗೆ ಸಾಹೇಬರು ಹೇಳಿದರು. ಹೋದ ವರ್ಷ ಜುಲೈ 10ನೇ ತಾರೀಖು ಈ ಸದನದಲ್ಲಿ ಈ ವಿಷಯ ಬಂದಾಗ ವೈದ್ಯಕೀಯ ಶಿಕ್ಷಣ ಸಚಿವರು ನಮಗೆ ಸದನಕ್ಕೊಂದು ಭರವಸೆಯನ್ನು ಕೊಟ್ಟರು. ಈ ಶೈಕ್ಷಣಿಕ ವರ್ಷದಿಂದ ನಾವು ಪ್ರದೇಶವಾರು ಅಡ್ಮಿಷನನ್ನು ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟರು. ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ಎಲ್ಲಾ ನಡೆದಿರುವುದರಿಂದ ಈ ವರ್ಷ ಇದನ್ನು ಮಾಡಲಿಕ್ಕೆ ಬರುವುದಿಲ್ಲ, ಮುಂದಿನ ವರ್ಷದಿಂದ ಜಾರಿಗೆ ತರುತ್ತೇವೆ ಎನ್ನುವ ಭರವಸೆಯನ್ನು ನಮಗೆ ಕೊಟ್ಟರು. ಈ ಭರವಸೆಯನ್ನು ಈಡೇರಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ಮಾರ್ಚಿಯಲ್ಲೂ ನಾವು ಅವರಿಗೆ ನೆನಪು ಮಾಡಿ ಕೊಟ್ಟೆವು. ಮತ್ತೆ ಈಗ ಸಿ.ಇ.ಟಿ. ಪರೀಕ್ಷೆಯಾಯಿತು, ಮತ್ತೆ ಹಾಗೆ ಇಡೀ ರಾಜ್ಯಕ್ಕೆ ಒಂದೇ ಮೆರಿಟ್ ಲಿಸ್ಟ್ ಮಾಡಿ ಅಡ್ಮಿಷನ್‌ಗಳು ನಡೆದಿವೆ. ಮತ್ತೆ ನಮ್ಮ ಪ್ರದೇಶದ ಜನರಿಗೆ ಅನ್ಯಾಯವಾಗುವುದು ಈ ವರ್ಷವೂ ಕಟ್ಟಿಟ್ಟ ಬುತ್ತಿ. ಹೀಗೆ ನಾವು ಕೇಳುವುದು, ನೀವು ಹೇಳುವುದು ಎಂದು ಹೇಗೆ ಮುಂದುವರಿದರೆ ಹೇಗೆ? ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ನೀವೇನು ಕ್ರಮ ಕೈಗೊಳ್ಳುತ್ತೀರಿ? ಈಗ ಅವರು ಹೇಳಿದರು, ನಮ್ಮ ನೆರೆಯ ಮಹಾರಾಷ್ಟ್ರ ರಾಜ್ಯದೊಳಗೆ ಇದೆ. ನೀವು ಏನು ಪ್ರಯತ್ನ ಮಾಡಿದಿರಿ ಈ ತಾರತಮ್ಯವನ್ನು ಹೋಗಲಾಡಿಸಲಿಕ್ಕೆ? ದಯವಿಟ್ಟು ಗಂಭೀರವಾಗಿ ಪ್ರಕಾಶ್ ಸಾಹೇಬರು ಇದ್ದರು ಆಗ ಈ ಪ್ರಶ್ನೆ ಸದನದಲ್ಲಿ ಹೋದವರ್ಷ ಬಂದಾಗ ಪ್ರಕಾಶ್ ಸಹೇಬರು ಇದ್ದರು. ನಾವೊಂದು ಕಡಪಟ್ಟಿ ಕಮಿಟಿ ಮಾಡಿ ಇದರ ಬಗ್ಗೆ ವಿಶೇಷ ಅಧ್ಯಯನ ಮಾಡಿಸಿದ್ದೇವೆ. ಈ ತಾರತಮ್ಯವಾಗುವುದು ನಿಜ ಇದೆ. ನಾವು ಪ್ರದೇಶವಾರು ಅಡ್ಮಿಷನ್ ಆಗುವ ಹಾಗೆ ಗಂಭೀರವಾಗಿ ಇದನ್ನು ಯೋಚನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ಅವರೂ ಕೊಟ್ಟಿದ್ದರು. ಕೊಟ್ಟ ಭರವಸೆಯನ್ನು ಈಡೇರಿಸುವುದಕ್ಕೆ ನೀವೇನು ಕ್ರಮ ಕೈಗೊಳಲಿಲ್ಲ ಎಂದರೆ ನಾವೇನು ಮಾಡಬೇಕು? ಯಾವ ರೀತಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸರ್ಕಾರಕ್ಕೆ ಮುಂದೆ ಯಾವ ರೀತಿ ನಾವು ಕ್ರಮ ಕೈಗೊಳ್ಳಬೇಕು? ಯಾವ ರೀತಿ ಒತ್ತಾಯ ಮಾಡಬೇಕು? ಯಾವ ದಾರಿ ನಾವು ಹಿಡಿಯಬೇಕು? ಇದು ನಿಮ್ಮ ಪ್ರದೇಶಕ್ಕೂ ಅಷ್ಟೆ ಆಗುತ್ತದೆ. ಗದಗ್ ಜಿಲ್ಲೆಯವರಿಗೆ ಎಷ್ಟು ಅನ್ಯಾಯವಾಗುತ್ತೋ ಅಷ್ಟೇ ಬಳ್ಳಾರಿ ಜಿಲ್ಲೆಯವರಿಗೂ ಆಗುತ್ತೆ. ಗುಲ್ಬರ್ಗ ಜಿಲ್ಲೆಯವರೆಗೂ ಆಗುತ್ತದೆ. ಉಳಿದ ಎಲ್ಲಾ ಹಿಂದುಳಿದ ಜಿಲ್ಲೆ ಕೋಲಾರ ಜಿಲ್ಲೆಯವರಿಗೂ ಆಗುತ್ತದೆ. ಭೈರೇಗೌಡರ ಜಿಲ್ಲೆಗೂ ಆಗುತ್ತದೆ.

7.20 ಪಿ.ಎಂ

ಬೆಂಗಳೂರಿನಲ್ಲಿ ಇರುವಂಥವರೇ ಎಂಬಿಬಿಎಸ್ ಸೀಟು ಮತ್ತು ಇಂಜಿನಿಯರ್ ಸೀಟು ತೆಗೆದುಕೊಳ್ಳುತ್ತಾರೆ. ಆದರೆ ಸುತ್ತ-ಮುತ್ತ ಇರುವ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಇಲ್ಲಿ ಸಿಗುವಂತಹ ಸೌಲಭ್ಯ ಹಳ್ಳಿಗಳಲ್ಲಿ ಸಿಗುವುದಿಲ್ಲ. ಆದರೆ ಇವರು ಪಟ್ಟಣದ ವಿದ್ಯಾರ್ಥಿಗಳ ಜೊತೆ

ಸ್ಪರ್ಧಿಸಬೇಕು, ಸ್ಪರ್ಧಿಸಿ ಅಂಕಗಳನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಅಂತಹ ಸೌಲಭ್ಯಗಳನ್ನು ಕಲ್ಪಿಸುವುದಕ್ಕೂ ನಮಗೆ ಆಗುವುದಿಲ್ಲ. ಅದಕ್ಕೋಸ್ಕರ ಅವರು ಪ್ರದೇಶವಾರು ಅಡ್‌ಮಿಷನ್ ಕೊಡುವಂತಹ ಕ್ರಮವನ್ನು ಕೂಡಲೇ ಅವರು ಕೈಗೊಳ್ಳಬೇಕು. ಮುಂದಿನ ಶೈಕ್ಷಣಿಕ ವರ್ಷದಿಂದಲಾದರೂ ಈ ತಾರತಮ್ಯವನ್ನು ನಿಭಾಯಿಸಲಿಕ್ಕೆ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಥಮವಾಗಿ ವಿರೋಧಪಕ್ಷದ ನಾಯಕರು ಹೇಳುವಂತಹ ಸಮಯದಲ್ಲಿ ವೈದ್ಯಕೀಯ ಶಿಕ್ಷಣದಲ್ಲಿ ಇಡೀ ದೇಶದಲ್ಲಿ ಬಹಳ ಖ್ಯಾತಿಯನ್ನು ಪಡೆದಿರುವಂತದ್ದು ನಮ್ಮ ಕರ್ನಾಟಕ ರಾಜ್ಯ. ಕಾರಣ ಕಳೆದ ನಾಲ್ಕು ವರ್ಷಗಳ ಕಾಲದಿಂದ ಪ್ರತಿ ವರ್ಷ ಪಿ.ಯು.ಸಿ. ಫಲಿತಾಂಶ ಬರುತ್ತಿದ್ದ ಹಾಗೆ, ಎನ್‌ಟ್ರೆನ್ಸ್ ಎಕ್ಸಾಮ್ ಆಗುತ್ತಿದ್ದ ಹಾಗೆ, ಪ್ರತೀ ವರ್ಷ ಸಮಸ್ಯೆ, ಎಲ್ಲಿ ಯಾರು ನ್ಯಾಯಾಲಯಕ್ಕೆ ಹೋಗಿ ತಡೆ ಆಜ್ಞೆ ತರುತ್ತಾರೋ ಎನ್ನುವಂತಹ ಭಯ ಎಲ್ಲರಲ್ಲೂ ಮೂಡುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿರುವುದು. ವಿಶೇಷವಾಗಿ ಅದು ನಮ್ಮಲ್ಲೇ. ಒಂದು ದಾಖಲೆ ಪ್ರಕರಣಗಳಲ್ಲೂ ಕೂಡ ಇವತ್ತು ನ್ಯಾಯಾಲಯದಲ್ಲಿ ಇರುವಂತಹ ಮೆಡಿಕಲ್ ಎಜ್ಯುಕೇಷನ್‌ಗೆ ಸಂಬಂಧಪಟ್ಟಂತೆ ಕೇಸ್‌ಗಳಲ್ಲಿ ಶೇಕಡ 70 ಭಾಗ ಕರ್ನಾಟಕದ್ದೇ. ಕಾರಣ ಇದಕ್ಕೆ ಸಂಬಂಧಪಟ್ಟ ರೀತಿಯಲ್ಲಿ ಇವತ್ತು ಸಮಗ್ರವಾದಂತಹ ಒಂದು ಚಿತ್ರವನ್ನು ನಮ್ಮ ಮುಂದೆ ಇಡಲೇಬೇಕಾಗಿದೆ. ಕಾರಣ ಇದಕ್ಕೆ ಅಂತಿಮವನ್ನ ಹಾಡುವಂತಹ ಒಂದು ಅವಶ್ಯಕತೆ ಕೂಡ ಇದೆ. ಇಲ್ಲಿ ಪ್ರಮುಖ್ಯವಾಗಿ ನಾವು ಕಾಣುವಂತಹ ವಿಚಾರ ಎಂದರೆ, ನಮ್ಮಲ್ಲಿ ಸ್ಟಾಂಡರ್ಡ್ ಎಜ್ಯುಕೇಷನನ್ನು ಮೈಂಟೇನ್ ಮಾಡಬೇಕು ಎನ್ನುವ ಒಂದೇ ಕಾರಣಕ್ಕೋಸ್ಕರ, ಜೊತೆಗೆ ನಮ್ಮ ರಾಜ್ಯದಲ್ಲಿ ಆದಂತಹ ಸಮಸ್ಯೆಗಳು, 1992ನೇ ಇಸವಿಯಲ್ಲಿ ಯಾವ ಉನ್ನಿಕೃಷ್ಣನ್ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿ ಬಂತು. ಆ ಕೇಸಿನ ಬಗ್ಗೆ ಮತ್ತು ಕರ್ನಾಟಕ ಸರ್ಕಾರದ ವಿರುದ್ಧ ಆದಂತಹ ಜಡ್ಜ್‌ಮೆಂಟ್ ಏನಿತ್ತು 1992ರಲ್ಲಿ ಅದರ ಆಧಾರದ ಮೇಲೆ 1993ರಲ್ಲಿ ಎಂಸಿಐ ಒಂದು ಅಮೆಂಡ್‌ಮೆಂಟ್‌ನ್ನು ತಂದಿತು. ಸನ್ಮಾನ್ಯ ಕಾನೂನು ಸಚಿವರು ಹೇಳಿದಂತಹ ಮಾತು ಸತ್ಯ. 1956ರಲ್ಲಿ ಎಂಸಿಐ ಎಂದು ಒಂದು ಆ್ಯಕ್ಟ್ ಇತ್ತು. ಆದರೆ 1993ರಲ್ಲಿ 1992ರಲ್ಲಿ ಎಫೆಕ್ಟೀವ್ ಜಾರಿಗೆ ಬರುವಂತಹ ರೀತಿಯಲ್ಲಿ ಒಂದು ಆರ್ಡಿನೆನ್ಸ್ ಅನ್ನು ಹೊರಡಿಸಿತು. ಮತ್ತು ಅದರ ಜೊತೆಗೆ ಪಾರ್ಲಿಮೆಂಟ್ ಅದಕ್ಕೆ ಅನುಮೋದನೆಯನ್ನು ಕೊಟ್ಟಿತು. ಕೊಟ್ಟ ನಂತರದಲ್ಲಿ ಕೇಂದ್ರ ಸರ್ಕಾರ ಮತ್ತು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಏನಿದೆ, ಅದು ಇವತ್ತು ಪರಮೋಚ್ಚವಾದಂತಹ ಅಧಿಕಾರವನ್ನು ಹೊಂದಿರುವಂತಹದ್ದು. ಎಲ್ಲಾ ರಾಜ್ಯ ಸರ್ಕಾರಗಳೂ ಕೂಡ ಅದರ ನಿಯಮದ ಪ್ರಕಾರವೇ ನಡೆಯಬೇಕು ಎನ್ನುವ ವಿಚಾರ ಪ್ರಮುಖವಾದುದು. ಇಲ್ಲಿ1984 ರಿಂದ ಕೂಡ ನಮ್ಮರಾಜ್ಯಸರ್ಕಾರದ ಮೇಲೆ ದಾವೆಗಳು ಬರುತ್ತವೇ ಇವೆ. ಇದರಲ್ಲಿ ಪ್ರಮುಖವಾಗಿ ಆಗಿರುವಂತಹದ್ದು ಅಂದರೆ ಮೊಯಿನಿ ಜೈನ್ ವರ್ಸಸ್ ಸ್ಟೇಟ್ ಆಫ್ ಕರ್ನಾಟಕ ಇದು ಪ್ರಮುಖವಾದಂತಹ ವಿಚಾರ.

ಛೇರ್ಮನ್ : ರಾಮದಾಸ್ ಅವರು ಪ್ರಸಕ್ತ ವಿಷಯದ ಬಗ್ಗೆ ಸ್ವಲ್ಪ ಮಾತನಾಡಿದರೆ ಒಳ್ಳೆಯದು 1994ರಷ್ಟು ಹಿಂದೆ ಹೋಗಿ...

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಈ ವಿಚಾರಕ್ಕೆ ಬಂದೆ ಎಂದರೆ, ಇಲ್ಲಿ ಆ ವಿಚಾರ ಬಂತು. MCI is not mandatory ಅನ್ನುವಂತಹ ವಿಚಾರ ಬಂದಿರುವುದರಿಂದ ನಾನು ಈ ಪೀಠಿಕೆಯನ್ನು ಹೇಳಬೇಕಾಗಿದೆ. ಏತಕ್ಕೋಸ್ಕರ ಇದು ಎಫೆಕ್ಟ್‌ಗೆ ಬಂತು ಎನ್ನುವ ವಿಷಯವನ್ನು ನಾನು ಹೇಳಬೇಕಾದಂತಹ ಅವಶ್ಯಕತೆ ಇಲ್ಲಿ ಇದೆ. ಎಂದು ನಾನು ಅಂದುಕೊಂಡಿದ್ದೇನೆ. ಪ್ರಮುಖವಾಗಿ ಎಂಸಿಐ ನಲ್ಲಿ ಆ್ಯಕ್ಟ್ ಬಂದ ನಂತರದಲ್ಲಿ, ಸನ್ಮಾನ್ಯ ಕಾನೂನು ಸಚಿವರು ಹೇಳಿದರು, ಯಾವ ಸೆಕ್ಷನ್ 10(ಎ), 10(ಬಿ) ಮತ್ತು 10(ಸಿ)ರ ವಿಚಾರ ಇದೆ ಎಂದು ಹೇಳಿ, ಅದರ ಪ್ರಕಾರವೇ ನಾವು ಹೋದಾಗಲೂ ಕೂಡ ಅದರಲ್ಲಿ ನೇರವಾಗಿ ಹೇಳುವಂತಹ ವಿಚಾರ

"Where any medical college increases its admission capacity in any course of study or training including the post-graduate courses except with the previous permission of the Central Government, no medical qualification grant to any student shall be recognised."

ಇಷ್ಟೇ ನಮ್ಮ ಪ್ರಶ್ನೆ; ಇರುವಂತಹದ್ದು ಯಾವ ಎಕ್ಸೆಸ್ ಅಡ್‌ಮಿಷನ್ ಕೊಟ್ಟುಕೊಂಡು ಬಂದಿದ್ದೀರಿ ನೀವು ಅವತ್ತಿನಿಂದ, ಅದಕ್ಕೆ ಕೇಂದ್ರಸರ್ಕಾರದ ಮತ್ತು ಎಂಸಿಐ ಇದೆ, ಅದರ ರೆಕಗ್ನಿಷನ್ ಇಲ್ಲದೆ ಆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಬೇಕು ಎನ್ನುವುದು ಪ್ರಮುಖವಾದಂತಹ ವಿಚಾರ.

ಡಾ|| ಎಂ. ಶಂಕರ್‌ನಾಯಕ್ : ಒಂದು ನಿಮಿಷ, ಕ್ಲಾರಿಫಿಕೇಷನ್, ಐಎಫ್‌ಡಿ 10 ಎ,ಬಿ,ಸಿ, ಎಂದು ಓದಿದ್ದಾರಲ್ಲಾ ಅದು it is only to increase the seats. There is no point like decreasing the seats. Wherever the college needs to increase the seats, then only the IMC has to recommend to the Central Government and they in turn communicate to the State Government. ಹಿಂದೆ ಏನು ನಿಗದಿ ಆಗಿತ್ತು ಅದರ ಮೇಲೆ ಇನ್‌ಕ್ರೀಸ್ ಮಾಡುವ ಅಧಿಕಾರ ಇದೆಯೇ ಹೊರತು ಕಡಿಮೆ ಮಾಡಲು ಅಧಿಕಾರ ಎಂಸಿಐಗೆ ಇಲ್ಲ.

ಶ್ರೀ ಎ. ರಾಮದಾಸ್ : ಅದರ ಬಗ್ಗೆ ಒಂದು ವಿಚಾರ ಹೇಳಬೇಕು ಅನ್ನುವುದಾದರೆ, ರಾಜ್ಯಸರ್ಕಾರದ ಸ್ವಾಮ್ಯದಲ್ಲಿ ಇರುವಂತಹ ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಇದ್ದಂತಹ ಸೀಟು ಆಯಿತಲ್ಲಾ ಏತಕ್ಕೋಸ್ಕರ? ಅಲ್ಲಿ ಇರುವಂತಹ ಬೆಡ್ಡಿನ ಕೆಪ್ಯಾಸಿಟಿ, ಅಲ್ಲಿ ಇರುವಂತಹ ಟೀಚರ್ಸ್ ಸ್ಟ್ರೆಂಗ್ತ್ ಹಾಗೂ ಅಲ್ಲಿ ಇರುವಂತಹ ಇನ್‌ಫ್ರಾಸ್ಟ್ರಕ್ಚರ್ ಇಲ್ಲ ಎನ್ನುವ ಕಾರಣಕ್ಕಾಗಿ ಎಂಸಿಐ ಸೀಟು ಕಡಿಮೆ ಮಾಡಿತು. ಅದನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. That mains Increase ಮಾಡುವುದೇ ಆಗಲಿ, ಡಿಕ್ರೀಸ್ ಮಾಡುವುದೇ ಆಗಲಿ, ಪೂರ್ತಿ ಅಧಿಕಾರ ಎಂಸಿಐ ಗೆ ಇದೆ ಎನ್ನುವುದು it is mandatory. ಸೆಂಟ್ರಲ್ ಗೌರ್ನಮೆಂಟ್‌ಗೆ ಇರುವಂತಹ ಅಧಿಕಾರ ಅದು. ಎರಡನೆಯದಾಗಿ, ಸನ್ಮಾನ್ಯ ಸಚಿವರನ್ನು ನಾನು ಕೇಳಬೇಕಾಗಿದೆ. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ತಾವು ಓದಿದಿರಿ, ಎಂದು ಕಾಣಿಸುತ್ತದೆ. ಆ ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಓದಿರುವಂತಹ ವಿದ್ಯಾರ್ಥಿಗಳ ಡಿಗ್ರಿ ಕೂಡ ರೆಕಗ್ನೈಸ್ ಆಗಿಲ್ಲವೆಂದು ಕಾಣಿಸುತ್ತದೆ. ಹಾಗಾದರೆ ಸನ್ಮಾನ್ಯ ಮಂತ್ರಿಗಳು ರೆಕಗ್ನಿಷನ್ ಸಿಕ್ಕಿದೆ ಎನ್ನುವುದೂ ಕೂಡ ಇವತ್ತು ಪ್ರಶ್ನೆಯಾಗಿದೆ.

ಡಾ|| ಎಂ. ಶಂಕರನಾಯಕ್ : ಬಳ್ಳಾರಿ ಕಾಲೇಜು ರೆಕಗ್ನೈಸ್ ಆಗದೆ ಕಳೆದ ಸಲ ಎಂಸಿಐನವರು ರೆಕಮೆಂಡೇಷನ್ ಮಾಡಿ ಅಡ್‌ಮಿಷನ್ ಇಲ್ಲ ಎಂದು ಹೇಳಿದ್ದಕ್ಕೆ, ಅವರಿಗೆ ಅಧಿಕಾರ ಇಲ್ಲ ಎಂದು ಕೋರ್ಟಿಗೆ ಹೋಗಿ, ಹೋದ ವರ್ಷ ಬಳ್ಳಾರಿ ಮತ್ತು ಹುಬ್ಬಳ್ಳಿಗೆ ಅಡ್‌ಮಿಷನ್ ತಂದಿದ್ದೆವು. ತಾವು ಅದನ್ನು ತಿಳಿದುಕೊಳ್ಳಬೇಕು. ಕೋರ್ಟ್ ಮುಖಾಂತರವೇ ಬಳ್ಳಾರಿಯಲ್ಲಿ ಹಿಂದೆ ಏನು ನಿಗದಿ ಆಗಿತ್ತು 100 ಸೀಟು, ಮತ್ತು ಹುಬ್ಬಳ್ಳಿಗೆ 50 ಸೀಟು ಆಗಿತ್ತು, ಅದನ್ನು ನಾವು ಕೋರ್ಟ್ ಮುಖಾಂತರವೇ ತಂದಿದ್ದು. ಎಂಸಿಐ ಅವರಿಗೆ ಅಧಿಕಾರ ಇಲ್ಲವಂತೆ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೆ, ಈಗ ಹೇಳುವಂತಹ ಸಮಯದಲ್ಲಿ ಒಂದು ವಿಚಾರವನ್ನು ಹೇಳಿದರು. ಇಷ್ಟು ವರ್ಷಗಳ ಕಾಲದಿಂದ ಸಮಸ್ಯೆಗಳು ಬರುವಂತಹ ವಿಚಾರ. ಎಂಸಿಐ ನವರು ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದರು. ಆ ಪತ್ರದಲ್ಲಿ ಅವರು ಏನು ಬರೆದಿದ್ದರು ಎಂದರೆ, ಎಕ್ಸ್‌ಸಸ್ ಸೀಟನ್ನು ಅಡ್‌ಮಿಷನ್ ಮಾಡಬಾರದು ಎಂದು ಸ್ಪಷ್ಟವಾಗಿ ಆ ಪತ್ರದಲ್ಲಿ ತಿಳಿಸಲಾಗಿತ್ತು. ಆ ವಿಚಾರದ ಬಗ್ಗೆ, ಆ ವಿಚಾರವನ್ನು ಹೇಳುವಂತಹ ಸಮಯದಲ್ಲೂ ಕೂಡ, ಇವತ್ತು ಏನು ಇದರ ವಾದವನ್ನು ಮಾಡುತ್ತಾ ಇದ್ದಾರೆ, 1956ರಲ್ಲಿ ಯೂನಿವರ್ಸಿಟಿ ಆ್ಯಕ್ಟ್ ಏನಿತ್ತು ಅದರ ಜೊತೆಗೆ ಯೂನಿವರ್ಸಿಟಿ ಆ್ಯಕ್ಟ್ ಏನಿತ್ತು ಅದರ ಸೆಕ್ಷನ್ ಪ್ರಕಾರದಲ್ಲಿ 1976 ಸೆಕ್ಷನ್ 4(1) ಮತ್ತು (ಬಿ) ಇದು ಎಜ್ಯುಕೇಷನ್ ಇನ್ಸ್‌ಟಿಟ್ಯೂಷನ್‌ಗೆ ಸಂಬಂಧಪಟ್ಟ ಆ್ಯಕ್ಟ್ ಇದೆ ಎಂದು ಹೇಳಿ ಇವರು, ಎಂಸಿಐ ನವರು ಬರೆದಿರುವಂತಹ ಪತ್ರ ಸಹ ಇತ್ತು, ಆ ಪತ್ರಕ್ಕೆ ಆಧಾರದ ಮೇಲೆ ಎಂಸಿಐ ನವರು 21.11.94ರಲ್ಲಿ ಎಕ್ಸೆಸ್ ಸೀಟನ್ನು ಮಾಡಬಾರದು ಎಂಬ ಪತ್ರವನ್ನು ಬರೆದರು. ಈ ಪತ್ರಕ್ಕೆ ರಾಜ್ಯ ಸರ್ಕಾರದಿಂದ ಉತ್ತರ ಏನು ಹೋಯಿತು ಎಂಬುದನ್ನು ತಮ್ಮ ಮೂಲಕ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ, ಅದಕ್ಕೆ ಸಂಬಂಧಪಟ್ಟ ಹಾಗೆ ಅವರು ಆಗಿರುವಂತಹ ಒಂದು ವಿಚಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಆ ಪತ್ರ ಬಂದ ನಂತರದಲ್ಲಿ ರಾಜ್ಯ ಸರ್ಕಾರದವರೇ, ಪರ್ಮಿಷನ್‌ಕೊಟ್ಟ ರೀತಿಯಲ್ಲಿ ಎಂಎಸ್ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಯಾವುದೇ ಒಂದು ಪರವಾನಗೆ ಇಲ್ಲದೆ, ರಾಜ್ಯ ಸರ್ಕಾರದ ಒಪ್ಪಿಗೆ ಮೇರೆಗೆ 50 ಮಲೇಷಿಯನ್ ವಿದ್ಯಾರ್ಥಿಗಳನ್ನು ಅಡ್‌ಮಿಷನ್ ಮಾಡಲಾಯಿತು. ಅವರಿಗೆ ಕೊಟ್ಟಂತಹ ಸೀಟು 130 ಆಗಿದ್ದರೆ, 168 ಸೀಟುಗಳನ್ನು ಅಡ್‌ಮಿಷನ್ ಮಾಡಲಾಯಿತು. ಈ ಪತ್ರದಲ್ಲಿ ಅದರ ಬಗ್ಗೆ ಕ್ಲಾರಿಫಿಕೇಷನ್ ಕೇಳಲಾಯಿತು. ಒಂದು ಸೀಟಿಗೆ 75 ಸಾವಿರ ಡಾಲರ್ ಪ್ರಕಾರದಲ್ಲಿ ಒಂದೇ ಬಾರಿಗೆ 50 ಜನ ವಿದ್ಯಾರ್ಥಿಗಳಿಗೆ ಅಡ್‌ಮಿಷನ್ ಕೊಡುವ ವಿಚಾರದಲ್ಲಿ ಸಮಸ್ಯೆ ಏನಾಯಿತು ಎಂಬುದಕ್ಕೆ ಉತ್ತರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆನಂತರದಲ್ಲಿ ಅಧ್ಯಕ್ಷರೆ, ಲ್ಯಾಪ್‌ಸಸ್ ಎಲ್ಲಿ ಆಗಿದೆ ಎನ್ನುವುದನ್ನು ನೋಡಬೇಕಾಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ಪತ್ರವನ್ನು ಯಾವುದೇ ಎಕ್ಸ್‌ಪ್ಲನೇಷನ್ ಕೊಡದೇ ಇದ್ದಂತಹ ಸಂದರ್ಭದಲ್ಲಿ ಎಂಸಿಐನವರು ಒಂದು ಸೆಂಟ್ರಲ್ ಗೌರ್ನಮೆಂಟ್ ಅವರಿಗೆ ಒಂದು ಪತ್ರವನ್ನು ಬರೆದರು. ರಾಜ್ಯ ಸರ್ಕಾರ ನಾವು ಬರೆಯುತ್ತಿರುವಂತಹ ಪತ್ರಗಳಿಗೆ ಅವರು ಉತ್ತರವನ್ನು ಕೊಡುತ್ತಾ ಇಲ್ಲ, ಇದಕ್ಕೆ ಸಂಬಂಧಪಟ್ಟಂತ ಮಾಹಿತಿಗಳನ್ನು ಕೊಡುತ್ತಾ ಇಲ್ಲ, ಆದುದರಿಂದ ತಾವು ಕರ್ನಾಟಕ ರಾಜ್ಯದ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರವನ್ನು ಮಿನಿಸ್ಟ್ರೀ ಆಫ್ ಹೆಲ್ತ್ ಸೆಕ್ರೆಟರಿ ಅವರಿಗೆ ಎಂಸಿಐ ನವರಿಗೆ ಪತ್ರವನ್ನು ಬರೆದು ರಾಜ್ಯಸರ್ಕಾರಕ್ಕೆ ಒಂದು

ಪತ್ರವನ್ನು ಹಾಕಿದರು. ಅದಕ್ಕೂ ಕೂಡ ಉತ್ತರವನ್ನು ಕೊಡಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ. ಕೆಲವು ಸಮಯದಲ್ಲಿ ಕುರುಡನಾದಂತವನನ್ನು, ಅವನು ಗೊತ್ತಿಲ್ಲದೇ ನಡೆದುಕೊಂಡು ಹೋಗುತ್ತಿರುತ್ತಾನೆ, ಕಿವುಡನಾದಂತವನ್ನು ಕೇಳದೇ ನಡೆದುಕೊಂಡು ಹೋಗುತ್ತಿರುತ್ತಾರೆ. ಆದರೆ ಕಿವುಡನಾಗಿ, ಕುರುಡನಾಗಿ ಯಾವ ಮನುಷ್ಯ ನಟನೆ ಮಾಡುತ್ತಾನೆ ಅಂತವನಿಗೆ ಬಹಳ ಕಷ್ಟವಾದಂತಹ ವಿಚಾರ, ಈಗ ರಾಜ್ಯ ಸರ್ಕಾರ ಯಾವ ಉದ್ದೇಶಕ್ಕಾಗಿ ಕುರುಡರಾಗಿ, ಕಿವುಡರಾಗಿ, ವರ್ತಿಸುತ್ತಿದೆ ಎನ್ನುವುದು ಈ ಒಂದು ಉತ್ತರದಲ್ಲಿ ನಮಗೆ ಕಾಣಿಸುತ್ತದೆ. ಜೊತೆಗೆ ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಮುಖವಾದಂತಹ ವಿಚಾರ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ವಿಚಾರದಲ್ಲಿ ನಾವು ಈ ಸಲ ಬಹಳ ಸೀಟುಗಳನ್ನು ಕಳೆದುಕೊಂಡಿದ್ದೇವೆ ಎಂದು, ಇದರಿಂದ ಬಹಳ ನೋವು ನನಗೂ ಕೂಡ ಆಗುತ್ತಾ ಇದೆ. ಆದರೆ ಬಹಳ ದಿವಸಗಳ ಕಾಲದಿಂದ ಈ ಸಮಸ್ಯೆಯನ್ನು ಏತಕ್ಕೋಸ್ಕರ ಹಾಗೆ ಉಳಿಸಿಕೊಂಡು ಬಂದರು ? ಅದಕ್ಕೆ ಮುಖ್ಯವಾದಂತಹ ಕಾರಣ ಹಿಂದುಗಡೆ ಏನಿದೆ, ಅದನ್ನು ಇವತ್ತು ನೋಡಬೇಕಾದಂತಹ ಅವಶ್ಯಕತೆ ಇದೆ. ಆ ದೃಷ್ಟಿಯಿಂದಲೇ ನಾವು ಇವತ್ತು ಹೇಳುತ್ತಿರುವಂತಹದ್ದು. ಎಂಸಿಐ ಆ್ಯಕ್ಟ್ ಬಂದ ನಂತರದಲ್ಲಿ 1993-94ರಲ್ಲಿ ಎರಡು ಸಾವಿರದ ಐನೂರು ಅಡ್‌ಮಿಷನ್ ಮಾಡಬೇಕಾಗಿತ್ತು. ಆದರೆ ಮಾಡಿದಂತಹ ಅಡ್‌ಮಿಷನ್ ಎರಡು ಸಾವಿರದ ಎಂಟುನೂರ ಹದಿನಾಲ್ಕು ಅಡ್‌ಮಿಷನ್ ಮಾಡಿದರು ರಾಜ್ಯ ಸರ್ಕಾರ. ಆ ನೋಟೀಸ್ ಬಂದಿದೆ. 1994-95ರಲ್ಲಿ ಎರಡು ಸಾವಿರದ ಒಂಬೈನೂರ ನಲವತ್ತೈದು ಅಡ್‌ಮಿಷನ್ ಆಯಿತು. ಹಾಗೂ 1995-96ರಲ್ಲಿ ಎರಡು ಸಾವಿರದ ಒಂಬೈನೂರ ನಲವತ್ತೈದು ಅಡ್‌ಮಿಷನ್ ಮಾಡಲಾಯಿತು. ಅಂದರೆ ಒಟ್ಟು ಒಂಬೈನೂರ ನಲವತ್ತು ಅಡ್‌ಮಿಷನ್‌ಗಳನ್ನು ಹೆಚ್ಚು ಮಾಡುವಂತಹದ್ದು, ಒಟ್ಟು ನಾಲ್ಕು ವರ್ಷಗಳಲ್ಲಿ ಸಿಇಟಿ ಮುಖಾಂತರದಲ್ಲಿ ಕೊಟ್ಟಂತಹ ಅಡ್‌ಮಿಷನ್ ಎಂಸಿಐ ನವರು ನಿಗದಿ ಮಾಡಿದ್ದಕ್ಕಿಂತಲೂ ಕೂಡ ಎರಡು ಸಾವಿರದ ಆರು ನೂರು ಎಂಬತ್ತನಾಲ್ಕು ಪ್ರವೇಶಗಳನ್ನು ಹೆಚ್ಚಿಗೆ ನೀಡಲಾಯಿತು. ಇದರ ಬಗ್ಗೆ ಇವತ್ತಿನವರೆವಿಗೂ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ನಾಲ್ಕು ವರ್ಷಗಳಿಂದ ಏತಕ್ಕೆ ಈ ರೀತಿ ಮಾಡಲಾಯಿತು ? ಈ ವಿಷಯದಲ್ಲಿ ಏಕೆ ವಿಳಂಬವಾಯಿತು ? ಸನ್ಮಾನ್ಯ ಅಧ್ಯಕ್ಷರು ಡಾಕ್ಟರ್ ಆಗಿ ಹೊರಗೆ ಬಂದಿದ್ದಾರೆ, ಆದರೆ ಅವತ್ತಿನ ದಿವಸ ಕ್ಯಾಪಿಟೇಷನ್ ಇಲ್ಲದೇ ಹೋದರೂ ಕೂಡ ಇವತ್ತಿನ ದಿವಸ ಕ್ಯಾಪಿಟೇಷನ್ ಎಷ್ಟು ಆಗುತ್ತಾ ಇದೆ ಎಂದು ಎಲ್ಲರಿಗೂ ಗೊತ್ತು. ಸನ್ಮಾನ್ಯ ಅಧ್ಯಕ್ಷರೆ, ಒಂದೊಂದು ಸೀಟಿಗೂ 25 ರಿಂದ 30 ಲಕ್ಷ ರೂ. ಕ್ಯಾಪಿಟೇಷನ್ ಇವತ್ತಿನ ದಿವಸ ಆಗಿದೆ. ಅಂತಹ ಸಮಯದಲ್ಲಿ 940 ಸೀಟುಗಳಿಗೆ ಎಷ್ಟು ಹಣ ಆಗಿರಬಹುದೆಂದು ತಾವೇ ಊಹೆ ಮಾಡಿಕೊಳ್ಳಬಹುದಾದ ವಿಚಾರ. ಅದರ ಜೊತೆಯಲ್ಲಿ ಒಳಗಡೆ ಇರುವಂತಹ ವಿಚಾರ ಇಷ್ಟು : ಎರಡನೆಯದು ಮ್ಯಾನೇಜ್‌ಮೆಂಟ್ ಕೋಟಾ ಮತ್ತು ಎನ್‌ಆರ್‌ಐ ಕೋಟಾ ಎಂದು ಹೇಳಿ ಒಂದು ಸೆಪರೇಟ್ ವಿಂಗನ್ನು ತೆರೆದರು. ಇವತ್ತು ಸುಪ್ರೀಂಕೋರ್ಟಿನಿಂದ ಜಜ್‌ಮೆಂಟ್ ಬಂದಿದೆ ಎಂಬ ವಿಚಾರವಾಗಿ ಯೋಚನೆ ಮಾಡುತ್ತಿದ್ದೇವೆ.

ಚೇರ್ಮನ್ : ಇದಕ್ಕೆ ಸಂಬಂಧಪಟ್ಟಂತೆ ಮಾತನಾಡಿದರೆ ಒಳ್ಳೆಯದು. ಇಲ್ಲಿ, ಸೀಟು ವಿತರಣೆ ತಾರತಮ್ಯ ಹೋಗಲಾಡಿಸಲು ವಿಭಾಗವಾರು ಹಂಚಿಕೆ.... ಹಾಗೂ ಕರ್ನಾಟಕ ಖಾಸಗಿ ಮತ್ತು

ವೈದ್ಯಕೀಯ ಮತ್ತು ದಂತ ಕಾಲೇಜುಗಳಲ್ಲಿ ಭಾರತೀಯ ವೈದ್ಯಕೀಯ ಮಂಡಲಿಯ ಅನುಮತಿಯಿಲ್ಲದೆ ಹೆಚ್ಚುವರಿ ಪ್ರವೇಶ ನೀಡಿ ವಿದ್ಯಾರ್ಥಿಗಳಿಂದ ಲಕ್ಷಾಂತರ ರೂಗಳ ಡೊನೇಷನ್ ಪಡೆದು ಸದರಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶವಿಲ್ಲದೆ ತೊಂದರೆಯಾಗಿರುವ ಬಗ್ಗೆ ಪ್ರಸ್ತಾಪ. ಈ ಸೆಕ್ಷನ್ ಅಡಿಯಲ್ಲಿ ವಿಸ್ತಾರವಾಗಿ ಮಾತನಾಡಲು ಅವಕಾಶ ಇಲ್ಲ. ತಮ್ಮ ಪಾಯಿಂಟನ್ನು ಸೂಕ್ಷ್ಮವಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎ. ರಾಮದಾಸ್ : ಎನ್‌ಆರ್‌ಐ ಕೋಟಾದಲ್ಲಿ ಯಾವರೀತಿ ಮಿಸ್‌ಯೂಸ್ ಆಗಿದೆ ಎಂಬುದನ್ನು ಹೇಳಬೇಕಲ್ಲಾ, ಕಾರಣವೇನೆಂದರೆ ಎಷ್ಟು ಜನ ವಿದ್ಯಾರ್ಥಿಗಳು ಹೊರಗೆ ಬರುತ್ತಿದ್ದಾರೆಂಬುದು ನಮ್ಮ ಮುಂದೆ ಇವತ್ತಿದೆ. ಏನ್‌ಆರ್‌ಐ ಕೋಟದಲ್ಲಿ ಇವರು ಕೊಟ್ಟಿದ್ದು 364 ಸೀಟುಗಳನ್ನು ಎಕ್ಸ್ಸಾಗಿ ಕೊಟ್ಟಿದ್ದಾರೆ. ಇಲ್ಲಿ ಪ್ರಮುಖವಾಗಿ ಬ್ಯಾಕ್‌ಲಾಗ್ ವೇಕೆನ್ಸೀಸ್. ಇನ್ನೊಂದು ಪ್ರಮುಖ ವಿಚಾರ. ಯಾಕೆ ನ್ಯಾಯಾಲಯದಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ ಎಂದು ನಾವು ಯೋಚನೆ ಮಾಡಬೇಕಾಗಿದೆ. ಎಂಸಿಐ ಆಕ್ಟಿನಲ್ಲಾಗಿರಲಿ, ರಾಜ್ಯಸರ್ಕಾರದ ಯಾವುದೇ ವಿಚಾರದಲ್ಲಾಗಿರಲಿ ಬ್ಯಾಕ್‌ಲಾಗ್ ವೇಕೆನ್ಸೀಸ್ ಎಂದು ಎಲ್ಲಿದೆ? ಯಾವ ಆಕ್ಟ್, ರೆಗ್ಯುಲೇಷನ್‌ನಲ್ಲಿದೆ? ಕಾರಣ, ಬ್ಯಾಕ್‌ಲಾಗ್ ವೇಕೆನ್ಸೀಸ್ ಎಂದು ರಾಜ್ಯ ಸರ್ಕಾರ ಸುಮಾರು 472 ಸೀಟುಗಳನ್ನು ಅಂದರೆ 92-93ನೇ ಸಾಲಿನಲ್ಲಿ ಸೀಟು ಉಳಿದಿತ್ತು ಎಂದು ಹೇಳಿ 95-96ನೇ ಸಾಲಿನಲ್ಲಿ ಸೀಟುಗಳನ್ನು ಕೊಟ್ಟಿರುವುದು. ಯಾವ ಪ್ರಾವಿಷನ್ ಆಧಾರದ ಮೇಲೆ ಇವುಗಳನ್ನು ಭರ್ತಿ ಮಾಡಿದರು ಎಂಬುದು ಪ್ರಮುಖ ವಿಚಾರ. ಅದರಂತೆ 470 ಎಕ್ಸಸ್ ಸೀಟುಗಳನ್ನು ಎಂಬಿಬಿಎಸ್‌ನಲ್ಲಿ ತುಂಬುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿಕೊಂಡು ಬಂದಿದೆ ಕಳೆದ ನಾಲ್ಕುವರ್ಷಗಳ ಕಾಲದಿಂದ. ಒಂದು ಪ್ರಮುಖ ವಿಚಾರ. ರಾಜ್ಯ ಸರ್ಕಾರ ಎಂಸಿಐ ಆಕ್ಟ್ ಏನಿತ್ತು ಅದನ್ನು ಓವರ್‌ರೈಡ್ ಮಾಡುವುದು ಆದರೆ ಪ್ರೈವೇಟ್ ಮೆಡಿಕಲ್ ಕಾಲೇಜಿನವರು ಇವರಿಗಿಂತ ಬುದ್ಧಿವಂತರಾದರು. ಅವರು ರಾಜ್ಯಸರ್ಕಾರ ಕೇಂದ್ರಸರ್ಕಾರ ಮತ್ತು ಎಂಸಿಐ ಎಲ್ಲರನ್ನೂ ಓವರ್‌ರೈಡ್ ಮಾಡಿದರು. ಒಂದು ಕಡೆ ಎಂಬಿಬಿಎಸ್‌ನಲ್ಲಿ ಈ ರೀತಿಯಾದರೆ ಎರಡನೆಯದು ಸ್ನಾತಕೋತ್ತರದಲ್ಲಿ ಆಗಿರುವುದರ ಬಗ್ಗೆ ಕಳೆದ ಬಾರಿ ಚರ್ಚೆ ನಡೆದಾಗ ಈಗಿನ ಮುಖ್ಯಮಂತ್ರಿಗಳು ಹೇಳಿದರು.

ಚೇರ್ಮನ್ : ನಾನು ಹೇಳಿದೆ ಸೀಮಿತವಾಗಿ ಹೆಚ್ಚುವರಿ ಸೀಇಟಿ ಅಡ್ಮಿಷನ್ಸ್ ಬಗ್ಗೆ ಮಾತನಾಡಿ ಎಂದು ತಾವು ಸ್ನಾತಕೋತ್ತರಕ್ಕೆ ಹೋಗಿಬಿಟ್ಟಿರಿ. ಆಗಿರುವುದರ ಬಗ್ಗೆ ಮಾತನಾಡಿ.

ಶ್ರೀ ಎ. ರಾಮದಾಸ್ : ವೈದ್ಯಕೀಯದಲ್ಲಿ ಆಗಿರುವ ಹೆಚ್ಚುವರಿ ಪ್ರವೇಶಗಳ ಬಗ್ಗೆ ಅನ್ನುವ ವಿಚಾರವನ್ನು ನಾನು ಕೊಟ್ಟಿದ್ದೇನೆ. ಇವತ್ತು ಯಾಕೆ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಷ್ಟು ಮಾಡಿದ್ದಾರೆ ಎಂಬುದನ್ನು ಹೇಳಲೇಬೇಕಾಗಿದೆ. ಇವತ್ತಿನ ಪರಿಸ್ಥಿತಿಗೆ ಕಾರಣವೇನು ಎಂದು ಒಂದು ಉಲ್ಲೇಖ ಮಾಡುತ್ತಾ ಕಳೆದ ಬಾರಿ ನಾನು ಚರ್ಚೆ ಮಾಡುತ್ತಿದ್ದಾಗ ಅಂದು ಉಪಮುಖ್ಯಮಂತ್ರಿಗಳಾಗಿ ಇವತ್ತು ಮುಖ್ಯಮಂತ್ರಿಗಳಾಗಿರುವವರು ಬಹಳ ಒಳ್ಳೆಯ ಮಾತನ್ನು ಹೇಳಿದರು. ರಾಜ್ಯ ಸರ್ಕಾರ ಇದರ ಬಗ್ಗೆ ಕಣ್ಣು ತೆರೆಯಬೇಕಾಗಿದೆ. ಈ ವಿಚಾರವನ್ನು ಕೇಳಬೇಕಾಗಿದೆ ಎಂದು ಹೇಳಿದ್ದೂ

ದಾಖಲಾತಿಗಳಲ್ಲಿ ನಾವು ಕಾಣುತ್ತೇವೆ. ಎಂಡಿ ಎಂಎಸ್ ಮತ್ತು ಡಿಪ್ಲೊಮಾಗಳಲ್ಲಾಗಿರುವ ಅವ್ಯವಹಾರಗಳ ಬಗ್ಗೆ ಹೇಳಬೇಕಾದರೆ ಎಲ್ಲಾ ಕಾಲೇಜುಗಳಲ್ಲೂ ಕೂಡ ಯಾವ ಇನ್‌ಟೇಕ್ ಫಿಕ್ಸಾಗಿತ್ತು ಅದಕ್ಕಿಂತ ಹೆಚ್ಚಿಗೆ ತೆಗೆದುಕೊಂಡಿರುವುದು ದಾಖಲೆಗಳಲ್ಲಿದೆ. ದಾಖಲೆಗಳನ್ನು ತಮ್ಮಲ್ಲಿಗೆ ಕೊಟ್ಟುಕಳುಹಿಸುತ್ತೇನೆ. ಇದರಲ್ಲಿ ಎಷ್ಟು ಹಣ ಕೈಬದಲಾವಣೆ ಆಗಿದೆ ಎಂಬುದನ್ನು ಹೇಳುವ ಮುಂಚೆ....

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಆಗಿನ ಸಚಿವ ಎಬಿ ಪಾಟೀಲರು ಕೊಟ್ಟರು ಮುಖ್ಯಮಂತ್ರಿಗಳೂ ಕೂಡ ಕೊಟ್ಟಿದ್ದಾರೆ. ಈಗ ಇದಕ್ಕೆ ಸಂಬಂಧಪಟ್ಟಂತೆ ಸೀಮಿತ ವಿಚಾರ ಹೇಳಿದರೆ ಅದಕ್ಕೆ ಉತ್ತರ ಕೊಡಬಹುದು. ಹಿಂದೆ 600 ಸೀಟುಗಳಿಗೆ ಕೋಟ್ಯಾಂತರ ರೂಗಳ ಅವ್ಯವಹಾರ ಆಗಿದೆ ಎಂಬ ಆಪಾದನೆ ಮಾಡಿದ್ದಿರಿ ಮತ್ತೆ ಅದನ್ನು ಈ ಸಂದರ್ಭದಲ್ಲಿ ಎತ್ತಬೇಕಾದ ಅಗತ್ಯವಿಲ್ಲ.

ಶ್ರೀ ಎ. ರಾಮದಾಸ್ : ಪ್ರಮುಖವಾದ ವಿಚಾರವೇನೆಂದರೆ ನಿಯಮ 69ರ ಅಡಿಯಲ್ಲಿ ನಾನು ಏತಕ್ಕೆ ತಂದೆ ಅಂದರೆ ಪೂರ್ತಿ ವಿಚಾರಗಳನ್ನು ಸರ್ಕಾರದ ಮುಂದೆ ಇಡಬೇಕೆಂದು. ಮಾನ್ಯ ಕಾನೂನು ಸಚಿವರು ಒಂದು ವಿಚಾರವನ್ನು ಹೇಳಿದರು. ನ್ಯಾಯಾಲಯಗಳಲ್ಲಿ ಈ ಸಮಸ್ಯೆಗಳನ್ನು ಪ್ರತಿವರ್ಷ ನಾವು ಎದುರಿಸುತ್ತಿದ್ದೇವೆ ಎಂದು ಕಾರಣವೇನು? ಜನತಾದಳದ ಸರ್ಕಾರ ಬಂದಾಗ ಅಂದಿನ ಮುಖ್ಯಮಂತ್ರಿ ದೇವೇಗೌಡರು ಇದ್ದಾಗ ಈ ಸಮಸ್ಯೆ ಬಂತು.

ಚೇರ್ಮನ್ : 69 ಸೆಕ್ಷನ್ ಅನ್ನು ಓದಿ ಹೇಳಿಬಿಡುತ್ತೇನೆ :

"69(2) - The Speaker may allot two sittings in a week on which such matters may be taken up for discussion and allow such time for discussion not exceeding one hour at or before the end of the sitting as he may consider appropriate in the circumstances." ಎಂದಿದೆ.

ಶ್ರೀ ಎ. ರಾಮದಾಸ್ : ನಿಯಮ69ರ ಅಡಿಯಲ್ಲಿ ನಾನು ಕೊಟ್ಟಿದೆ ಕಾಲ್ ಆಟೆನ್‌ಷನ್ ಅವರು ಕೊಟ್ಟಿದ್ದರು ಎರಡನ್ನೂ ಕ್ಲಬ್ ಮಾಡಿ ಕೊಟ್ಟಿರುವ ವಿಚಾರ.

ಚೇರ್ಮನ್ : ಇಲ್ಲ ಹಾಗಿಲ್ಲ. ನಿಯಮ 69ರ ಅಡಿ ಒಂದು ವಿಷಯವನ್ನು ತೆಗೆದುಕೊಂಡಾಗ ತಾಸಿಗಿಂತ ಹೆಚ್ಚು ಡಿಸ್ಕಷನ್ ಆಗಬಾರದು. ತಾವಾದ ಮೇಲೆ ಮಿನಿಸ್ಟರ್ ಉತ್ತರ ಕೊಡಬೇಕಾಗಿದೆ. ತಾವು ವಿಷದವಾಗಿ ಚರ್ಚೆ ಮಾಡುವ ಬದಲಿಗೆ ಎಲ್ಲಿ ತಪ್ಪಿದ್ದಾರೆ ಎಂಬುದನ್ನು ಹೇಳಿದರೆ ಒಳ್ಳೆಯದಾಗುತ್ತದೆ you have taken lot of time.

ಶ್ರೀ ಎ ರಾಮದಾಸ್ : ನಾಲ್ಕು ವರ್ಷಗಳಿಂದ ಏನು ತಪ್ಪು ಮಾಡಿಕೊಂಡು ಬಂದಿದ್ದಾರೆ ಎಂಬುದನ್ನು ಹೇಳುತ್ತಿದ್ದೇನೆ. 25-4-95ರಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದು. I quote : "We shall certainly ensure henceforth that no further increase in the intake takes place in any private medical colleges in the State without prior approval of the Central Government."

ಒಂದು ವಿಚಾರ ಕೇಳಿದರು. ಇನ್ನು ಮುಂದೆ ಯಾವುದೇ ಅಡ್ಮಿಷನ್ಸ್ ನಾವು ಮಾಡುವುದಿಲ್ಲ. ಈಗಿರುವ ಅಡ್ಮಿಶನ್ಸನ್ನು ರೆಗ್ಯುಲರೈಸ್ ಮಾಡಿಕೊಂಡಿ ಎಂದು ಬರೆದರು. ಇಲ್ಲಿ ಬಹಳ ಸ್ವಾರಸ್ಯ ವಿಚಾರ, ಇದಕ್ಕೆ ಕೇಂದ್ರ ಸರ್ಕಾರ ಉತ್ತರ ಬರೆದು ಅದರಲ್ಲಿ ನಮ್ಮ ಕಾರ್ಯದರ್ಶಿಯವರಿಗೆ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯವರಿಗೆ ಒಂದು ಪತ್ರ ಬರೆದು ಇದುವರೆವಿಗೆ ಯಾವ್ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಅಡ್ಮಿಶನ್ಸ್ ಕೊಟ್ಟಿದ್ದೀರಿ ಇದನ್ನು ರೆಗ್ಯುಲರೈಸ್ ಮಾಡುವುದಕ್ಕಾಗಿ ನೀವು ನಿಮ್ಮ ಪ್ರಪೋಸಲ್‌ಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡಿ ಎಂದು ಬರೆದರು. ಆದರೆ ರಾಜ್ಯ ಸರ್ಕಾರ ಇವತ್ತಿನವರೆಗೂ ಪ್ರಪೋಸಲನ್ನು ಕಳುಹಿಸಿಕೊಡಲಿಲ್ಲ. ಜೊತೆಗೆ ಎಲ್ಲಿ ಲ್ಯಾಫ್ಸಾಗಿದೆ ಎಂಬ ಪ್ರಶ್ನೆ ಬಂದಾಗ ಎಂಸಿಐನವರು 20-8-96ರಲ್ಲಿ ಒಂದು ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಬರೆದರು ಇವತ್ತಿನವರೆಗೆ ಕರ್ನಾಟಕ ಸರ್ಕಾರದಿಂದ ಯಾವುದೇ ಮಾಹಿತಿ ಬರುತ್ತಿಲ್ಲ ಎಷ್ಟು ಅಡ್ಮಿಷನ್ಸ್ ಆಗಿದೆ ಎಂಬ ವಿಚಾರ ಇಲ್ಲ. ನಾವು ಕೊಟ್ಟ ಇನ್‌ಟೇಕ್‌ಗಿಂತ ಹೆಚ್ಚಿಗೆ ತೆಗೆದುಕೊಂಡಿರುವುದು ನಡೆದಿದೆ. ಈ ದೃಷ್ಟಿಯಲ್ಲಿ ಇವತ್ತಿನವರೆಗೂ ಆಕ್ಷನ್ ತೆಗೆದುಕೊಳ್ಳದೇ ಇರುವುದರಿಂದ ಕೇಂದ್ರ ಸರ್ಕಾರದವರು ಯಾವ್ಯಾವ ಕಾಲೇಜುಗಳ ಅಫಿಲಿಯೇಷನ್ ಕ್ಯಾನ್ಸಲ್ ಮಾಡಲಿಕ್ಕಾಗಿ [illegible]19 ಪ್ರಕಾರ ಆಕ್ಷನ್ ತೆಗೆದು ಕೊಳ್ಳಬೇಕೆಂದು ಬರೆದರು. ಅಂದಿನ ಮುಖ್ಯಮಂತ್ರಿಗಳು ದಿನಾಂಕ 25.4.1995ರಲ್ಲಿ ಪತ್ರ ಬರೆದ ನಂತರ ಒಂದು ಸರ್ಕಾರಿ ಆದೇಶ ಹೊರಡಿಸಿದ್ದಾರೆ.

ಛೇರ್ಮನ್ : ತಾವು ನೋಟೀಸ್ ಕಳುಹಿಸಿರುವುದರಲ್ಲಿ .... ವಿದ್ಯಾರ್ಥಿಗಳಿಂದ ಲಕ್ಷಾಂತರ ರೂಪಾಯಿಗಳ ಡೊನೇಷನ್ ಪಡೆದು ಈಗ ಸದರಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶವಿಲ್ಲದೆ ತೊಂದರೆಯಾಗಿರುವ ಬಗ್ಗೆ. ಅಂತ ಅಷ್ಟೇ ಇದೆ. ಹಾಗಾಗಿ, ತಾವು ಇಡೀ ಇತಿಹಾಸ ಹೇಳುವುದಕ್ಕೆ ಹೊರಟರೆ, ವಿಷಯದ ಮೇಲೆ ಅಂದರೆ ಬೇಡಿಕೆಗಳ ಮೇಲೆ ಮತ್ತೆ ಚರ್ಚೆ ಮಾಡುವುದಿದೆ ಆದುದರಿಂದ, ದಯವಿಟ್ಟು ತಾವು ಏನು ನೋಟೀಸ್ ಕಳುಹಿಸಿದ್ದೀರಿ, ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿ ಹೇಳಿ. ತಾವು ಬಹಳ ಹೇಳಿದಿರಿ, ಅದನ್ನು ನಾನು ಹಾಗೂ ಎಲ್ಲರೂ ಕೇಳಿಸಿಕೊಂಡಿದ್ದೇವೆ.

ಶ್ರೀ ಎ. ರಾಮದಾಸ್ : ನಾಲ್ಕು ವರ್ಷಗಳ ಹಿಂದೆ ಯಾರ್ಯಾರಿಗೆ ಅಡ್ಮಿಷನ್ ಆಗಿತ್ತೋ ಅವರು ಈಗ ಪರೀಕ್ಷೆ ತೆಗೆದುಕೊಳ್ಳಬೇಕಾಗಿದ್ದು, ಅವರಿಗೆ ಇವೊತ್ತು ಪರೀಕ್ಷೆ ಕೊಡುವಂಥ ಸ್ಥಿತಿಯಲ್ಲಿ ಇಲ್ಲ. ಎಂಸಿಇನಲ್ಲಿ ರೆಗ್ಯುಲೇಷನ್ ಇಲ್ಲದಿರುವ ದೃಷ್ಟಿಯಿಂದ, ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ರಾಜ್ಯ ಸರ್ಕಾರದಿಂದ ದಿನಾಂಕ 28.11.95ರಲ್ಲಿ ಒಂದು ಸರ್ಕಾರಿ ಆದೇಶ ಹೊರಡಿಸಿ.

ಛೇರ್ಮನ್ : ತಾವು ಮತ್ತೆ 1995ರ ವಿಷಯಕ್ಕೆ ಹೋದಿರಿ. ಈಗ ಪ್ರಸಕ್ತ ಇರುವ ಸಂಗತಿಗಳಿಗೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ, ನಾವು ಈಗ 1997ರಲ್ಲಿರುವುದರಿಂದ ಈ ವರ್ಷಕ್ಕೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ, ತಾವು ಇತಿಹಾಸ ಹೇಳಿದಿರಿ, ರಾಜ್ಯ ಸರ್ಕಾರದ ಅನೇಕ ವೈಫಲ್ಯಗಳ ಬಗ್ಗೆ ಹೇಳಿದಿರಿ ಅದು ಸಾಕು. ಈಗ 1997ನೇ ಇಸವಿಗೆ ಸೀಮಿತವಾಗಿ ಸದರಿ ವಿಚಾರವನ್ನು ಪ್ರಸ್ತಾಪಿಸಿ.

ಶ್ರೀ ಎ. ರಾಮದಾಸ್ : ನಾನು ಅದೇ ವಿಷಯಕ್ಕೆ ಬರುತ್ತಿದ್ದೇನೆ. 1994ರಿಂದ ಅಡ್ಮಿಷನ್ ತೆಗೆದುಕೊಂಡಂಥ ವಿದ್ಯಾರ್ಥಿಗಳು ಇನ್ನು ಆರು ತಿಂಗಳುಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕಾಗಿದೆ.

ಎಂ.ಸಿ.ಐ. ಆ್ಯಕ್ಟ್ ಪ್ರಕಾರ ಅವರಿಗೆ ಪರೀಕ್ಷೆ ಕೊಡುವ ಪರಿಸ್ಥಿತಿಯಲ್ಲಿಲ್ಲ. ಅವರಿಗೆ ಸಂಬಂಧಿಸಿದಂತೆ ಎಂ.ಸಿ.ಐ.ನವರೂ ಸಹ ಈ ಕೋರ್ಸನ್ನು ರೆಕಗ್ನೈಸ್ ಮಾಡದೇ ಹೋದಾಗ ಸುಮಾರು ಐದು ಸಾವಿರದಷ್ಟು ಸಂಖ್ಯೆಯ ವಿದ್ಯಾರ್ಥಿಗಳು ಇವೊತ್ತು ಬೀದಿಪಾಲಾಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರದ ತಪ್ಪಿನಿಂದ ಆವೊತ್ತಿನಿಂದ ಇವೊತ್ತಿನವರೆವಿಗೂ ರೆಗ್ಯುಲರೈಸ್ ಆಗಿಲ್ಲದಿರುವುದರಿಂದ ಪ್ರಸಕ್ತ ವರ್ಷದಲ್ಲಿ 700 ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಗುತ್ತಿಲ್ಲವೆನ್ನುವಂತಾದ್ದು ಮೊದಲನೆಯ ವಿಷಯವಾದರೆ, ಎರಡನೆಯದಾಗಿ, ಹಿಂದೆ ಯಾರ್ಯಾರು ಅಡ್ಮಿಷನ್ ಆಗಿದ್ದರು, ಅವರುಗಳು ಈಗ ಕೋರ್ಸ್‌ನ್ನು ಮುಗಿಸುತ್ತಿದ್ದಾರೆ. ಹಿಂದೆ ಅಡ್ಮಿಷನ್ ಆಗಿದ್ದಂಥ ವಿದ್ಯಾರ್ಥಿಗಳಿಗೆ ಇವೊತ್ತು ಪರೀಕ್ಷೆ ಕೊಡುವಂಥ ಪರಿಸ್ಥಿತಿ ಇಲ್ಲ. ಯೂನಿವರ್ಸಿಟಿಯವರು ಪರೀಕ್ಷೆ ಕೊಟ್ಟರೂ ಸಹ ಎಂ.ಸಿ.ಐ.ನವರು ರೆಗ್ಯುಲರೈಸ್ ಮಾಡುವುದಿಲ್ಲ ಎನ್ನುವುದು, ಈ ಕೋರ್ಸು ಅವರಿಗೆ ಕೊಡುವುದಿಲ್ಲವೆನ್ನುವ ವಿಚಾರ ಈಗಾಗಲೇ ಬಂದಿರುವುದರಿಂದ ಸುಮಾರು 5,000 ವಿದ್ಯಾರ್ಥಿಗಳು ಇವೊತ್ತು ಹೊರಗಡೆ ಬರುವಂಥ ಪರಿಸ್ಥಿತಿ ಬಂದಿದ್ದು, ಇದರ ಉದ್ದೇಶ ಏನಿದೆಯೆಂಬುದರ ವಿಚಾರವಾಗಿ ಪ್ರಸ್ತಾಪ ಮಾಡಲೇಬೇಕಾಗಿದೆ.

ಛೇರ್ಮನ್ : ತಾವು ಈಗ ಪ್ರಸ್ತಾಪಿಸುತ್ತಿರುವ ವಿಚಾರ ನಿಯಮ 69ರ ವ್ಯಾಪ್ತಿಗೆ ಬರುವುದಿಲ್ಲ, ನಿಯಮದ ವ್ಯಾಪ್ತಿ ಮೀರಿ ತಾವು ಭಾಷಣ ಮಾಡುತ್ತಿದ್ದೀರಿ, ಇದು ಸರಿಯಿಲ್ಲ. ಆದುದರಿಂದ, ತಾವು ತಮ್ಮ ಮಾತುಗಳನ್ನು ಮುಗಿಸಿದಿರಿ ಎಂದು ತಿಳಿದುಕೊಂಡು ಮಾನ್ಯ ಮಂತ್ರಿಗಳಿಂದ ಉತ್ತರ ಕೊಡುವಂತೆ ಕೇಳುತ್ತೇನೆ.

ಶ್ರೀ ಎ. ರಾಮದಾಸ್ : ನನ್ನ ಪ್ರಶ್ನೆ ಇಷ್ಟೇ ರಾಜ್ಯ ಸರ್ಕಾರದಿಂದ ಬಯಸುವುದೇನೆಂದರೆ, ಸುಮಾರು 5,000 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುತ್ತಿರುವಂಥ ಸಮಸ್ಯೆ ಮತ್ತು ಈಗಾಗಲೇ ಅಡ್ಮಿಷನ್ ಆಗಿರುವಂಥ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತ ನಂತರದಲ್ಲಿ ಅವರಿಗೆ ಡಿಗ್ರಿ ಕೊಡದಿರುವ ವಿಚಾದಲ್ಲಿ ರಾಜ್ಯ ಸರ್ಕಾರದ ನಿಲುವೇನಿದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಕೇಳಬಯಸುತ್ತೇನೆ.

+ ಡಾ|| ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಛೇರ್ಮನ್‌ರವರೆ, ಈಗಾಗಲೇ ವೈದ್ಯಕೀಯ ಶಿಕ್ಷಣದ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಕಾಳಜಿ ವ್ಯಕ್ತಪಡಿಸಿದ್ದಾರೆ. ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಕಳೆದ ವರ್ಷ ಸಹ ಅನೇಕ ಕೋರ್ಟುಗಳ ಮಧ್ಯ ಪ್ರವೇಶದಿಂದಾಗಿ ನಮ್ಮ ಸಿ.ಇ.ಟಿ. ಕೌನ್ಸಿಲಿಂಗ್ ಫೆಬ್ರವರಿವರೆಗೆ ಹೋಯಿತು. ಇದು ಪ್ರತಿ ವರ್ಷ ಆಗಬಾರದೆಂಬ ಉದ್ದೇಶದಿಂದ ಈ ವರ್ಷ ಆಗಸ್ಟ್ ತಿಂಗಳಿನಲ್ಲೇ ವೈದ್ಯಕೀಯ ಶಿಕ್ಷಣದ ಕೌನ್ಸಿಲಿಂಗ್ ಮುಗಿಯಬೇಕು ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಇಂಜಿನಿಯರಿಂಗ್ ಕೌನ್ಸಿಲಿಂಗ್ ಮುಗಿಯಬೇಕೆಂಬ ಉದ್ದೇಶದಿಂದ ಮುಂಚೆಯೇ ಕ್ಯಾಲೆಂಡರ್ ಆಫ್ ಇವೆಂಟ್ಸ್ ಅನೌನ್ಸ್ ಮಾಡಿದ್ದೆವು. ಇದಕ್ಕಿಂತ ಮುಂಚಿತವಾಗಿ ಏನಾಯಿತೆಂದರೆ, ಸಿಂಗಲ್ ಕೋರ್ಟ್ ರವೀಂದ್ರನ್‌ರವರ ಒಂದು ಜಡ್ಜ್‌ಮೆಂಟ್ ಮೇಲೆ ಯಾರೋ ಸಿಟಿಜನ್ ಆಫ್ ಇಂಡಿಯಾ ಎಂದು ಡಿವಿಜನ್ ಬೆಂಚ್ ಮೇಲೆ ಒಂದು ಅಪೀಲ್ ಹೋದರು. ಪ್ರತಿ ವರ್ಷ ಖಾಸಗಿ ಕಾಲೇಜುಗಳಲ್ಲಿ ಹೆಚ್ಚು

ಸೀಟುಗಳ ಪ್ರವೇಶವಾಗುತ್ತಿದೆ, ಇದಕ್ಕೆ ಸರ್ಕಾರ ತಡೆಹಿಡಿಯುತ್ತಿಲ್ಲ, ಅವರ ಮನಸ್ವೇಚ್ಛೆ ರೀತಿಯಲ್ಲಿ ಅಡ್ಮಿಷನ್ ಆಗುತ್ತಿದೆ ಎನ್ನುವುದರ ಬಗ್ಗೆ ಅಪೀಲ್ ಹೋದಾಗ ಡಿವಿಜನ್ ಬೆಂಚ್ ದಿನಾಂಕ 16.6.1997 ರಂದು ಒಂದು ತೀರ್ಮಾನ ನೀಡಿತು. ಏನೆಂದರೆ, ಗೌವರ್ನಮೆಂಟ್ ಆಫ್ ಇಂಡಿಯಾ ಯಾವ್ಯಾವ ಕಾಲೇಜುಗಳಲ್ಲಿ ಸೀಟುಗಳನ್ನು ನಿಗದಿಪಡಿಸಿಲ್ಲವೋ ಅಲ್ಲಿ ದಿನಾಂಕ 1.6.1992 ರಂದು ಎಂ.ಸಿ.ಐ. ಆ್ಯಕ್ಟ್ ಅಮೆಂಡ್ ಆಯಿತಲ್ಲಾ, ಅದಕ್ಕೂ ಮುಂಚೆ ರಾಜ್ಯ ಸರ್ಕಾರದ ಅಧಿಕಾರದಡಿ ಅಂದರೆ ಯೂನಿವರ್ಸಿಟಿ ಆ್ಯಕ್ಟ್‌ನ ನಿಯಮ 54ರಡಿ ಏನು ಅಧಿಕಾರವಿತ್ತು, ಅದರ ಪ್ರಕಾರ ಹಿಂದೆ ರಾಜ್ಯ ಸರ್ಕಾರ ನಿಗದಿ ಪಡಿಸಿದಂತಹ ಸೀಟುಗಳನ್ನು ಆಯಾ ಕಾಲೇಜುಗಳಿಗೆ ಕೊಡಬೇಕು. ದಿನಾಂಕ 1.6.1992ರ ನಂತರ ಯಾವುದಾದರೂ ಕಾಲೇಜುಗಳಿಗೆ ಸೀಟುಗಳನ್ನು ನಿಗದಿ ಪಡಿಸಬೇಕೆಂಬ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಆದೇಶ ಬಂದಿದ್ದರೆ, ಅದನ್ನು ಪರಿಗಣಿಸಬೇಕೆಂದು ಡಿವಿಜನ್ ಬೆಂಚ್‌ನಿಂದ ದಿನಾಂಕ 16.6.97ರಂದು ಒಂದು ಆದೇಶ ಬಂತು. ನಾವು ಅದೇ ಪ್ರಕಾರ ದಿನಾಂಕ 6.8.97ರಂದು ಒಂದು ಮ್ಯಾಟ್ರಿಕ್ ಮಾಡಿ 6.7.97ರಿಂದ ಮೂರು ಕಾಲೇಜುಗಳಿಗೆ ಸಂಬಂಧಿಸಿದಂತೆ ಮಾತ್ರ ಕೇಂದ್ರ ಸರ್ಕಾರ ಸೀಟುಗಳನ್ನು ನಿಗದಿಪಡಿಸಿತ್ತು. ಆ ಮೂರು ಕಾಲೇಜುಗಳು ಯಾವುವೆಂದರೆ, ದೇವರಾಜು ಅರಸು ಕಾಲೇಜು, ಎಂ.ಎಸ್. ರಾಮಯ್ಯ ಕಾಲೇಜು ಮತ್ತು ಆದಿಚುಂಚನಗಿರಿ ಕಾಲೇಜು. ಈ ಮೂರು ಕಾಲೇಜುಗಳಲ್ಲಿ ಕೇಂದ್ರ ಸರ್ಕಾರದಿಂದ ನಿಗದಿಯಾಗಿದ್ದಂಥ ಸೀಟುಗಳನ್ನು ಗಣನೆಗೆ ತೆಗೆದುಕೊಂಡು ಬಾಕಿ ಕಾಲೇಜುಗಳಲ್ಲಿ ಇಲ್ಲದಿರುವುದರಿಂದ ದಿನಾಂಕ 1.6.92ಕ್ಕೂ ಹಿಂದೆ ರಾಜ್ಯ ಸರ್ಕಾರ ಏನು ಸೀಟುಗಳನ್ನು ನಿಗದಿಪಡಿಸಿತ್ತು, ಅದರ ಪ್ರಕಾರ ನಾವು ಮ್ಯಾಟ್ರಿಕ್ಸ್ ಮಾಡಿದೆವು. ಅದನ್ನು ನಾವು ದಿನಾಂಕ 6.8.97ರಂದು ಅನೌನ್ಸ್ ಮಾಡಿ ಕೌನ್ಸಿಲಿಂಗ್ ಅನ್ನು ದಿನಾಂಕ 12.7.97ರಿಂದ ಶುರು ಮಾಡಬೇಕೆಂದು ಜಾಹೀರಾತು ಕೊಟ್ಟು ಅದರಂತೆಯೇ ನಾವು ಸಿ.ಇ.ಟಿ.ಯನ್ನು ಪ್ರಾರಂಭಿಸಿದೆವು. ಇದಾದ ನಂತರ ನಮಗೆ 19ನೇ ತಾರೀಖಿನಂದು ಒಂದು ಆದೇಶ ಬಂತು ಎಂ.ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗ, ಇಲ್ಲಿಗೆ ನೂರು ಸೀಟುಗಳು ನಿಗದಿಯಾಗಿದೆಯೆಂದು 12ನೇ ತಾರೀಖಿಗೆ ಇನ್ನೊಂದು ಆದೇಶ ಬಂತು. ಆದರೆ, ಹಿಂದೆ ಅವರಿಗೆ ಏನು 195 ಸೀಟುಗಳಿತ್ತು, ಅದನ್ನು ನಾವು ಮಾಟ್ರಿಕ್ಸ್‌ನಲ್ಲಿ ಹಾಕಿದ್ದೆವು. ಯಾವಾಗ 11ನೇ ತಾರೀಖಿನಂದು ಕೇಂದ್ರ ಸರ್ಕಾರದ ಆದೇಶ ಬಂದ ನಂತರ 195 ಸೀಟುಗಳನ್ನು ತೆಗೆದು ಏನು ಆದೇಶ ಕೊಟ್ಟಿದ್ದರು, ನೂರು ಸೀಟುಗಳನ್ನು ಮಾತ್ರ ಮ್ಯಾಟ್ರಿಕ್ಸ್‌ನಲ್ಲಿ ಹಾಕಿ ಯಾವ ಕಾಲೇಜುಗಳಲ್ಲಿ ಆದೇಶ ಇಲ್ಲವೋ, ಹೈಕೋರ್ಟಿನ ಒಂದು ಆದೇಶದ ಪ್ರಕಾರ ದಿನಾಂಕ 1.6.92ಕ್ಕೂ ಹಿಂದೆ ನಿಗದಿಯಾಗಿದ್ದಂಥ ಸೀಟುಗಳಷ್ಟನ್ನೇ ನಿಗದಿಪಡಿಸಿ 12ನೇ ತಾರೀಖಿನಿಂದ ಕೌನ್ಸಿಲಿಂಗ್ ಪ್ರಾರಂಭಿಸಿದ್ದೇವೆ. ನಂತರ, ಕೇಂದ್ರ ಸರ್ಕಾರ 19ನೇ ತಾರೀಖಿಗೆ ಆದೇಶ ಹೊರಡಿಸಿದಾಗ ಅದು ನಮಗೆ 20ನೇ ತಾರೀಖಿಗೆ ಬಂದು ತಲುಪಿತು. ಏನೆಂದರೆ, ಎಂ.ಸಿ.ಐ. ನವರು ಏನು ರೆಕಮೆಂಡೇಷನ್ ಮಾಡಿದ್ದಾರೆ. ಅದರ ಪ್ರಕಾರ ನೀವು ಸೀಟುಗಳ ಕೌನ್ಸಿಲಿಂಗ್ ಪ್ರಾರಂಭಿಸಬೇಕೆಂದೂ ಹೋದ ವರ್ಷ ಕೆಲವು ಕಾಲೇಜುಗಳಲ್ಲಿ ಏನು ಸೀಟುಗಳು ನಿಗದಿಯಾಗಿತ್ತು, ಆ ಪ್ರಕಾರವೇ ನೀವು ಮಾಡಬೇಕೆಂದು ಆದೇಶ ಬಂತು. ಅಷ್ಟೊತ್ತಿಗೆ ಶೇಕಡಾ 92ರಷ್ಟು ಕೌನ್ಸಿಲಿಂಗ್ ಮುಗಿದುಹೋಗಿತ್ತು. ಅದರಲ್ಲಿ ಇನ್ನೊಂದು ವಿಷಯ ಏನಿತ್ತೆಂದರೆ, ಆ ಕಾಲೇಜುಗಳಿಗೆ ಸಂಬಂಧಿಸಿದಂತೆ ಎಂ.ಸಿ.ಐ.

ರೆಕಮೆಂಡೇಷನ್ ಸರ್ಕಾರದ ಮುಂದಿದೆ. ಆದರೆ, ಇಲ್ಲಿ ಡಿವಿಜನ್ ಬೆಂಚ್‌ನವರು ಏನು ಹೇಳಿದರೆಂದರೆ, ಕೇಂದ್ರ ಸರ್ಕಾರದಿಂದ ನಿಗದಿಯಾಗಿರುವ ಸೀಟುಗಳನ್ನು ಮಾತ್ರ ತೆಗೆದುಕೊಳ್ಳಬೇಕು, ಎಂ.ಸಿ.ಐ. ನಿಂದ ನಿಗದಿಪಡಿಸಿದುದ್ದು ಅಲ್ಲವೆಂದು ಎಂ.ಸಿ.ಐ. ಕೇಂದ್ರ ಸರ್ಕಾರಕ್ಕೆ ರೆಕಮೆಂಡರಿ ಬಾಡಿಯಾಗಿದ್ದು, ಯಾವುದೇ ಕಾಲೇಜಿಗೆ ಹೋಗಿ ಅಲ್ಲಿಯ ಇನ್‌ಫ್ರಾಸ್ಟ್ರಕ್ಚರ್ ನೋಡಿ ಎಷ್ಟು ಸೀಟುಗಳನ್ನು ನಿಗದಿಪಡಿಸಬೇಕೆಂಬುದರ ಬಗ್ಗೆ ರೆಕಮೆಂಡ್ ಮಾಡುವ ಅಧಿಕಾರ ಎಂ.ಸಿ.ಐ.ಗೆ ಮಾತ್ರವಿದೆ. ಎಂ.ಸಿ.ಐ. ಕೇಂದ್ರ ಸರ್ಕಾರಕ್ಕೆ ತನ್ನ ವರದಿ ಕೊಡಬೇಕು. ಇನ್ನೊಂದು ಏನಿದೆಯೆಂದರೆ, ಆ್ಯಕ್ಟ್ ಪ್ರಕಾರ ಒಂದು ವೇಳೆ ಕಾಲೇಜುಗಳಲ್ಲಿ ಪುನಃ 300 ವಿದ್ಯಾರ್ಥಿಗಳನ್ನು ಸೇರಿಸುವುದಕ್ಕೆ ಅನುಕೂಲತೆಗಳಿದ್ದರೂ ಎಂ.ಸಿ.ಐ.ಗೆ ಇರುವ ಅಧಿಕಾರ ಬರೀ 150 ಸೀಟುಗಳಿಗೆ ಮಾತ್ರ. 150 ಸೀಟುಗಳಿಗಿಂತ ಹೆಚ್ಚು ಸೀಟುಗಳನ್ನು ಕೊಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ಎಂ.ಸಿ.ಐ. ಸಹ ಹೇಳಬಹುದು ಇಂತಹ ಕಾಲೇಜುಗಳಿಗೆ ನಾವು ಇನ್ಸ್‌ಪೆಕ್ಟ್ ಮಾಡಿದ್ದೆವು, ಅಲ್ಲಿಗೆ 150 ಸೀಟುಗಳನ್ನು ಮಾತ್ರ ರೆಕಮೆಂಡ್ ಮಾಡುತ್ತಿದ್ದೇವೆ, ಕಾರಣ, ಅಲ್ಲಿ ಮುನ್ನೂರು ಸೀಟುಗಳನ್ನು ಸೇರಿಸುವುದಕ್ಕೆ ಅನುಕೂಲವಿದ್ದರೂ ನಮಗಿರುವ ಅಧಿಕಾರ ಕೇವಲ 150 ಸೀಟುಗಳಿಗೆ ಮಾತ್ರ, ಅದಕ್ಕೂ ಮೇಲ್ಪಟ್ಟಿರುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆಯೆಂದು ಅವರು ರೆಕಮೆಂಡೇಷನ್ ಮಾಡಿ ಕಳುಹಿಸಬೇಕು. ಡಿವಿಜನ್ ಬೆಂಚ್‌ನಲ್ಲಿ ಏನು ಒಂದು ತೀರ್ಪು ಕೊಟ್ಟರು Medical Council of India is only the recommendatory body to the Union Government. ಯೂನಿಯನ್ ಗೌವರ್ನಮೆಂಟ್‌ನಿಂದ ಬರತಕ್ಕಂಥಾದ್ದನ್ನು ಮಾತ್ರ ನೀವು ಗಣನೆಗೆ ತೆಗೆದುಕೊಳ್ಳಿ, ಮತ್ತು ರಾಜ್ಯ ಸರ್ಕಾರ ಹಿಂದೆ ಏನು ನಿಗದಿಪಡಿಸಿತ್ತು, ದಿನಾಂಕ 1.6.92ಕ್ಕೂ ಮುಂಚೆ ಆ ಸೀಟುಗಳನ್ನು ತೆಗೆದುಕೊಳ್ಳಬೇಕೆಂದು ಡಿವಿಜನ್ ಬೆಂಚ್ ಏನು ಹೇಳಿತ್ತು, ಅದರ ಪ್ರಕಾರ ನಾವು ಕೌನ್ಸಿಲಿಂಗ್ ಮಾಡಿದ್ದೇವೆ. ಅದರಲ್ಲಿ ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಶೇಕಡಾ ಹದಿನೈದರಷ್ಟು ಸೀಟುಗಳು ಕೇಂದ್ರ ಸರ್ಕಾರದಿಂದ ಡೈರೆಕ್ಟ್ ಆಗಿ ಅಲಾಟ್ ಆಗುತ್ತದೆ. ಇಷ್ಟನ್ನು ಹೊರತುಪಡಿಸಿ ನಾವು 2,575 ಎಂದು ಹೇಳಿದ್ದೇವೆ. ಅದನ್ನೂ ಸೇರಿಸಿದರೆ ಸುಮಾರು 2,738 ಸೀಟುಗಳು ಒಟ್ಟಾರೆಯಾಗಿ ರಾಜ್ಯ ಸರ್ಕಾರಕ್ಕೆ ಬರುತ್ತದೆ. ಈಗ ಎಂ.ಸಿ.ಐ. ಪ್ರಕಾರ ತೆಗೆದುಕೊಂಡರೆ ನಮಗೆ 2,025 ಸೀಟುಗಳು ಬರುತ್ತವೆ, ಮತ್ತು 713 ಸೀಟುಗಳು ಕಡಿಮೆಯಾಗುತ್ತದೆ. ಕೇಂದ್ರ ಸರ್ಕಾರಕ್ಕೆ ನಾವು ಕೊಟ್ಟಿರತಕ್ಕಂಥ ಸೀಟುಗಳಲ್ಲೂ ಕಡಿಮೆಯಾಗುತ್ತದೆ. ಅದನ್ನೂ ಗಣನೆಗೆ ತೆಗೆದುಕೊಂಡಾಗ 713 ಸೀಟುಗಳಷ್ಟು ಕಡಿಮೆಯಾಗುತ್ತದೆ. ನಮ್ಮ ಉದ್ದೇಶವಾದರೂ ಅಷ್ಟೆ 20ನೇ ತಾರೀಖಿನಂದು ನಾವು ಮೇಲ್ಪಟ್ಟದ ಅಧಿಕಾರಿಗಳನ್ನು ಕಳುಹಿಸಿ ಸುಪ್ರೀಂಕೋರ್ಟ್ ಮುಂದೆ ಒಂದು ಅಫಿಡವಿಟ್ ಹಾಕಿಸಿದ್ದೇವೆ. ಡಿವಿಜನ್ ಬೆಂಚ್ ಆರ್ಡರ್ ಪ್ರಕಾರ ನಾವು ಏನು ಮ್ಯಾಟ್ರಿಕ್ಸ್ ತಯಾರಿಸಿದ್ದೇವೆ, ನಿಮ್ಮ ಆದೇಶ ಬಂದಾಗ ಇಪ್ಪತ್ತನೇ ತಾರೀಖಿನ ಅಷ್ಟೊತ್ತಿಗೆ ನಮ್ಮಲ್ಲಿ ಶೇಕಡಾ 92ರಷ್ಟು ಸೀಟುಗಳು ಸಿ.ಇ.ಟಿ.ಯಿಂದ ಮೊದಲೇ ಅಲಾಟ್ ಆಗಿತ್ತು, ಆ ಉದ್ದೇಶದಿಂದ ಸ್ಥಗಿತಗೊಳಿಸುವುದಕ್ಕಾಗುವುದಿಲ್ಲವೆಂದು, ಡಿವಿಜನ್ ಬೆಂಚ್ ಆರ್ಡರ್ ಪ್ರಕಾರ ಮಾಡಿದ್ದೇವೆಂದು ಅಫಿಡವಿಟ್ ಹಾಕಿದ್ದೇವೆ. ಆ ಅಫಿಡೆವಿಟ್ ಮೊನ್ನೆ ತಾನೇ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬಂದಿತು. ಇದು ಇಂಟೆರಿಮ್ ಆರ್ಡರ್‌ನಲ್ಲಿ ಹೇಳಿದೆ. ನಮ್ಮ ಅಟಾರ್ನಿ ಜನರಲ್‌ರವರು ಇದರ ಬಗ್ಗೆ ವಾದ

ಮಾಡಿದರೂ ಸಹ ಅದನ್ನು ಪರಿಗಣಿಸದೆ, ನೀವು ಈಗ ಮಾಡಿ, ಅವರು ಹಾಕಿರತಕ್ಕಂಥ ಎಸ್.ಎಲ್.ಪಿ. ನಾಲ್ಕು ವಾರಗಳಲ್ಲಿ ನಮ್ಮ ಮುಂದೆ ವಿಚಾರಣೆಗೆ ಬರುತ್ತದೆ, ಆ ಸಮಯದಲ್ಲಿ ನೀವು ಏನು ಹೇಳಬೇಕೋ ಅದನ್ನು ಮಾತ್ರ ಹೇಳಿ, ಈಗ ಎಂ.ಸಿ.ಐ. ನವರು ಕೊಡುವುದನ್ನು ಮಾಡಿ ಎಂದು ಸುಪ್ರಿಂ ಕೋರ್ಟಿನ ಆದೇಶವಿದೆ. ನಮಗೆ ಇಲ್ಲಿ ಬಹಳ ಜನ ಯಜಮಾನರಿದ್ದಾರೆ.

(ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನಲಂಕರಿಸಿದರು.)

7.50 ಪಿ.ಎಂ.

ಈ ಕಡೆ ಹೈಕೋರ್ಟ್, ಆ ಕಡೆ ಎಂಸಿಐ, ಇನ್ನೊಂದು ಕಡೆ ಯೂನಿಯನ್, ಸುಪ್ರೀಮ್ ಕೋರ್ಟ್, ನಾವು ಇದನ್ನು ತಪ್ಪಿಸಬೇಕೆಂದು ನಮ್ಮ ಅಫಿಡವಿಟ್ ಅನ್ನು ಸುಪ್ರೀಮ್ ಕೋರ್ಟ್ ಮುಂದೆ ಹಾಕಿ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಇರತಕ್ಕಂಥ ಗೌವರ್‌ಮೆಂಟ್ ಆಫ್ ಇಂಡಿಯಾಕ್ಕೆ ರೆಕಮೆಂಡ್ ಮಾಡಲು. ಅವರಿಗೆ ಸಲಹೆ ಕೊಡಲು ಇರುವುದು, ಅಲ್ಲಿ ಯಾವುದೇ ಕಾಲೇಜಿನಲ್ಲಿ ಅಥವಾ ಸರ್ಕಾರದಲ್ಲಿ ತಪ್ಪು ಆಗಿದ್ದರೆ ಅದನ್ನು ಯುನಿಯನ್ ಗೌರ್ನಮೆಂಟ್ ಮುಖಾಂತರ ತರಬಹುದಾಗಿತ್ತು. ಎಂಸಿಐ ದವರಿಗೆ ನೇರವಾಗಿ ಸುಪ್ರೀಮ್ ಕೋರ್ಟಿಗೆ ಹೋಗುವಂತಹ ಅಧಿಕಾರ ಇಲ್ಲ ಎಂದು ನಾವು ಅಫಿಡೆವಿಟ್ ಹಾಕಿದ್ದೇವೆ. ಅದರಲ್ಲೂ ಯಾವುದೇ ಒಂದು ಕಾಲೇಜಿನಲ್ಲಿ ಸೀಟನ್ನು ಕಡಿಮೆ ಮಾಡುವುದಾಗಲಿ ಅಥವಾ ಡೀರೆಕಗ್ನೈಸ್ ಮಾಡುವಾಗ ಎಂಸಿಐ ನೇರವಾಗಿ ಕಾಲೇಜಿನವರಿಗೆ ಅಥವಾ ರಾಜ್ಯಸರ್ಕಾರಕ್ಕೆ ಬರೆಯುವ ಹಾಗೆ ಇಲ್ಲ. ಎಂಸಿಐ ನವರು ಕೇಂದ್ರ ಸರ್ಕಾರಕ್ಕೆ ಬರೆದು, ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಬರೆದು, ರಾಜ್ಯ ಸರ್ಕಾರ ಸಂಬಂಧಪಟ್ಟ ಕಾಲೇಜಿಗೆ ಬರೆದು ಅವರ ಹೇಳಿಕೆಯನ್ನು ಪಡೆದು ಅದು ಮತ್ತೆ ಕೇಂದ್ರ ಸರ್ಕಾರಕ್ಕೆ ಹೋಗುವುದು ಇದು ಕಾನೂನಿನಲ್ಲಿ ಇರತಕ್ಕಂತದ್ದು. 10 ಎಬಿಸಿ ಏನು ಮೆಡಿಕಲ್ ಕೌನ್ಸಿಲ್ ಆಫ್ ಆಕ್ಟ್ ಮಾಡಿದೆ ಅದರಲ್ಲಿ ಯಾವುದೇ ಹೊಸ ಮೆಡಿಕಲ್ ಕಾಲೇಜನ್ನು ತೆರೆಯಬೇಕಾದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಶಿಫಾರಸ್ಸ್ ಬೇಕು. ಯಾವುದೇ ಹೊಸ ಕೋರ್ಸ್‌ಗಳನ್ನು ತೆರೆಯಬೇಕಾದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಬೇಕು, ಯಾವುದೇ ಸೀಟ್‌ಗಳನ್ನು ಜಾಸ್ತಿಮಾಡಬೇಕಾದರೆ ಇದರ ಶಿಫಾರಸ್ಸ್ ಬೇಕು ಎಂದು ಇದೆ. ನಾವು ಮಾಡತಕ್ಕಂತದ್ದು ಏನು ರಾಜ್ಯ ಸರ್ಕಾರಕ್ಕೆ ವಿಶ್ವಾವಿದ್ಯಾಲಯ ಕಾನೂನು ಪ್ರಕಾರ ಹಿಂದೆ ಏನು ಅಧಿಕಾರ ಇತ್ತು 1.6.92ರ ಕ್ಕಿಂತ ಮುಂಚೆ ಅದನ್ನು ರಾಜ್ಯಸರ್ಕಾರಕ್ಕೆ ನಿಗದಿಯಾದಂಥ ಸೀಟ್‌ಗಳನ್ನು ನಾವು ತೆಗೆದುಕೊಂಡಿದ್ದು. ಇವತ್ತು ಎಂಸಿಐ ನವರು ಹೇಳುತ್ತಿದ್ದಾರೆ ನಮ್ಮ ಶಿಫಾರಸ್ಸ್ ಇದೆ ಎಂದು, ಇವತ್ತು ಬಹಳಷ್ಟು ಕಾಲೇಜುಗಳಲ್ಲಿ ಅದು ಹುಬ್ಬಳ್ಳಿ ಮೆಡಿಕಲ್ ಕಾಲೇಜ್, ಬಳ್ಳಾರಿ ಮೆಡಿಕಲ್ ಕಾಲೇಜ್ ಇವತ್ತು ಅವರ ಅಂತಿಮ ತೀರ್ಮಾನ ಏನು ಎಂದು ನಮಗೆ ಇವತ್ತು ಗೊತ್ತಾಗಿಲ್ಲ. ಹೋದ ವರ್ಷ ಅವರು ಬಂದು ಇಲ್ಲಿ ಬೆಡ್ ಸಂಖ್ಯೆ ಜಾಸ್ತಿ ಇದೆ, ಇಲ್ಲಿ ಮೇಸ್ಟ್ರು ಕಡಿಮೆ ಇರುವುದರಿಂದ ಈ ಎರಡು ಕಾಲೇಜುಗಳಿಗೆ ಅಡ್ಮಿಷನ್ ಇಲ್ಲ ಎಂದು ತೀರ್ಪನ್ನು ಕೊಟ್ಟರು. ಅದರ ಮೇಲೆ ನಾವು ಹೈಕೋರ್ಟಿಗೆ ಹೋದೆವು ಅಲ್ಲಿ ಜಡ್ಜ್ ಬರೂಕಾ ರವರ ಮುಂದೆ ಹೋದಾಗ, ಅವರು ನಿಮ್ಮ ಕಾರ್ಯಪ್ರಾರಂಭ ಮಾಡಿದಾಗ 1956-1957 ಇಸವಿಯಲ್ಲಿ ಏನು ಸೀಟನ್ನು ನಿಗದಿಪಡಿಸಿತ್ತು ಅದೇ ಸೀಟ್‌ನ್ನು ಕೊಡಿ ಎಂದು ಅವರು

ಹೇಳಿದರು. ಅದು ಆದನಂತರ ರಾಜ್ಯ ಸರ್ಕಾರದಿಂದ ಅಲ್ಲಿ ಏನೇನು ಲ್ಯಾಫ್ಸ್ ಇತ್ತು ನಾವು ಎರಡು ಕಾಲೇಜುಗಳನ್ನು ಅಟಾನಾಮಸ್ ಮಾಡಿ ಅದಕ್ಕೆ ಬೇಕಾದಂತಹ ಉಪಕರಣಗಳನ್ನು ಕೊಟ್ಟು, ಅಲ್ಲಿ ಬೇಕಾದ ಪ್ರೊಫೆಸರ್‌ಗಳನ್ನು, ಸಹಾಯಕ ಪ್ರೊಫೆಸರ್‌ಗಳನ್ನು ನೇಮಕ ಮಾಡಿದ ಮೇಲೆ ಇನ್ನೊಮ್ಮೆ ಇನ್ಸ್‌ಪೆಕ್ಟ್ ಮಾಡಿ ಎಂದು ಹೇಳಿದ್ದೆವು, ಅವರು ಆಗಲೇ ಇನ್ಸ್‌ಪೆಕ್ಟ್ ಮಾಡಿ ಮೂರು ತಿಂಗಳಾಯಿತು ಇವತ್ತಿನವರೆಗೆ ಎರಡು ಕಾಲೇಜ್‌ಗಳ ಬಗ್ಗೆ ವರದಿ ಕೊಟ್ಟಿಲ್ಲ. ಆದರೆ ಇವತ್ತು ಅವರು ಹೇಳುತ್ತಾರೆ 50 ಅಥವಾ 100 ಮಾಡಿ ಎಂದು ಯಾವ ಆಧಾರದ ಮೇಲೆ ಹೇಳುತ್ತಾರೆ. ಇದೆ ತರಹ ದಾವಣಗೆರೆ ಮೆಡಿಕಲ್ ಕಾಲೇಜಿಗೆ ಯುನಿಯನ್ ಗೌವರ್ನಮೆಂಟ್ ಕೊಟ್ಟಿರತಕ್ಕದ್ದು 245, ಎಂಸಿಐ ಕೊಟ್ಟಿರತಕ್ಕದ್ದು 150 ಕಾರಣ ಇವರಿಗೆ ಅಧಿಕಾರದಲ್ಲಿ ಬರುವುದು, 150 ಮಾತ್ರ. 150ಕ್ಕಿಂತ ಹೆಚ್ಚಿಗೆ ಸೀಟಿನ ಅನುಕೂಲ ಇದ್ದರೂ ಅದನ್ನು ಕೇಂದ್ರ ಸರ್ಕಾರ ಕೊಡಬೇಕು. ಕೇಂದ್ರ ಸರ್ಕಾರ 245 ಹೇಳುತ್ತದೆ, ಈ ಕಡೆ ಎಂಸಿಐ 150 ಹೇಳುತ್ತದೆ ಈ ಜಿಜ್ಞಾಸೆಯಲ್ಲಿ ಯಾವ ಸೀಟ್‌ಗಳನ್ನು ನಾವು ತೆಗೆದುಕೊಳ್ಳಬೇಕು. ಈ ಒಂದು ಉದ್ದೇಶದಿಂದ ನಾವು ಅಫಿಡವಿಟ್ಟನ್ನು ಸುಪ್ರೀಮ್ ಕೋರ್ಟ್ ಮುಂದೆ ಹಾಕಿದ್ದೇವೆ. ಸುಪ್ರೀಮ್ ಕೋರ್ಟ್ ಹೇಳುತ್ತದೆ. ಇಂಟರಿಮ್ ಆರ್ಡರ್ ನಾವು ಕೊಟ್ಟಿದ್ದೇವೆ, ನೀವು ಎಂಸಿಐ ಏನು ಶಿಫಾರಸ್ಸ್ ಮಾಡುತ್ತದೆ ಅದನ್ನು ಅನುಸರಿಸಿ ಮತ್ತೆ ನಿಮಗೆ ಏನಾದರೂ ಹೇಳುವುದು ಇದ್ದರೆ ನಮ್ಮ ಎಸ್‌ಎಲ್‌ಪಿ ಯಿಂದ 3 ವಾರ ಬಿಟ್ಟು ಬರುತ್ತದೆ ಆಗ ಮತ್ತೆ ನೀವು ವಿಚಾರಣೆ ಮಾಡಿ ಎಂದು ಹೇಳುತ್ತದೆ. ಇದರಲ್ಲಿ ಏನು ಸರ್ಕಾರದ ಸೀಟು ಕಡಿಮೆ ಮಾಡಬೇಕು, ಹೆಚ್ಚು ಮಾಡಬೇಕು ಎನ್ನುವ ಉದ್ದೇಶ ಇಲ್ಲ. ಅವರು ಹೇಳಿದರಲ್ಲಾ ಬೇತಾಳನ ಕಥೆ ಮಾಡಬೇಕು ಎಂದು ಅದೆಲ್ಲಾ ನಮ್ಮಲ್ಲಿ ಇಲ್ಲ. ನಮಗೆ ಕಾಲೇಜುವಾರು ಹೆಚ್ಚಿಗೆ ವಿದ್ಯಾರ್ಥಿಗಳಿಗೆ ಸಿಕ್ಕರೆ 85 ಸೀಟ್‌ಗಳನ್ನು ನಾವು ಸರ್ಕಾರದಿಂದ ತೆಗೆದುಕೊಳ್ಳುತ್ತೇವೆ, ಅದರಲ್ಲಿ ಶೇ.50 ಫ್ರೀ ಮೆರಿಟ್ ಸೀಟು, ಶೇ.20 ಪೇಮೆಂಟ್ ಸೀಟು, ಶೇ.15 ನಾನ್ ಕರ್ನಾಟಕ ಪೇಮೆಂಟ್ ಸೀಟ್, ಇವತ್ತು ನಾನ್ ಕರ್ನಾಟಕ ಪೇಮೆಂಟ್ ಸೀಟ್ ಆಗಿಲ್ಲ ಅದಕ್ಕೆ ಇನ್ನು ಸುಪ್ರೀಮ್ ಕೋರ್ಟಿನಲ್ಲಿ ತಡೆ ಇದೆ. ಶೇ.15 ನೀವು ರಿಸರ್ವ್ ಇಡಿ ಎಂದು ಆದೇಶ ಬಂದಿದೆ. ಈ ಶೇ.15 ಕರ್ನಾಟಕಕ್ಕೆ ಮಾತ್ರ ಸೀಮಿತಿವಾಗಿದೆ. ತಮಿಳುನಾಡಿನಲ್ಲಿ ಶೇ.2. ಅಥವಾ discretion of the Government ಎಂದು ಅದೇ ಸುಪ್ರೀಮ್ ಕೋರ್ಟ್ ಹೇಳುತ್ತದೆ. ಮಹಾರಾಷ್ಟ್ರದಲ್ಲಿ ಶೇ. 1% or discretion of the Government ಎಂದು ಹೇಳುತ್ತದೆ. ಕರ್ನಾಟಕಕ್ಕೆ ಬಂದಾಗ ಶೇ.15ರಷ್ಟು ನಾನ್ ಕರ್ನಾಟಕದವರಿಗೆ ಕೊಡಬೇಕೆಂದು ಆರ್ಡರ್ ಮಾಡಿದೆ. ಇದನ್ನು ಎರಡು ವರ್ಷದಿಂದ ಚಾಲೆಂಜ್ ಮಾಡಿದರು ಇದಕ್ಕೆ ಪುರಸ್ಕಾರ ಸಿಕ್ಕಿಲ್ಲ. ಆದರೆ ಇವತ್ತು ಸುಪ್ರಿಮ್‌ಕೋರ್ಟ್ ಆದೇಶ ಪ್ರಕಾರ ಕಾಯ್ದಿರಿಸಿದ್ದೇವೆ. ನಮ್ಮ ಉದ್ದೇಶ ಇದರಲ್ಲಿ ಹೆಚ್ಚಿಗೆ ಸೀಟ್ ಸರ್ಕಾರವೇ ಸೃಷ್ಟಿ ಮಾಡಿದೆ ಎಂದು ಅಲ್ಲ. ನಮಗೇನು ಹೈಕೋರ್ಟಿನ ಡಿವಿಷನ್ ಬೆಂಚ್ ಆದೇಶ ಇದೆ ಎಂಬುದನ್ನು ಹೇಳುತ್ತೇನೆ. ಜೊತೆಗೆ ಯುನಿಯನ್ ಗೌವರ್ನ್‌ಮೆಂಟ್ ಆರ್ಡರ್ ಇರುವುದು 4 ಕಾಲೇಜುಗಳಿಗೆ ಮಾತ್ರ, ಬಾಕಿ ಕಾಲೇಜುಗಳಿಗೆ ಇಲ್ಲದೆ ಇರುವುದರಿಂದ ಆ ಡಿವಿಜನ್ ಬೆಂಚ್ ಆದೇಶದ ಪ್ರಕಾರ ಮ್ಯಾಟ್ರಿಕ್ಸನ್ನು ಪ್ರಿಪೇರ್ ಮಾಡಿದ್ದೇವೆ, ಅದರ ಪ್ರಕಾರ ನಮ್ಮ ಮಕ್ಕಳಿಗೆ 2738 ಸೀಟ್ ಸಿಕ್ಕಿರತಕ್ಕದನ್ನು ತಾವು ಎಲ್ಲರೂ ನೋಡಿದ್ದೀರಿ. ಈಗ ಸುಪ್ರಿಮ್ ಕೋರ್ಟ್ ಹೇಳುತ್ತದೆ ಎಂಸಿಐ ಪ್ರಕಾರ 2028 ಮಾಡಿ

ಎಂದು. ಇದರಲ್ಲಿ ನಾವು ಮಾಡುವುದು ಏನೂ ಇಲ್ಲ, ನಾವು ಪ್ರತಿಹೆಜ್ಜೆಯಲ್ಲೂ ಕೋರ್ಟಿನ ಆದೇಶವನ್ನು, ಕಾನೂನು ತಜ್ಞರ ಆದೇಶವನ್ನು, ನಮ್ಮ ಸಂಬಂಧಪಟ್ಟ ಕಾನೂನು ಇಲಾಖೆಯ ಅಧಿಕಾರಿಗಳ ಓಪೀನಿಯನ್ ತೆಗೆದುಕೊಂಡೇ ನಾವು ಈ ಮುಂದಿನ ಕ್ರಮ ತೆಗೆದುಕೊಂಡಿದ್ದೇವೆ. ನೀವು ಹೇಳುತ್ತೀರಿ ಅವರು ಏರೋಪ್ಲೇನ್‌ದಿಂದ ಬಂದಿರಬಹುದು. ಅವರಿಗೆ ಎಕ್ಸ್ಟ್ರಾ ಖರ್ಚು ಆಗುತ್ತದೆ ಎಂದು ಇಂಜಿನಿಯರಿಂಗ್‌ಗೆ ಇವತ್ತು ನಡೆಯಬೇಕಾಗಿದೆ, ಇದು ಒಂದು ತರಹ ಲಿಂಕ್; ಮೆಡಿಕಲ್ ಆದಮೇಲೆ ಡೆಂಟಲ್, ಡೆಂಟಲ್ ಆದಮೇಲೆ ಇಂಜಿನಿಯರಿಂಗ್. ಈ ತರಹ ನಡೆಯುತ್ತದೆ. ಈಗ ಮೆಡಿಕಲ್‌ನಲ್ಲಿ 700 ಜನ ವಿದ್ಯಾರ್ಥಿಗಳಿಗೆ ಏನು ಸೀಟ್ ಸಿಗುವುದಿಲ್ಲ ಅವರು ಡೆಂಟಲ್‌ಗೆ ಹೋಗಬಹುದು, ಡೆಂಟಲ್‌ನಲ್ಲಿ ಸಿಗದೇ ಇದ್ದರೆ ಇಂಜಿನಿಯರಿಂಗ್ ಹೋಗಬಹುದು ಎಂದು ಅದನ್ನು ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಿದ್ದೇವೆ ಈಗ ಮತ್ತೆ ಏನಾದರೂ ಎಸ್‌ಎಲ್‌ಪಿ ಗೆ ಎಂಸಿಎನವರು ಹಾಕಿರುವುದು 3 ವಾರದ ನಂತರ ಸುಪ್ರೀಮ್ ಕೋರ್ಟ್ ಮುಂದೆ ಏನಾದರೂ ಬಂದು ಹಿಂದೆ ನೀವು ಮಾಡಿರತಕ್ಕ ಸೀಟ್‌ಗಳು ಸರಿಯಾಗಿ ಇವೆ ಎಂದು ಹೇಳಿದಾಗ ಮತ್ತೆ ರಿಕೌನ್ಸಿಲಿಂಗ್ ಮಾಡಬೇಕಾಗುತ್ತದೆ. ಈ ಒಂದು ಗೊಂದಲ ಇರುವುದರಿಂದ ಈಗ ಸುಪ್ರೀಮ್ ಕೋರ್ಟ್ ಆದೇಶವೇ ಅಂತಿಮ ಎಂದು ತಿಳಿದುಕೊಂಡಿದ್ದೇವೆ.

ಅಧ್ಯಕ್ಷರು : ಈ ತೊಂದರೆ ಎಲ್ಲಾ ಬೇಡ, ಒಂದು ಅಫಿಡಿವಿಟ್ ಹಾಕಿ ಕ್ಯಾಬಿನೆಟ್‌ನಲ್ಲಿ ರೆಸಲ್ಯೂಷನ್ ಮಾಡಿ ಸುಪ್ರೀಮ್ ಕೋರ್ಟಿನವರಿಗೆ ಕೊಟ್ಟು ಬಿಡಿ ನೀವೇ ಎಲ್ಲಾ ಸೀಟ್‌ಗಳನ್ನು ಹಂಚಿ ಎಂದು ಹೇಳಿ. ಇದರಿಂದ ತೊಂದರೆನೇ ಇಲ್ಲ, ಅವರೇ ಅವರಿಗೆ ಯಾರಿಗೆ ಬೇಕು ಅವರಿಗೆ ಕೊಡುತ್ತಾರೆ, ಅದರ ತಂಟೇನೇ ನಿಮಗೆ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, MCI is a, recommendatory body ಇದೆ ಎಂದು ಹೇಳುತ್ತಿದ್ದಿರಲ್ಲಾ, ಆಕ್ಟ್‌ನಲ್ಲಿ ಆ ರೀತಿಯಾಗಿ ಇದೆ. ಆದರೆ ಒಂದು ಅಂಶ ಏನು ಎಂದರೆ ಎಂಸಿಐದವರು ಶಿಫಾರಸ್ಸುಗಳನ್ನು ಗೌವರ್ನಮೆಂಟ್ ಆಫ್ ಇಂಡಿಯಾದವರು ವಾಯಿಲೇಟ್ ಏಕೆ ಮಾಡುತ್ತಿಲ್ಲ ಎಂದರೆ ಯಾವುದೇ ಶಿಫಾರಸ್ಸುಗಳನ್ನು ವಾಯಿಲೆಟ್ ಮಾಡಿದರೆ ಇವತ್ತಿಲ್ಲ ನಾಳೆ ಒಂದು ಸ್ಕ್ಯಾಂಡಲ್ ತಂದು ಬಿಡುತ್ತಾರೆ ಎಂದು ಹೆದರಿಕೊಂಡು ಒಂದು ಫೈಲ್ ಅನ್ನೂ ಮುಟ್ಟುತ್ತಿಲ್ಲ. ಎಂಸಿಐ ಅವರಿಗೆ 150 ಸೀಟ್‌ಗಳಿಗೆ ಮಾತ್ರ ಅಧಿಕಾರ ಇದೆ ಎಂದು ನೀವೇ ಹೇಳುತ್ತೀರಿ, 150ಕ್ಕಿಂತ ಹೆಚ್ಚು ಮಾಡಬೇಕಾದ್ದು ಗೌರ್ವನರ್ಮೆಂಟ್ ಆಫ್ ಇಂಡಿಯಾಕ್ಕೆ ಹೋಗಬೇಕೆಂದು ಈಗ ಅವರೇ ಹೇಳಿದರು. ಹೆಚ್ಚು ಸೀಟ್ ಬೇಕು ಎಂದು ಅದರ ಹತ್ತಿರ ಹೋಗುವ ಬದಲಾಗಿ ನೇರವಾಗಿ ಗೌರ್ವನರ್ಮೆಂಟ್ ಆಫ್ ಇಂಡಿಯಾಕ್ಕೆ ಅಪ್ರೋಚ್ ಮಾಡಿ ನಮ್ಮಲ್ಲಿ ಇಷ್ಟು ಬೆಡ್ ಸಂಖ್ಯೆ ಇಷ್ಟು ವಿದ್ಯಾರ್ಥಿಗಳನ್ನು ನಾವು ಕೊಡುತ್ತೇವೆ, ಇಷ್ಟು ಪರ್ಮಿಷನ್ ಕೊಟ್ಟಿದ್ದೇವೆ ನೀವು ಅಪ್ರೂವಲ್ ಕೊಡಿ ಎಂದು ಕೇಳಿ. ಗೌರ್ವನರ್ಮೆಂಟ್ ಆಫ್ ಇಂಡಿಯಾದ ಅಪ್ರೂವಲ್ ಸಿಕ್ಕಿದಮೇಲೆ question of Supreme Court judgment. ಓವರ್ ರೂಲ್ ಆದ ಹಾಗೆ ಆಗುತ್ತದೆ. ಅದು ಎಂಸಿಐಗೆ ಸೀಮಿತ ಇದ್ದ ಜಡ್ಜಮೆಂಟ್ ಅದು, ಗೌರ್ವನರ್ಮೆಂಟ್ ಆಫ್ ಇಂಡಿಯಾ ಬೇರೆಯಾಗಿ ನಿಮಗೆ ಆರ್ಡರ್ ಕೊಟ್ಟಮೇಲೆ, ಆ ಆರ್ಡರ್ ಚಾಲೆಂಜ್ ಮಾಡಿದರೆ ಈ ಜಡ್ಜ್‌ಮೆಂಟ್ ಆಗುವುದಿಲ್ಲ.

ಶ್ರೀ ಕಾಗೋಡ ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಎಂಸಿಐ 150 ಸೀಟ್ ಕೊಡುತ್ತದೆ, ಇನ್ನು ಜಾಸ್ತಿ ಬೇಕಾದರೆ ಕೇಂದ್ರ ಸರ್ಕಾರಕ್ಕೆ ಹೋಗಬೇಕು.

ಎಂ. ಶಂಕರ್ ನಾಯಕ್ : ಈಗ ಅವರು 150 ಕೊಡಲಿ ಎಷ್ಟೇ ಕೊಡಲಿ only recommend ಮಾಡತಕ್ಕದ್ದು. ಆಕ್ಟ್‌ನಲ್ಲಿ 150 ಸೀಟ್‌ಗಳಿಗೆ ಶಿಫಾರಸ್ಸ್ ಮಾಡುವಂತಹ ಅಧಿಕಾರ ಎಂಸಿಐಗೆ ಇದೆ. 150ಕ್ಕಿಂತ ಹೆಚ್ಚಿಗೆ ಇದ್ದರೆ ತೀರ್ಮಾನ ತೆಗೆದುಕೊಳ್ಳುವುದು ಕೇಂದ್ರ ಸರ್ಕಾರ. ಇವರು ಏನು ಹೇಳುತ್ತಾರೆ ಎಂದರೆ ಹೋದ ವರ್ಷ ಬೆಳಗಾಂ ಕಾಲೇಜಿನಲ್ಲಿ 200 ವಿದ್ಯಾರ್ಥಿಗಳನ್ನು ಆಡ್ಮಿಷನ್ ಮಾಡಿಕೊಳ್ಳುವ ಅನುಕೂಲತೆ ಇದ್ದರೂ ಕೂಡ ನಾವು 150ನ್ನು ಶಿಫಾರಸ್ಸು ಮಾಡುತ್ತೇವೆ ಎಂದು. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ 150 ಸೀಟ್ ಕೂಡಬೇಕಾ ಅಥವಾ 200 ಕೊಡಬೇಕೋ ಎಂಬ ಅಂತಿಮ ನಿರ್ಧಾರವನ್ನು ಮಾಡುತ್ತದೆ. MCI is only a recommendatory body to the Union Government. ನಮ್ಮ ರಾಜ್ಯದಲ್ಲಿ, ನಮ್ಮ ಕಾಲೇಜಿನಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಯೂನಿಯನ್ ಗೌವರ್ನ್‌ಮೆಂಟ್ ಹೇಳಲಿ, ಈಗ ಒಂದು ಕುಟುಂಬದಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಮಾಸ್ಟರ್ ಹೇಳಲಿ. ಆದರೆ ನೌಕರನು ಹೇಳುವಂತಿಲ್ಲ. ಯುನಿಯನ್ ಗೌವರ್ನ್‌ಮೆಂಟ್ ಸುಪ್ರಿಮ್ ಕೋರ್ಟ್‌ಗೆ ಹೋಗಲಿ, ರಾಜ್ಯಸರ್ಕಾರಕ್ಕೆ ಏನಾದರೂ ಆರ್ಡರ್ ಕೊಡಲಿ, ಆದರೆ ಎಂಸಿಐ ನೇರವಾಗಿ ಸುಪ್ರೀಂ ಕೋರ್ಟ್‌ಗೆ ಹೋಗುವ ಅವಶ್ಯಕತೆ ಏನಿದೆ? ಎಲ್ಲಿ ಇದೆ? ಕಾನೂನಿನಲ್ಲಿ ಎಲ್ಲಿ ಇದೆ? ಇದನ್ನು ನಾವು ಕೇಳುವುದು. ನಾವು ಈಗ ಅಪೀಲ್ ಮಾಡುವುದು ಇಲ್ಲ.

ಡಾ|| ಎಂ. ಪಿ. ಖರ್ಕಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಸೀಟ್ ನಿಗದಿ ಮಾಡಿತು ಕೆಲವು ಅಂಶಗಳ ಆಧಾರದ ಮೇಲೆ. ಬೆಡ್ ಸಂಖ್ಯೆ, ಎಷ್ಟು ಕೆಪ್ಯಾಸಿಟಿ ಇದೆ ಅದರ ಆಧಾರದ ಮೇಲೆ ನಿಶ್ಚಯ ಮಾಡುತ್ತಾರೆ. ಎರಡನೆಯದು ಪ್ರಾಕ್ಟೀಸ್ ಮಾಡಬೇಕಾದರೆ ಮೆಡಿಕಲ್ ಕೌನ್ಸಿಲ್ ಸರ್ಟಿಫಿಕೇಟ್ ಕೊಡಬೇಕಾಗುತ್ತದೆ. ಪರೀಕ್ಷೆ ಪಾಸ್ ಮಾಡಿದರೂ ಕೂಡ, ಇವರು ಸರ್ಟಿಫಿಕೇಟ್ ಕೊಡಬೇಕಾಗುತ್ತದೆ. M.C.I. ಡೈರೆಕ್ಷನ್ ಹೊರಗೆ ಮಾಡಿದರೆ, ಈ ಪಾಸ್ ಆದ ವಿದ್ಯಾರ್ಥಿಗಳೂ ಕೂಡ ಪ್ರಾಕ್ಟೀಸ್ ಮಾಡುವ ಹಾಗೆ ಇಲ್ಲ. ಅದರ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಪ್ರಮುಖವಾದ ವಿಚಾರ ಇಲ್ಲಿ ಇರುವುದು, ತಾವು ಹೇಳಿದ್ದೀರಿ 1992 ಇಸವಿಯಲ್ಲಿ ಅದಕ್ಕಿಂತ ಹಿಂದೆ ಏನು ರಾಜ್ಯ ಸರ್ಕಾರ ನಿಗದಿ ಮಾಡಿತ್ತು ಅದರ ಪ್ರಕಾರ ನಾವು ಅಡ್ಮಿಷನ್ ಮಾಡುತ್ತಿದ್ದೇವೆ ಎಂದು ತಾವು ಹೇಳಿದ್ದೀರಿ, ಅದು ನಿಜವೇ?

ಡಾ|| ಎಂ. ಶಂಕರ್ ನಾಯಕ್ : ಮಾನ್ಯ ಅಧ್ಯಕ್ಷರೆ, ಅದು 4 ಕಾಲೇಜುಗಳಲ್ಲಿ ಏನು ಕೇಂದ್ರ ಸರ್ಕಾರದಿಂದ ನಿಗದಿಯಾಗಿದೆ ಆ ಕಾಲೇಜುಗಳನ್ನು ಬಿಟ್ಟು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ತಮ್ಮ ಮುಂದೆ ದಾಖಲಾತಿಗಳನ್ನು ಕೊಡಲು ನಾನು ಸಿದ್ಧನಾಗಿದ್ದೇನೆ, 1992ನೇ ಇಸವಿಯಲ್ಲಿ 205 ಸೀಟ್‌ಗಳನ್ನು ತೆಗೆದುಕೊಳ್ಳಲಾಗಿತ್ತು, 1993-94ರಲ್ಲಿ

2800 ಮಾಡಿದರು, ಪುನಃ 94-95ರಲ್ಲಿ 3075 ಸೀಟ್ ಮಾಡಿದರು ಮತ್ತೆ 95-96ರಲ್ಲಿ 3076 ಮಾಡಿದ್ದಾರೆ. ಅಂದರೆ 1992ನೇ ಇಸವಿ ಬಗ್ಗೆ ಯಾರೂ ವಿಚಾರ ಹೇಳುತ್ತಾ ಇಲ್ಲ. ನಂತರ ಎಂಸಿಐ ಪರ್ಮಿಷನ್ ಇಲ್ಲದೆ, ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲದೇನೆ ಮಾಡಿರುವುದು ಸತ್ಯವಾದ ವಿಚಾರವೇ ಎಂದು ಸರ್ಕಾರವನ್ನು ಕೇಳುತ್ತೇನೆ.

ಡಾ|| ಎಂ. ಶಂಕರ್‌ನಾಯಕ್ : 1.6.92 ರ ಹಿಂದೆ ಏನು ರಾಜ್ಯ ಸರ್ಕಾರದ ಪ್ರಕಾರ ಸೀಟ್‌ಗಳು ನಿಗದಿಯಾಗಿತ್ತೋ.

ಶ್ರೀ ಕಾಗೋಡು ತಿಮ್ಮಪ್ಪ : 1-6-92ರ ಕ್ಕಿಂತ ಹಿಂದೆ ರಾಜ್ಯ ಸರ್ಕಾರಕ್ಕೆ ಇನ್‌ಟೇಕನ್ನು ನಿಗದಿ ಮಾಡುವ ಅಧಿಕಾರವಿದ್ದರೂ ಸಹ it was all subject to the approval of the M.C.I. Ultimately ಎಂ.ಸಿ.ಐ. ನವರು ಏನು ಇನ್‌ಟೇಕನ್ನು ನಿಗದಿ ಮಾಡಿದ್ದರೋ it was only the official intake. ಬೇಕಾದರೆ ಆ್ಯಕ್ಟನ್ನು ತೆಗೆದುನೋಡಿ. 1.6.92 ಗಿಂತ ಹಿಂದೆ ಪ್ರತಿಯೊಂದು ಕಾಲೇಜಿಗೂ ಇನ್‌ಟೇಕನ್ನು ನಿಗದಿ ಮಾಡಿದ್ದಿರಿ. ಆ ರೀತಿ ನಿಗದಿ ಮಾಡುವ ಸಮಯದಲ್ಲಿ you have marked that it is all subject to the approval of the M.C.I. ಎಂದು ಮಾರ್ಕ್ ಮಾಡಿದ್ದೀರಿ. ಅದು ಇದೆಯೋ ಇಲ್ಲವೋ ಎಂಬುದನ್ನು ತೆಗೆದುನೋಡಿ.

ಡಾ|| ಎಂ. ಶಂಕರನಾಯಕ್ : ಆಗ ಎಂ.ಸಿ.ಐ. ಶಿಫಾರಸ್ಸಿನ ಮೇಲೆ ರಾಜ್ಯಸರ್ಕಾರ ಮಾಡಬೇಕೆಂದು ಇರಲಿಲ್ಲ. ಹಿಂದಿನ ತಮ್ಮ ಕಾಯ್ದೆಯ ಪ್ರಕಾರ ಕರ್ನಾಟಕ ಯುನಿವರ್ಸಿಟಿ ಆ್ಯಕ್ಟ್ ಏನಿದೆ, Capitation Prohibition Act ಏನಿದೆ ಅದರ ಪ್ರಕಾರ ಯಾವುದೇ ಕಾಲೇಜನ್ನು ನಿಗದಿ ಮಾಡತಕ್ಕದ್ದು ಆಯಾಯ ವಿಶ್ವವಿದ್ಯಾನಿಲಯಗಳಿಗೆ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಇತ್ತು 1.6.92ರಲ್ಲಿ ಈ ತಿದ್ದುಪಡಿಯನ್ನು ತಂದರು. ಆಗ ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡು ಅದನ್ನು ರೆಗ್ಯುಲರೈಸ್ ಮಾಡಬೇಕೆಂದು ಅವರು ಹೇಳಿದರು. ಅದರಂತೆ ಎಲ್ಲಾ ಕಾಲೇಜಿನವರು ಅಪ್ಲಿಕೇಷನ್‌ಗಳನ್ನು ಹಾಕಿಕೊಂಡರು. ಅವರು ಇನ್ಸ್‌ಪೆಕ್ಟ್ ಮಾಡಿದರು. ಆ್ಯಕ್ಟ್ ಏನು ಹೇಳುತ್ತದೆಂದರೆ M.C.I. is the recommendatory body to the Union Government. Ultimately the Union Government has to give the final approval. ಆ ಫೈನಲ್ ಅಪ್ರೂವಲ್ ಎಲ್ಲಿಗೆ ಯೂನಿಯನ್ ಗೌವರ್ನಮೆಂಟ್ ನಿಂದ ಬಂದಿದೆ ಅದನ್ನು ಮಾತ್ರ ರಾಜ್ಯ ಸರ್ಕಾರ ಪರಿಗಣನೆಗೆ ತೆಗೆದುಕೊಂಡಿದೆ. ಯೂನಿಯನ್ ಗೌರ್ನಮೆಂಟ್‌ನಿಂದ ಎಲ್ಲಿಯವರೆಗೆ ಬರಲಿಲ್ಲ ಅಲ್ಲಿಯವರೆಗೆ ತೆಗೆದುಕೊಂಡಿಲ್ಲ. ಈಗ ಇದು ಫೈನಲೈಸ್ ಆಗಬೇಕಾಗಿದೆ. ನಾವು ಈಗ ಎಂ.ಸಿ.ಐ. ನವರ ಮಾತುಕೇಳಬೇಕೇ ಅಥವಾ ಯೂನಿಯನ್ ಗೌರ್ನಮೆಂಟ್‌ರವರ ಮಾತನ್ನು ಕೇಳಬೇಕೇ ಎಂಬುದು ತೀರ್ಮಾನವಾಗಬೇಕಾಗಿದೆ. which order is the final?

ಶ್ರೀ ಕಾಗೋಡು ತಿಮ್ಮಪ್ಪ : ತಾವು ಇಲ್ಲಿ ಮಿಸ್‌ಗೈಡ್ ಮಾಡಿದ್ದೀರಿ.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಎಂ.ಸಿ.ಐ.ನ ಸಲಹೆಗಳೇನಿರುತ್ತದೆ ಅದನ್ನು ಕೇಂದ್ರ ಸರ್ಕಾರ ತಿರಸ್ಕಾರ ಮಾಡಲು ಸಾಧ್ಯವೇ ಇಲ್ಲ. ಆದ್ದರಿಂದ ಎಂ.ಸಿ.ಐ. ಏನು ಹೇಳುತ್ತದೆ ಅದೇ ಸತ್ಯ,

ಅದನ್ನೇ ತಾವು ಅನುಸರಿಸಬೇಕಾಗಿತ್ತು. ಈಗ ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದು ಅವಕಾಶ ಮಾಡಿಕೊಂಡು ತಾವು ಹೆಚ್ಚಿಗೆ ಅಡ್ಮಿಷನ್ ಕೊಡಲು ಆಗುವುದಿಲ್ಲ.

ಡಾ|| ಎಂ. ಶಂಕರ್‌ನಾಯಕ್ : ಅಧ್ಯಕ್ಷರೆ, ನಿಯಮ 10ಎ,ಬಿ,ಸಿ, ಮತ್ತು 19ರ ಪ್ರಕಾರ ಅವರು ಯಾವುದೇ ಕಾಲೇಜಿನ ಸೀಟನ್ನು ಕಡಿಮೆ ಮಾಡಲಿ ಅಥವಾ ಹೆಚ್ಚು ಮಾಡಲಿ ಅದಕ್ಕೆ ಕಾರಣವನ್ನು ಕೊಡಬೇಕು. ಆ ಕಾರಣವನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕು. ಕೇಂದ್ರ ಸರ್ಕಾರ ಮಾಡಿದ್ದು ಅಂತಿಮವಾದ ನಿರ್ಣಯ ಅದು ಹೆಚ್ಚು ಮಾಡಬಹುದು, ಕಡಿಮೆಯನ್ನು ಮಾಡಬಹುದು.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರೆಂದರೆ, ಎಂ.ಸಿ.ಐ. ಒಂದು ಸಲ ತೀರ್ಮಾನಕ್ಕೆ ಬಂದು ಇಷ್ಟು ಸೀಟ್‌ಗಳೆಂದು ನಿರ್ಣಯ ಮಾಡಿದಮೇಲೆ ಕೇಂದ್ರ ಸರ್ಕಾರಕ್ಕೆ ಅಧಿಕಾರವಿದ್ದರೂ ಸಹ ಅವರು ಆ ಸೀಟನ್ನು ಹೆಚ್ಚು ಮಾಡಲು ಹೋದರೆ ಬಹಳ ಸೆನ್‌ಸಿಟೀವ್ ವಿಷಯವಾಗುತ್ತದೆ, ಮೊಟೀವ್ಸ್ ಇಂಪ್ಯೂಟ್ ಮಾಡುತ್ತಾರೆ, ಸ್ಕ್ಯಾಂಡಲೈಜ್ ಮಾಡುತ್ತಾರೆ. ಆದ್ದರಿಂದ ಅವರು ಮಾಡುವುದಿಲ್ಲ, ಕಷ್ಟವಾಗುತ್ತದೆಂದು ವಿರೋಧ ಪಕ್ಷದ ನಾಯಕರು ಹೇಳಿದ್ದು. Because M.C.I. takes all aspects into consideration and makes recommendation.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ತಿಳಿದುಕೊಂಡು ಎಂ.ಸಿ.ಐ.ನವರು ಮಾಡಿದಷ್ಟೇ ಸೀಟನ್ನು ಕೊಡಬೇಕಾಗಿತ್ತು. ಇಲ್ಲದಿದ್ದರೆ ತಮ್ಮ ಶಿಫಾರಸ್ಸನ್ನು ಉಪಯೋಗ ಮಾಡಿ ರಾಜ್ಯಕ್ಕೆ ಹೆಚ್ಚಿನ ಸೀಟು ಸಿಗುತ್ತದೆಂದು ಕೇಂದ್ರ ಸರ್ಕಾರದಿಂದಾದರು ಅಪ್ರೂವ್ ಮಾಡಿಕೊಂಡು ಬಂದು ಐದುನೂರು ಹೆಚ್ಚು ಸೀಟುಗಳು ಸಿಗುವಂತೆ ಮಾಡಬಹುದಿತ್ತು. ಸೆಕ್ಷನ್ 10 'ಎ' ಏನು ಹೇಳುತ್ತದೆಂದರೆ.

i) "No person shall establish a medical college, no medical college shall open a new or higher course of study including post Graduate course.

ii) "Increase its admission capacity in any course of study or training except with the prior permission of the Central Government obtained in accordance with the provisions of this section."

The other 8 & 10 details are provided with explanation. Added to this, one has to adhere strictly to the standards prescribed as per 19A, which deals with student : Teacher Ratio, equipment etc.

Section 10B:

Any medical college established without the permission of the Central Government in accordance with Section 10A, no medical qualification of any student of such medical college shall not be recognised including Post Graduate Course;

Section 10B (b) :

> Where any medical college increase its admission capacity in any course of study or training including Post Graduate course except with the previous permission of the Central Government, no medical qualification granted to any student shall be recognised.

It means that naturally when the Government of India gives permission the seats can be increased or decreased, Therefore, MCI is a recommendatory body. The supreme authority is Government. ಇದು ಗೊತ್ತಿದ್ದರೂ ಕೂಡ Why you did not go to Government of India? ಅದು ಅಲ್ಲಿ ಸಿಗುವುದಿಲ್ಲ ಎಂದು ಗೊತ್ತಾಗಿದ್ದರೆ, ಎಂ.ಸಿ.ಐ.ನವರು ಏನು ಫಿಕ್ಸ್ ಮಾಡಿದ್ದರು ಅದಕ್ಕೇ ಏತಕ್ಕೆ ಸೀಮಿತವಾಗಿರಲಿಲ್ಲ? These are the two things. ಮುಂದೆ ಏನು ಹೇಳುತ್ತಾರೆ, Any medical college, after 92, intends to open a new or higher course of study or increase its admission capacity, such medical college shall seek the permission of the Central Government in accordance with provision of section 10A within one year. ಅಂದರೆ 1992ಆದಮೇಲೆ ಏನು ಕಾಲೇಜುಗಳು ಬರುತ್ತವೆ ಅವರು ತಮ್ಮ ಸೀಟನ್ನು ಹೆಚ್ಚು ಮಾಡಿಕೊಳ್ಳಬೇಕಾದರೆ ಭಾರತ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕು, ಅದರ ಹಿಂದೆ ಇರತಕ್ಕ ಕಾಲೇಜಿನವರಿಗೆ ಇದು ಅಗತ್ಯವಿಲ್ಲ ಎನ್ನತಕ್ಕದ್ದು ಕ್ಲಿಯರ್ ಆಗಿದೆ. ಇವೆಲ್ಲಾ ಇದ್ದಮೇಲೆ ತಾವು ಭಾರತ ಸರ್ಕಾರದಿಂದ ನೇರವಾಗಿ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಯಾಕೆ ಈ ರೀತಿ ಸುತ್ತುಬಳಸಿ ಮಕ್ಕಳಿಗೆ ತೊಂದರೆ ಕೊಡುವುದನ್ನು ಮಾಡಿದಿರಿ ಇಲ್ಲ, ನಿಮಗೆ ಶಕ್ತಿ ಇಲ್ಲವೆಂದಮೇಲೆ 1950 ಸೀಟುಗಳಿಗೆ ಸೀಮಿತವಾಗಿರಬೇಕಾಗಿತ್ತು.

ಡಾ|| ಎಂ. ಶಂಕರ್‌ನಾಯಕ್ : ತಾವೇನು ಇಲ್ಲಿ ಆಕ್ಟ್‌ನ್ನು ಓದಿದ್ದೀರಿ 10 ಏ.ಬಿ.ಸಿ. ಪ್ರಕಾರವೇ ಡಿವಿಜನ್ ಬೆಂಚ್ ಆರ್ಡರ್ ಮಾಡಿದ್ದು. ಅದರ ಆರ್ಡ್‌ರ್ ಪ್ರಕಾರವೇ ನಾವು ಮ್ಯಾಟ್ರಿಕ್ಸ್‌ನ್ನು ಮಾಡಿದ್ದು. ಅದನ್ನು ಮಾಡಿದಮೇಲೆ ಕೌನ್ಸಿಲಿಂಗ್ ಪ್ರಾರಂಭವಾದಮೇಲೆ ಸುಪ್ರೀಮ್ ಕೋರ್ಟ್‌ನಿಂದ ಈ ರೀತಿ ಆದೇಶ ಬಂದಮೇಲೆ ನಾವು ಅಫಿಡೆವಿಟ್ ಹಾಕಿದ್ದು.

ಶ್ರೀ ಕಾಗೋಡು ತಿಮ್ಮಪ್ಪ : 1.6.92 ಹಿಂದೆ ಎಂ.ಸಿ.ಐ. ಅಪ್ರೂವ್ ಮಾಡಿರುವ ಒಟ್ಟಾರಿ ಸೀಟು ಎಷ್ಟು? 1992ಕ್ಕಿಂತ ಹಿಂದೆ ಯಾವ್ಯಾವ ಕಾಲೇಜಿತ್ತು ಅದಕ್ಕೆ ಇನ್‌ಟೇಕ್‌ಗೆ ಎಂ.ಸಿ.ಐ. ಅಪ್ರೂವ್ ಕೊಟ್ಟಿದೆ.

ಡಾ||ಎಂ. ಶಂಕರ್‌ನಾಯಕ್ : ಸಭಾಧ್ಯಕ್ಷರೇ, it will not come to us. It will go to the union Government. 1956-60ರಲ್ಲಿ ಎಂ.ಸಿ.ಐ. ಅಪ್ರೂವ್ ಕೊಟ್ಟಿರತಕ್ಕದ್ದು ಬಹಳಷ್ಟು ಕಡಿಮೆ. 40,50,40 ಸೀಟನ್ನು ಕೊಟ್ಟಿದ್ದಾರೆ. ಆದರೆ ಆಗ ರಾಜ್ಯಸರ್ಕಾರಕ್ಕೆ ವಿಶ್ವವಿದ್ಯಾನಿಲಯದ ಶಿಫಾರಸ್ಸಿನ ಮೇಲೆ ಸೀಟನ್ನು ನಿಗದಿ ಮಾಡುವ ಅಧಿಕಾರವಿತ್ತು. 1.2.96 ಆದ ಮೇಲೆ ನಾಲ್ಕು ಕಾಲೇಜಿಗೆ ಮಾತ್ರ

ಯೂನಿಯನ್ ಗೌರ್ನಮೆಂಟ್‌ನಿಂದ ನಿಗದಿಯಾಗಿ ಬಂದಿರುವುದು. ಬಾಕಿದ್ದೆಲ್ಲಾ ಯೂನಿಯನ್ ಗೌರ್ನಮೆಂಟ್‌ನಲ್ಲೇ ಇದೆ. They are the recommendatory body to the Union Government. Let the Union Government give the final figure.

ಶ್ರೀ ಎ. ರಾಮದಾಸ್ : ಇಲ್ಲಿ ಎಂ.ಸಿ.ಐ. ನವರ ಪ್ರಶ್ನೆ ಬೇಡವೇ ಬೇಡ. ರಾಜ್ಯ ಸರ್ಕಾರದಿಂದ 1992ನೇ ಜೂನ್ 1ನೇ ತಾರೀಖು ಎಷ್ಟು ಸೀಟು ಇತ್ತು? ರಾಜ್ಯ ಸರ್ಕಾರದವರು ನಿಗದಿ ಮಾಡಿದ್ದ ಸೀಟು 1.6.92ರಲ್ಲಿ ಎಷ್ಟು ಇತ್ತು?

ಶ್ರೀ ಕಾಗೋಡು ತಿಮ್ಮಪ್ಪ : ಆಗ ಇವರು ಮನಸ್ಸಿಗೆ ಬಂದಂತೆ ಕೆಲವರಿಗೆಲ್ಲಾ ಆಡ್‌ಹಾಕ್ ಆಗಿ ಸೀಟನ್ನು ಕೊಟ್ಟುಕೊಂಡಿದ್ದಾರೆ. ಇವರು ಇದನ್ನೂ ಸೇರಿಸಿ ಹೇಳುತ್ತಾರೆ. ಸೀಟು ಸ್ಯಾಂಕ್ಷನ್ ಆಗಬೇಕಾದರೆ ಇನ್‌ಟೇಕ್ ಎಷ್ಟು ನಿಗದಿ ಮಾಡಿದ್ದಿರಿ ಅದನ್ನು ಹೇಳಿ? ಅದನ್ನು ಬಿಟ್ಟು ಯಾರೋ ಒಬ್ಬರ ಜೊತೆಗೆ ಹೋಗುವುದು ಐವತ್ತು ಸೀಟ್ ಅಡ್ಮಿಷನ್ ಮಾಡಿಕೊಳ್ಳುವುದು ಕೊನೆಗೆ ರ್‍ಯಾಟಿಫೈ ಮಾಡುವುದು ಇವೆಲ್ಲಾ ಸ್ಟ್ರೆಂಗ್ತ್ ಅಲ್ಲ.

ಡಾ॥ ಎಂ. ಶಂಕರ್‌ನಾಯಕ್ : ಮಾನ್ಯ ಅಧ್ಯಕ್ಷರೆ, 1992 - 93,94 ಅವರದ್ದೇ ಸರ್ಕಾರವಿತ್ತು. ಅವರೇ ಸಚಿವರಾಗಿದ್ದರು. ಯಾವ ರೀತಿ ಸೀಟ್ ಕೊಟ್ಟರು ಹೇಗೆ ಕೊಟ್ಟರು ಎಂಬುದು ನನಗಿಂತ ಅವರಿಗೇ ಚೆನ್ನಾಗಿ ಗೊತ್ತಿದೆ. ನಾನು ಈ ವರ್ಷದಲ್ಲಿ ಮತ್ತು ಹೋದ ವರ್ಷದಲ್ಲಿ ಏನು ಮಾಡಿದ್ದೇವೆ ಅದರ ಬಗ್ಗೆ ಹೇಳುತ್ತಿದ್ದೇನೆ. ನೀವು ಯಾರ್‍ಯಾರಿಗೆ ಹೇಗೆ ಕೊಟ್ಟಿರಿ ನನಗೇನು ಗೊತ್ತು?

Mr. SPEAKER : To that exten, you are innocent.

ಶ್ರೀ ಎ. ರಾಮದಾಸ್ : ಅವರಿಗೆ ಒಂದೇ ಸಲ ಆ ರೀತಿ ಸರ್ಟಿಫಿಕೇಟ್ ಕೊಡುವುದು ಸೂಕ್ತವಲ್ಲ. ನಮ್ಮ ರಾಜ್ಯದ ವೈದ್ಯಕೀಯ ಮತ್ತು ಇತರ ವೃತ್ತಿಪರ ಕಾಲೇಜುಗಳಲ್ಲಿ ಮಾಡಿದ ಪ್ರವೇಶಗಳನ್ನು ಅವಲೋಕಿಸಿದಾಗ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸುವ ಬದಲಿಗೆ ನಿಯಮವನ್ನು ಕ್ರಮಬದ್ಧವಾಗಿ ಉಲ್ಲಂಘಿಸಲಾಗಿದೆ. ಇದನ್ನು ಹೇಳಿದವರು ಇಂದು ಯಾರು ಸಚಿವರಾಗಿದ್ದಾರೆ ಅವರು ಸದಸ್ಯರಾಗಿದ್ದಾಗ 1995-96ರಲ್ಲಿ ಒಂದು ವರದಿಯನ್ನು ಕೊಟ್ಟು ಈ ರೀತಿ ಹೇಳಿದ್ದಾರೆ. ಆ ವರದಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಅದು ನಿಜವೇ ಅಲ್ಲವೇ?

ಡಾ॥ ಎಂ. ಶಂಕರ್‌ನಾಯಕ್ :1990-91, 92 ರಲ್ಲಿ ಸೀಟುಗಳ ಹಂಚಿಕೆಯಲ್ಲಿ ನ್ಯಾಯಾಲಯದ ತೀರ್ಪಿನ ಉಲ್ಲಂಘನೆಯಾಗಿದೆ ಎಂದು ನಾನು ಈಗಲೂ ಹೇಳುತ್ತೇವೆ. ಅವರೂ ಒಪ್ಪಿಕೊಳ್ಳುತ್ತಾರೆ ನಾವೂ ಒಪ್ಪಿಕೊಳ್ಳುತ್ತೇವೆ. ಯಾವ ರೀತಿಯಲ್ಲಿ ಉಲ್ಲಂಘನೆಯಾಗಿದೆ ಎಂಬ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇಲ್ಲ. ನಮ್ಮ ಸರ್ಕಾರ ಬಂದಮೇಲೆ ಅವರೇನು ಬ್ಯಾಕ್‌ಲಾಗ್ ಸೀಟಿನ ಬಗ್ಗೆ ಹೇಳಿದ್ದಾರೆ ಅದನ್ನು ಕಿತ್ತು ಹಾಕಿದ್ದೇವೆ. ಒಂದೂ ಎಕ್ಸೆಸ್ ಅಡ್ಮಿಷನ್ ಇಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಮ್ಮೆಲ್ಲರಿಗಿಂತ ಚೆನ್ನಾಗಿ ವಿಷಯ ಗೊತ್ತಿದೆ. ಅವರು ಒಂದು ಡೆಂಟಲ್ ಕಾಲೇಜನ್ನು ನಡೆಸುತ್ತಿದ್ದಾರೆ. ಬ್ಯಾಕ್‌ಲಾಗ್ ಏಕೆ, ಹೇಗೆ ಬಂತು ಎಂಬುದು ಅವರಿಗೂ ಚೆನ್ನಾಗಿ ಗೊತ್ತಿದೆ. ಆದರೆ ಹಿಂದೆ ಬ್ಯಾಕ್‌ಲಾಗ್

ಸೀಟ್‌ಗಳಿಗೆ ಎಂ.ಸಿ.ಐ. ನವರು ಅಲೋ ಮಾಡಿದ್ದರು. ನಾವು ಬಂದಮೇಲೆ ಬ್ಯಾಕ್‌ಲಾಗ್‌ನಿಂದ ಅನ್ಯಾಯವಾಗುತ್ತಿದೆಯೆಂದು ಆ ಸುತ್ತೋಲೆಯನ್ನು ಕಿತ್ತುಹಾಕಿದೆವು. ಕೋರ್ಟ್‌ನಲ್ಲಿ ಇನ್ನು ಮುಂದೆ ಬ್ಯಾಕ್‌ಲಾಗ್‌ನ್ನು ತುಂಬುವುದಿಲ್ಲವೆಂದು ಅಂಡರ್‌ಟೇಕಿಂಗ್‌ನ್ನು ಕೊಟ್ಟೆವು.

ಶ್ರೀ ಎಂ. ರಾಮದಾಸ್ : ಯಾವುದೇ ಮಾಹಿತಿ ಹೋಗುವಂಥ ಸಂದರ್ಭದಲ್ಲಿ ಸತ್ಯಕ್ಕೆ ದೂರವಾದ ವಿಚಾರ ಹೋಗಬಾರದು.

ಅಧ್ಯಕ್ಷರು : ಸೀಟ್‌ಗಳನ್ನು ಜಾಸ್ತಿ ಮಾಡಿದ್ದಾರೆ, ಜಾಸ್ತಿ ವೈದ್ಯರುಗಳಾದರೆ ನಮಗೆ ಒಳ್ಳೆಯದಲ್ಲವೇ?

ಶ್ರೀ ಎ. ರಾಮದಾಸ್ : ನಮಗೆ ಹೆಚ್ಚು ವೈದ್ಯರಲ್ಲ, ಒಳ್ಳೆಯ ವೈದ್ಯರುಗಳು ಬೇಕಾಗಿದೆ. ಟೀಚಿಂಗ್ ಸ್ಟಾಫ್ ಇಲ್ಲದಿರುವ ಕಡೆ, ಬೆಡ್ ಇಲ್ಲದಿರುವ ಕಡೆ, ಇನ್‌ಫ್ರಾಸ್ಟ್ರಕ್ಚರ್ ಇಲ್ಲದಿರುವ ಕಡೆ ಹೆಚ್ಚು ಸೀಟ್‌ಗಳನ್ನು ಕೊಡಬಾರದು ಎನ್ನತಕ್ಕ ಒಂದೇ ಒಂದು ಕಾರಣದಿಂದ ಶಿಕ್ಷಣದ ಗುಣಮಟ್ಟ ಚೆನ್ನಾಗಿರಬೇಕು ಎನ್ನತಕ್ಕ ಆಸೆಯನ್ನು ಇಟ್ಟುಕೊಂಡಿರುವವನು ನಾನು. 1992-93ರಲ್ಲಿ 2005 ಸೀಟು ಇತ್ತು, 1993-94ರಲ್ಲಿ ರಾಜ್ಯ ಸರ್ಕಾರ 2914ಕ್ಕೆ ಏರಿಸಿದರು, 94-95 ರಲ್ಲಿ 2945 ಮಾಡಿದರು, 1995-96ರಲ್ಲಿ 2945 ಅಡ್ಮಿಷನ್ ಮಾಡಿದ್ದಾರೆ.

ಡಾ|| ಎಂ. ಶಂಕರ್‌ನಾಯಕ್ : ತಾವು ಈ ರೀತಿ ಹೇಳುವುದರ ಬದಲಾಗಿ ಇದರ ಬಗ್ಗೆ ಒಂದು ಸಮಯ ನಿಗದಿ ಮಾಡಿ ಚರ್ಚೆ ಮಾಡೋಣ. ನಾವು ಮಾಹಿತಿಯನ್ನು ತರುತ್ತೇವೆ.

ಅಧ್ಯಕ್ಷರು : ಇಲ್ಲಿ ನಾನೇ ತಪ್ಪು ಮಾಡಿದೆ. ಮೂರು ಜನರ ವಿಷಯವನ್ನು ಒಟ್ಟಿಗೆ ಸೇರಿಸಿಬಿಟ್ಟೆ. ಡಿ.ಆರ್. ಪಾಟೀಲರ ಸಮಸ್ಯೆ ಏನೆಂದರೆ ವಿತರಣೆಯಾಗತಕ್ಕ ಸೀಟ್‌ಗಳು ರಾಜ್ಯದ ಒಂದೇ ಭಾಗದಲ್ಲಿ ಹೋಗುತ್ತದೆ ಎಲ್ಲಾ ಭಾಗಕ್ಕೆ ಹೋಗುವುದಿಲ್ಲವೆಂಬುದಾಗಿದೆ, ರಾಮ್‌ದಾಸ್‌ರವರದ್ದು ಶಿಕ್ಷಣ ಗುಣಮಟ್ಟದ ಬಗ್ಗೆಯದಾಗಿದೆ, ವಿರೋಧಪಕ್ಷದ ನಾಯಕರು, ಹಾಗೂ ಸುರೇಶ್‌ಕುಮಾರ್‌ರವರು ಸುಪ್ರೀಮ್‌ಕೋರ್ಟ್ ಜಡ್ಜ್‌ಮೆಂಟ್‌ನಿಂದ ಆಗಿರುವುದರಿಂದ ಆಗಿರುವ ತೊಂದರೆಯ ಬಗ್ಗೆ ಹೇಳುತ್ತಿದ್ದಾರೆ. We will take this matter on yet another day.

ಶ್ರೀ ಎ. ರಾಮದಾಸ್ : ತಾವು ಅಧ್ಯಕ್ಷರಾದಂಥ ಸಮಯದಲ್ಲೇ ಇದಕ್ಕೆ ಇತಿಶ್ರೀಯನ್ನು ಹೇಳಬೇಕೆಂದು ನಾನು ಚರ್ಚೆ ಮಾಡುತ್ತಿದ್ದೇನೆ. ಪ್ರತಿ ವರ್ಷ ಇದನ್ನೇ ಚರ್ಚೆ ಮಾಡುವುದು ಬೇಡವೆಂಬುದು ನನ್ನ ಉದ್ದೇಶ.

ಅಧ್ಯಕ್ಷರು : ನಾನು ಇಲ್ಲಿ ಇರುವುದಿಲ್ಲವೆಂದು ಅನುಮಾನ ಇದೆಯೇ? ನಾನು ಇಲ್ಲೇ ಇರುತ್ತೇನೆ. ಇಲ್ಲ ಎಕ್ಸಸ್ ಅಡ್ಮಿಷನ್ಸ್ ಇಲ್ಲ. ಎಲ್ಲವನ್ನೂ ರೆಗ್ಯುಲರೈಸ್ ಮಾಡಿದ್ದೇನೆ. ಸರಿಯಾಗಿ ಇಲ್ಲಿ ನಡೆಯುತ್ತದೆ. ನಿಮಗೇನೂ ಅನುಮಾನ ಬೇಡ.

ಶ್ರೀ ಎ. ರಾಮದಾಸ್ : ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಅನಂತರ ಹೇಳುತ್ತೇನೆ. The Home Minister is waiting to make a statement.

ಡಾ. ಎಂ. ಶಂಕರ್‌ನಾಯಕ್ : ಸುಪ್ರೀಮ್ ಕೋರ್ಟಿನ ಆದೇಶದ ಪ್ರಕಾರ ಸುಮಾರು 713 ಸೀಟುಗಳನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ ಇಂದು ಸಚಿವಸಂಪುಟದ ಸಭೆಯನ್ನು ಕರೆದಿದ್ದೆವು. ಅದರಲ್ಲಿ ಸುಪ್ರೀಮ್‌ಕೋರ್ಟ್ ಆದೇಶವನ್ನು ಪಾಲಿಸದೆ ಬೇರೆ ಮಾರ್ಗವಿಲ್ಲವೆಂದು ತೀರ್ಮಾನವಾಗಿದೆ. ಇದರಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಏನಾದರೂ ಪರಿಹಾರವನ್ನು ಕಂಡುಹಿಡಿಯಬೇಕೆಂದು ನಮ್ಮ ಮುಖ್ಯಮಂತ್ರಿಯವರು ಪ್ರಧಾನಮಂತ್ರಿಯವರ ಜೊತೆ ಸಂಪರ್ಕ ಕಲ್ಪಿಸಲು ಪ್ರಯತ್ನ ಮಾಡಿದರು. ಆದರೆ ಪ್ರಧಾನ ಮಂತ್ರಿಯವರು ಲಭ್ಯವಾಗಲಿಲ್ಲ. ಇವತ್ತು ನಾಳೆಯಲ್ಲಿ ಪ್ರಧಾನಮಂತ್ರಿಯವರೊಂದಿಗೆ, ಕೇಂದ್ರ ಆರೋಗ್ಯ ಸಚಿವರೊಂದಿಗೆ ಸಮಾಲೋಚನೆ ಮಾಡಿ ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಲು ಸಾಧ್ಯವೇ ಎಂಬ ಬಗ್ಗೆ ಗಮನಹರಿಸುತ್ತೇವೆ. ಇನ್ನು ಡಿ.ಆರ್. ಪಾಟೀಲರ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಹೋದವರ್ಷವೇ ವಿಭಾಗವಾರು ಸೀಟ್ ಹಂಚಿಕೆ ಮಾಡಬೇಕೆಂದು ಜೂನ್, ಜುಲೈ ತಿಂಗಳಿನಲ್ಲಿ ಅವರು ಕೇಳಿದ್ದರು. ಆಗ ಇದೇ ಸದನದಲ್ಲಿ ವಿಭಾಗವಾರು ಮಾಡಲು ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆಂದು ನಾವು ಹೇಳಿದ್ದೆವು. ಅದರ ಪ್ರಕಾರ ನಮ್ಮ ಅಧಿಕಾರಗಳನ್ನು, ವೈಸ್‌ಚಾನ್ಸ್‌ಲರ್‌ರವರನ್ನು ಕರೆದುಕೊಂಡು ಮಹಾರಾಷ್ಟ್ರ ರಾಜ್ಯಕ್ಕೆ ಹೋಗಿ ಪರಿಶೀಲನೆ ಮಾಡಿದೆವು. ಅಲ್ಲಿ ಅವರು ಗೌರ್ನರ್ ಆರ್ಡಿನೆನ್ಸ್ ಮೂಲಕ ನಾವು ನಿಯಮಗಳನ್ನು ರಚನೆ ಮಾಡುತ್ತಿದ್ದೇವೆ, ಮರಾಠವಾಡ, ವಿದರ್ಭವೆಂದು ಐದು ವಿಭಾಗ ಮಾಡಿ ಅದರಂತೆ ಸೀಟ್‌ಗಳನ್ನು ವಿತರಣೆ ಮಾಡುತ್ತೇವೆ ಎಂದು ಅವರು ಹೇಳಿದರು. ಅವರು ಹೇಳಿರುವ ಪ್ರಕಾರ ಅವರು ಮಾಡಿದ್ದ ನಿಯಮಗಳೆನ್ನೆಲ್ಲಾ ತೆಗೆದುಕೊಂಡು· ನಾವೂ ಅದೇ ರೀತಿ ಫ್ರೇಮ್ ಮಾಡಿಸಿದ್ದೆವು. ಅಷ್ಟರಲ್ಲಿ the Division Bench of Maharashtra, as per Article 114 of the Constitution of India. ನೀವು ಮೀಸಲಾತಿಯನ್ನು ಮಾಡಲು ಬರುವುದಿಲ್ಲವೆಂದು ಇವರು ಮಾಡಿದ್ದಂಥ ವಿಭಾಗವಾರು ಪ್ರವೇಶದ ಕ್ರಮವನ್ನು ಸ್ಟ್ರಕ್‌ಡೌನ್ ಮಾಡಿತು. ಅದು ಐ.ಎಲ್.ಆರ್. ನಲ್ಲಿ ರಿಪೋರ್ಟ್ ಆಗಿದೆ. ಇದನ್ನು ಭಾರತದ ಸಂವಿಧಾನದ ಪ್ರಕಾರ ಮಾಡಲು ಆಗುವುದಿಲ್ಲವೆಂದು ಹೇಳಿದ್ದಾರೆ. ಮಾನ್ಯ ವೈಜನಾಥ್ ಪಾಟೀಲ್‌ರವರು 30,70 ಪರ್‌ಸೆಂಟ್ ಬಗ್ಗೆ ಹೇಳಿದರು. ನಮ್ಮಲ್ಲೂ ಅದನ್ನೇ ಜಾರಿ ಮಾಡುತ್ತಿದ್ದೆವು. ಇದರ ಬಗ್ಗೆ ಯಾರಾದರೂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರೆ ಅದೂ ಬಿದ್ದುಹೋಗುತ್ತದೆ. ಆದ್ದರಿಂದ ಇದನ್ನು ಬಹಿರಂಗಪಡಿಸಲು ಇಷ್ಟಪಡುವುದಿಲ್ಲ. ಪ್ರತಿಜಿಲ್ಲಾವಾರು ಈ ಹಿಂದಿನ ಮೂರು ನಾಲ್ಕು ವರ್ಷಗಳಲ್ಲಿ ಯಾವ್ಯಾವ ಜಿಲ್ಲೆಗಳಿಗೆ ಡೆಂಟಲ್, ಮೆಡಿಕಲ್ ಸೀಟು ಎಷ್ಟೆಷ್ಟು ಹಂಚಿಕೆಯಾಗಿದೆ ಎಂಬ ಬಗ್ಗೆ ಮಾಹಿತಿ ಕೊಡುತ್ತಿದ್ದೇವೆ. ಅದರಲ್ಲಿ ಪ್ರತಿ ಜಿಲ್ಲೆಗೆ ಕನಿಷ್ಟ 30 ಪರ್‌ಸೆಂಟ್ ಬರುವ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಆದರೆ ಅದನ್ನು ಕಾನೂನು ಬದ್ಧವಾಗಿ ಮಾಡಲು ಬರುವುದಿಲ್ಲ. ನಾವು 30 ರಿಂದ 50 ಪರ್‌ಸೆಂಟ್‌ವರೆಗೆ ಕೊಡಬೇಕೆಂದು ನಮ್ಮ ನಿಯಮದಲ್ಲಿ ಹಾಕಿದ್ದೇವೆ. ಅನಂತರ ನಾವು ಐವತ್ತು ಪರ್‌ಸೆಂಟ್ ಮಾಡಿದರೂ ಯಾರಾದರೂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರೆ ಅದು ನಿಲ್ಲುವುದಿಲ್ಲ, ತಾವು ಈ ರೀತಿ ಮಾಡಲು ಬರುವುದಿಲ್ಲವೆಂದು ಕಾನೂನು ಇಲಾಖೆಯವರು

ಹೇಳಿದಮೇಲೆ ಅದನ್ನೂ ತಡೆಹಿಡಿದೆವು. ಈಗ ಯಾವುದೇ ನೇಮಕಾತಿ ಮಾಡುವಾಗ ಜಿಲ್ಲಾವಾರು, ವಿಭಾಗವಾರು ಮಾಡಲು ಆಗುವುದಿಲ್ಲ. ಭಾರತದ ಸಂವಿಧಾನದ ಪ್ರಕಾರ ವಿಧ್ಯಾಭ್ಯಾಸದಲ್ಲಾಗಲಿ, ನೇಮಕಾತಿಯಲ್ಲಾಗಲಿ ಜಿಲ್ಲಾವಾರು ಮಾಡಲು ಅವಕಾಶವಿಲ್ಲ. ಅದನ್ನು ತಾವು ಕ್ಲಾರಿಫೈ ಮಾಡಿಕೊಳ್ಳಿ. ಹಿಂದುಳಿದ ಭಾಗದವರಿಗೆ ಹೆಚ್ಚು ಪ್ರಾತಿನಿಧ್ಯಸಿಗಬೇಕೆಂದು ತಮಗೆಷ್ಟು ಕಾಳಜಿ ಇದೆಯೋ ಇಷ್ಟೇ ನಮಗೂ ಇದೆ. ಅದನ್ನು ಮಾಡಬೇಕೆಂದೇ ನಾವೆಲ್ಲಾ ಹೊರಟಿದ್ದೇವೆ. ಇದನ್ನು ಮಾಡಲು ಆಗುವುದಿಲ್ಲವೆಂದು ಕಾನೂನಿನ ತಡೆ ಬಂದಿರುವುದರಿಂದ ನಾವು ಇದನ್ನು ನಿಲ್ಲಿಸಿದ್ದೇವೆ. ತಾವು ಬೇರೆ ಯಾವುದಾದರೂ ರಾಜ್ಯದಲ್ಲಿ ಮಾಡಿದ್ದಾರೆ ಕಾನೂನಿನ ಇತಿಮಿತಿಯಲ್ಲಿ ಮಾಡ ಬಹುದೆಂದು ಸಲಹೆ ಕೊಡುವುದಾದರೆ ನಾವೂ ಕಾನೂನು ಇಲಾಖೆಯವರನ್ನು ಕೇಳಿ ಮಾಡಲು ಪ್ರಯತ್ನ ಮಾಡುತ್ತೇವೆ. ಸರ್ಕಾರ ಅದನ್ನು ಮಾಡಲು ಬಹಳ ಸಂತೋಷದಿಂದ ಮುಂದೆ ಬರುತ್ತದೆ.

ಶ್ರೀ ಡಿ. ಆರ್. ಪಾಟೀಲ್ : ತಮಗೆ ಗೊತ್ತಿರುವ ಹಾಗೆ ಗ್ರಾಮಾಂತರ ಪ್ರದೇಶದವರಿಗೆ ನೇಮಕಾತಿಯಲ್ಲಿ ಗ್ರೇಸ್ ಮಾರ್ಕ್ಸ್‌ನ್ನು ಕೊಡುತ್ತಿದ್ದಾರೆ. ಆ ರೀತಿ ಇದಕ್ಕೂ ಏನಾದರೂ ಗ್ರೇಸ್ ಮಾರ್ಕ್ಸ್‌ನ್ನು ಕೊಡುವ ವ್ಯವಸ್ಥೆ ಮಾಡಬೇಕು. ಆ ಮಾರ್ಕ್ಸ್‌ನಲ್ಲೇ ಸರಿಯಾಗುವಂತಾಗಲಿ. ಈ ಸಮಸ್ಯೆ ಬಗೆಹರಿಸಬೇಕೆಂದು ಸೀರಿಯಸ್ ಆಗಿ ವಿಚಾರ ಮಾಡಿದರೆ ದಾರಿ ಸಿಕ್ಕೇ ಸಿಗುತ್ತದೆ. ನಾವು ಕೇಳಿದಾಗ ಮಾತ್ರ ಇದಕ್ಕೆ ಉತ್ತರ ಕೊಡುವುದಾದರೆ ದಾರಿ ಸಿಗುವುದೇ ಇಲ್ಲ.

ಡಾ|| ಎಂ. ಶಂಕರ್‌ನಾಯಕ್ : ನಾವು ಮಾಡತಕ್ಕ ಮಾರ್ಕ್ಸ್, ಮತ್ತೊಂದು ಯಾವುದೂ ಸಹ ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದರೆ ನಿಲ್ಲುವುದಿಲ್ಲ. ಸರ್ಕಾರದ ಇತಿಮಿತಿಯಲ್ಲಿ ಮಾಡುತ್ತಿದ್ದೇವೆ. ಯಾವುದೇ ರಾಜ್ಯದಲ್ಲಿ ಅದನ್ನು ಮಾಡಿದ್ದರೆ ನಾವು ಮಾಡಲು ಸಿದ್ದರಿದ್ದೇವೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, It is a matter between State of Maharashtra and Maharashtra court. ಮಹಾರಾಷ್ಟ್ರದಲ್ಲಿ ಆ ರೀತಿಯಾಗಿದೆ ಎಂದಲ್ಲ, ತಾವೇನಾದರೂ ಇದರ ಬಗ್ಗೆ ಪ್ರಯತ್ನ ಮಾಡಿದ್ದೀರಾ? ಕೆಲವರು reactionary mentalities judges ಇರುತ್ತಾರೆ. ಕೆಲವರು ಬಹಳ ಪ್ರೊಗ್ರೆಸೀವ್ ಆಗಿರುತ್ತಾರೆ. ಆದರೆ ತಾವೇನು ಪ್ರಯತ್ನ ಮಾಡಿದ್ದೀರಿ? ಏಕೆಂದರೆ ತಾವು ಮತ್ತೆ ರೀಕೌನ್ಸಿಲಿಂಗನ್ನು ಮಾಡಬೇಕು. ಇದೇ ವರ್ಷದಲ್ಲಿ ಅದನ್ನು ಜಾರಿಯಲ್ಲಿ ತರಬೇಕು. ಅಡ್ಮಿಷನ್ ನಿಂತುಹೋಗಿದೆ.

ಶ್ರೀ ವಾಟಾಳ್ ನಾಗರಾಜ್ : ಈ ಹೊರನಾಡ ಕನ್ನಡಿಗರಿಗೆ ಇಂತಿಷ್ಟೇ ವೈದ್ಯಕೀಯ ಕಾಲೇಜಿನಲ್ಲಿ ಮತ್ತು ದಂತ ಕಾಲೇಜಿನಲ್ಲಿ ಸೀಟಗಳನ್ನು ಕೊಡಬೇಕೆಂದು ಹಿಂದೆ ಒಂದು ಸರ್ಕಾರದ ಆದೇಶ, ನೀತಿಯಾಗಿತ್ತು. ಆ ಬಗ್ಗೆ ತಮಗೆ ಏನಾದರೂ ಜ್ಞಾಪಕ ಇದೆಯಾ? ಏನಾದರೂ ಮಾಡಬೇಕು ಎನ್ನುವ ನೀತಿ ಇದೆಯಾ? ಏನಾದರೂ ಮಾಡುತ್ತೀರಾ? ಅವರಿಂದ ಬಹಳ ಒತ್ತಡ ಬರುತ್ತಿದೆ, ಕಾಸರಗೋಡ್‌ದಿಂದ, ಹೊಸೂರದಿಂದ, ತಾಳವಾಡಿದವರು ಬರುತ್ತಾ ಇದ್ದಾರೆ. ಈ

ರೀತಿ ಕೆಲವು ಸೀಟ್‌ಗಳಾದರೂ ಕರ್ನಾಟಕದಲ್ಲಿ ನಮಗೆ ಕೊಡಿ ಎಂದು ಕೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದ ನೀತಿ ಏನು, ಇದು ಒಂದು ಪ್ರಶ್ನೆ. ಈ ವೈದ್ಯಕೀಯ ದಂತ, ತಾಂತ್ರಿಕ ಕಾಲೇಜುಗಳು ಒಂದು ತರಹ ಕಂಠ ಶೋಷಣೆ ಆಗಿದೆ ಬಿಡಿ. ಇದನ್ನು ನಾವು ಹೇಳಿದರೂ ಏನು ಪ್ರಯೋಜನ ಆಗುವುದಿಲ್ಲ. ಕೋಟ್ಯಾಂತರ ರೂ. ಲೂಟಿ ಮಾಡತಕ್ಕಂಥಹ ಒಂದು ರೀತಿಯ ಪಾಳೇಗಾರರಂತೆ ಆಗಿವೆ. ಇವುಗಳನ್ನು ಯಾರೇ ನಡೆಸಲಿ ಅದು ಖಾಸಗಿಯವರು ಆಗಿರಬಹುದು. ಯಾರೇ ಆಗಿರಬಹುದು. ಆದರೆ ಇಲ್ಲಿ ಒಂದು ದೊಡ್ಡ ದುರಂತವೇ ನಡೆಯುತ್ತಾ ಇದೆ. ಇದೆಲ್ಲಾ ಸೇರಿಸಿ ನೀವು ರಾಷ್ಟ್ರೀಕರಣ ಮಾಡುವಂತಹ ಚಿಂತನೆ ತಮ್ಮ ತಲೆಯಲ್ಲಿ ಇದೆಯೇ ಎನ್ನುವಂತಹ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಿ.

ಡಾ|| ಶಂಕರ್ ನಾಯಕ್ : ಮಾನ್ಯ ಅಧ್ಯಕ್ಷರೆ, ಈ ಗಡಿನಾಡು ಸೀಟ್‌ಗಳ ಹಂಚಿಕೆ ಹಿಂದೆ ಇದ್ದವು ಎಂದು ನಾನು ಕೇಳಿದ್ದೇನೆ. ಇತ್ತೀಚಿನ ದಿನಗಳಲ್ಲಿ ಅದು ಇಲ್ಲ. ಆದರೆ ಅದಕ್ಕೆ ಬೇಡಿಕೆ ಇದೆ ಅನೇಕ ಜನ ಬಂದು ನನ್ನನ್ನೂ ಕೇಳಿದ್ದಾರೆ. ಅದರ ಬಗ್ಗೆ ಸರ್ಕಾರದಲ್ಲಿ ಚಿಂತನೆ ಮಾಡಿ ಪರಿಗಣಿಸಲು ಆಗುತ್ತದೆಯೇ ಇಲ್ಲವೇ ಎಂದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಸಚಿವರ ಉತ್ತರವನ್ನು ಬಹಳ ದೀರ್ಘವಾಗಿ ಕೇಳಿದ್ದೇನೆ. ಆದರೆ ನಾವು ಏನು ಆತಂಕವನ್ನು ವ್ಯಕ್ತಪಡಿಸಿದ್ದೇವೆ, ಅದು ಯಾವುದಕ್ಕೂ ಅವರು ಸಮರ್ಥ ರೀತಿಯಲ್ಲಿ ಉತ್ತರ ಕೊಟ್ಟಿಲ್ಲ. It is not heroic on the state's part to perpetuate its own errors and its own mistakes. ಹಿಂದೆ ಆಗಿತ್ತು ಎಂದು ಹೇಳುತ್ತಾರೆ. ಸರ್ಕಾರ ಎಷ್ಟು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿತ್ತು ಅದನ್ನು ತೆಗೆದುಕೊಳ್ಳದೆ, ಹಿಂದೆ ಎಚ್ಚರಿಕೆಯನ್ನು ಕೊಟ್ಟರೂ ಕೂಡ ಅದನ್ನು ಗಮನಿಸದೆ, ಬಹಳ ಕ್ಯಾಷುಯಲ್ ಆಗಿ ಉಡಾಫೆತನದಿಂದ ಇವತ್ತು ಎಷ್ಟು ವಿದ್ಯಾರ್ಥಿಗಳಿಗೆ ಅಂಧಕಾರವನ್ನು ಎರೆಚಿದ್ದೀರಿ ಅದನ್ನು ಪ್ರತಿಭಟಿಸಿ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಶ್ರೀ ಎಸ್. ಸುರೇಶ್ ಕುಮಾರ್ ಮತ್ತು ಶ್ರೀ ಎ. ರಾಮದಾಸ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ ಆರ್ಟಿಕಲ್ 371 ಎಂದು ಹೇಳುತ್ತಾರಲ್ಲಾ, ಈ ಕಲಂ 371ಕ್ಕೆ ಮಹಾರಾಷ್ಟ್ರದ ಸಲುವಾಗಿ, ಆಂಧ್ರದ ಸಲುವಾಗಿ ಬೇರೆ ಬೇರೆ ರಾಜ್ಯದ ಸಲುವಾಗಿ ಅಮೆಂಡ್‌ಮೆಂಟ್ ಕೇಂದ್ರ ಸರ್ಕಾರ ಮಾಡಿದೆ, ಆ ಅಮೆಂಡ್‌ಮೆಂಟ್ ಮಾಡಬೇಕಾದರೆ ರಾಜ್ಯ ಸರ್ಕಾರದವರು ರೆಸಲ್ಯೂಷನ್ ಮಾಡಿಕೊಂಡು ಮಾಡುತ್ತಾರೆ, ಇಲ್ಲಿ ತಾವಾಗಿಯೇ ಮಾಡಲು ಬರುವುದಿಲ್ಲ. ಆ ಕಾಲದಲ್ಲಿ ಮಹಾರಾಷ್ಟ್ರದವರು ಏನಾದರೂ ಪ್ರಭಾವವಿರಬಹುದು. ಅದರ ಸಲುವಾಗಿ ಮಾಡಿದ್ದಾರೆ. ಆಂಧ್ರ ಸರ್ಕಾರದ ಪ್ರಭಾವ ಕೇಂದ್ರ ಸರ್ಕಾರದ ಮೇಲೆ ಇರಬಹುದು,

ಅದಕ್ಕಾಗಿ ಮಾಡಿದ್ದಾರೆ. ನಮ್ಮ ಸರ್ಕಾರದವರು ಯಾರಾದರೂ ಪ್ರಭಾವ ಬೀರಿದ್ದಾರೋ ಇಲ್ಲವೋ ಗೊತ್ತಿಲ್ಲ, ಆದ್ದರಿಂದ ಕರ್ನಾಟಕ ಸರ್ಕಾರದ ವತಿಯಿಂದ ಕಲಂ 371ಕ್ಕೆ ಅಮೆಂಡ್‌ಮೆಂಟ್ ಮಾಡುವ ಸಲುವಾಗಿ ರೆಸಲ್ಯೂಷನ್ ಮಾಡಲು ಸರ್ಕಾರ ತಯಾರು ಇದೆಯೇ ಇಲ್ಲವೇ ಎಂಬುದನ್ನು ಹೇಳಬೇಕು.

ಡಾ|| ಎಂ. ಶಂಕರ್‌ನಾಯಕ್ : ಮಾನ್ಯ ಅಧ್ಯಕ್ಷರೆ, ಈಗ ನಾವು ಎಲ್ಲಾ ರಾಜ್ಯಗಳ ಆರೋಗ್ಯ ಸಚಿವರನ್ನು ಕರೆಸಿ ಕೆಎಂಸಿ ಆಕ್ಟ್ ಅಮೆಂಡ್ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಕಾನೂನು ತರಬೇಕೇ ಎನ್ನುವುದರ ಬಗ್ಗೆ ಚಿಂತನೆ ನಡೆಯುತ್ತಾ ಇದೆ. ಎಲ್ಲಾ ರಾಜ್ಯದ ಆರೋಗ್ಯ ಸಚಿವರನ್ನು ಕರೆದು ಸಭೆ ಮಾಡಿ ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 11ಗಂಟೆಗೆ ಚಿಂತಾಮಣಿ ತಾಲ್ಲೂಕು ಬಿಲ್ಲಾಳ್ ಹಳ್ಳಿಯಲ್ಲಿ ದಲಿತರ ಸಭೆ ನಡೆಯುತ್ತಾ ಇತ್ತು. ಆ ಸಂದರ್ಭದಲ್ಲಿ ಗಲಾಟೆಯಾಗಿ ಸುಮಾರು 3 ಜನ ಪೋಲಿಸರು ಸತ್ತಿರುತ್ತಾರೆ, 20 ಜನರಿಗೆ ತೀವ್ರ ಗಾಯವಾಗಿದೆ ಎಂದು ಗೊತ್ತಾಗಿದೆ, ಅದರ ಬಗ್ಗೆ ಹೇಳಬೇಕು.

ಗೃಹ ಸಚಿವರ ಹೇಳಿಕೆ

ಚಿಂತಾಮಣಿಯಲ್ಲಿ ನಡೆದ ಗೋಲಿಬಾರ್ :

+ ಶ್ರೀ ಆರ್. ರೋಷನ್ ಬೇಗ್ (ರಾಜ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ವ್ಯಾಪ್ತಿಯಲ್ಲಿ ತುಂಗಂಪಲ್ಲಿ ಎಂದು ಊರು ಕೆಂಚಾನಹಳ್ಳಿ ಪೋಲೀಸ್ ಸ್ಟೇಶನ್ ವ್ಯಾಪ್ತಿಯಲ್ಲಿ ಚಿಂತಾಮಣಿಯಿಂದ 40ಕಿ.ಮೀ. ದೂರ, ಕೆಂಚಾನ್ ಹಳ್ಳಿಯಿಂದ 15 ಕಿ.ಮೀ. ದೂರದಲ್ಲಿ, ಇವತ್ತು ಬೆಳಿಗ್ಗೆ ಆ ಊರಿನ ದಲಿತ ಸಂಘರ್ಷ ಸಮಿತಿಯ ಸುಮಾರು 500 ಜನ ಅಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಬೇಕೆಂದು ಸೇರಿದರು, ಆಗ ಆ ಊರಿನ ಇನ್ನೊಂದು ಜನಾಂಗದವರೊಂದಿಗೆ ಗಲಾಟೆಯಾಗಿದೆ ಅಲ್ಲಿ ಪೋಲಿಸ್‌ನವರು ಮಧ್ಯ ಪ್ರವೇಶ ಮಾಡಿದಾಗ ಅವರ ಎರಡು ವ್ಯಾನ್‌ಗಳನ್ನು ಸುಟ್ಟು ಹಾಕಿದ್ದಾರೆ ಮತ್ತು 3ಜನ ಪೋಲಿಸಿನವರು ತೀವ್ರವಾಗಿ ಗಾಯಗೊಂಡು ತೀರಿಕೊಂಡರು, ಅವರ ಹೆಸರು ನರಸಿಂಹ ಎಂದು ಪೋಲಿಸ್ ಕಾನ್‌ಸ್ಟೇಬಲ್, ಅಬ್ದುಲ್ ರಶೀದ್ ಎಂದು ಹೆಡ್ ಕಾನ್‌ಸ್ಟೇಬಲ್, ಸುಧಾಕರ ಪೋಲಿಸ್ ಕಾನ್‌ಸ್ಟೇಬಲ್. ಇಲ್ಲಿ ಸುಧಾಕರ ರೆಡ್ಡಿ ಎನ್ನುವ ಸಿವಿಲಿಯನ್ ಕೂಡ ತೀರಿಕೊಳ್ಳುತ್ತಾರೆ. ಸುಮಾರು 12 ಜನ ಗಾಯಗೊಂಡಿದ್ದಾರೆ. They have been treated as out-patients Head constable, he is still serious. Correct picture about the causes and other details will be known after the receipt of report from DGP, SP. ಅಲ್ಲಿ ಎಡಿಜಿ ಯವರು ಹೋಗಿ ಏನು ಆಯಿತು, ಹೇಗೆ ಆಯಿತು ಎಂದು ವಿವರವನ್ನು ಸ್ವಲ್ಪ ಸಮಯದಲ್ಲಿ ಕಳುಹಿಸುತ್ತಾರೆ.